ದುಡಿವ ಜನರ ಪ್ರಾಣ ಮಿತ್ರ


# ಐಕ್ಯರಂಗ

ಸಂಪುಟ 26 ಸಂಚಿಕೆ 43 ಅಕ್ಟೋಬರ್ 24, 2004 ಬೆಲೆ ರೂ. 3.00



## ಅಗ್ಗದ ಅಕ್ಕಿ ಗೋಧಿ ಅದ್ವಾನ
## ನೇರ ಸಂಘರ್ಷಕ್ಕೆ ಆಹ್ವಾನ





## ಅಮೆರಿಕನ್ ಏಜೆನ್ಸಿಗೆ ಅದ್ವಾಣಿ ವಕಾಲತ್ತು

## ಪರ್ಯಾಯ ರಾಜಕಾರಣದ ರಾಜಕೀಯ

## ದತ್ತ ಜಯಂತಿ ವಿಕೃತ ಆಚರಣೆಗೆ ಅವಕಾಶ ಬೇಡ

## ಬೀದರ್ : ಬಿಜೆಪಿಗೆ ಮುಖಭಂಗ

- ಜನತೆಯ ಹಿತವೇ ಎಡಶಕ್ತಿಗಳ ಅಜೆಂಡಾ
- ಬಸ್ ಪ್ರಯಾಣ ದರ - ಜನರ ಮೇಲೆ ಪ್ರಹಾರ
- ಅಫಘಾನಿಸ್ತಾನದ ಚುನಾವಣೆಗಳಿಗೆ ಅಮೆರಿಕಾ ಅವಸರ



**ಇಂತಹುದೇ ಕೆಲಸವೆಂಬ ಭೇದವಿಲ್ಲದೇ, ಹಗಲಿರುಳೂ ದುಡಿವ ಮಹಿಳೆಯರ ಸ್ಥಿತಿ ಹೇಳತೀರದು. ಅದು ಭಾರತ - ಪಾಕಿಸ್ತಾನ ಅಥವಾ ಇನ್ಯಾವುದೇ ದೇಶವಾದರೂ... ದುಡಿವ ಮಹಿಳೆಯರ ಬದುಕಿನ ಬವಣೆಗಳತ್ತ ಅನಾವರಣಗಳಸಿದ ಚಿಂತನೆ ಇಲ್ಲಿದೆ.**

# ದುಡಿಯುವ ಮಹಿಳೆಯರ ಬವಣೆ ತಪ್ಪದೆ ?

ದುಡಿಯುವ ಮಹಿಳೆಯರು ಮನೆಯ ಹೊರಗೆ ಹಾಗೂ ಮನೆಯ ಒಳಗೆ ಎರಡೂ ಕಡೆ ಕೆಲಸ ಮಾಡಬೇಕಿರುವುದರಿಂದ ಪುರುಷರಷ್ಟು ವಿರಾಮ ಅವರಿಗೆ ದೊರೆಯುವುದಿಲ್ಲ. ಮಹಿಳೆಯರು ಪುರುಷರಿಗೆ ಸರಿಸಟಿಯಾಗಿ ಕೆಲಸ ಮಾಡಿದರೂ ಸಹ ಅವರಿಗೆ ಸಿಗುವ ಕೂಲಿ ಮಾತ್ರ ಸರಿಸಮಾನವಾಗಿರುವುದಿಲ್ಲ. ಕೆಲವೊಂದು ಕಾರ್ಖಾನೆಗಳಾದ ಗಾರ್ಮೆಂಟ್ಸ್, ಸರ್ಜಿಕಲ್ ಉಪಕರಣಗಳು, ಇತ್ಯಾದಿಗಳಲ್ಲಿ ಮೃದು ಕೈಗಳಿಂದ ಚುರುಕಾಗಿ ಕಾರ್ಯನಿರ್ವಹಿಸಬೇಕಿರುವುದರಿಂದ ಪುರುಷರಿಗೆ ಬದಲಾಗಿ ಮಹಿಳೆಯರಿಗೆ ಪ್ರಥಮ ಆದ್ಯತೆ ನೀಡಿದರೂ ಅಂತಹದೇ ಸ್ಥಳಗಳಲ್ಲಿ ಕೆಲಸ ಮಾಡುವ ಪುರುಷರ ಸರಿಸಮಾನವಾಗಿ ಸಂಬಳ ಕೊಡದಿರುವುದು ನಮ್ಮ ವ್ಯವಸ್ಥೆಯಲ್ಲಿನ ವೈರುಧ್ಯತೆಯೇ ಸರಿ. ಕೃಷಿ ರಂಗದಲ್ಲಿ ಬೆಳೆ ಕುಯಿಲು ಮಾಡುವ ಕೆಲಸದಿಂದ ಹಿಡಿದು ಹಸು ಸಾಕುವುದು, ಕಳೆ ಕೀಳುವುದು, ನಾಟಿ ಕೆಲಸ, ಡೈರಿ ಕೆಲಸ, ಕೊಟ್ಟಿಗೆ ಕೆಲಸ ಮತ್ತು ಭೂಮಿಯನ್ನು ಹದಗೊಳಿಸುವುದು, ಜೊತೆಗೆ ಮನೆಗೆಲಸ, ಇವೆಲ್ಲದರ ಹೊರೆಯನ್ನು ಮಹಿಳೆ ಹೊರಬೇಕು. ಕೈಗಾರಿಕಾ ರಂಗದಲ್ಲೂ ಸಹ ಕಾರ್ಖಾನೆಯಿಂದ ಆರಂಭಿಸಿ ಕಛೇರಿಗಳವರೆಗೆ, ಇಟ್ಟಿಗೆ ಸುಡುವ ಕೆಲಸದಿಂದ ಕಟ್ಟಡ ಕೆಲಸದವರೆಗೆ ಮತ್ತು ಜವಳಿ ಕಾರ್ಖಾನೆಯಿಂದ ಬೀದಿ ಮಾರಾಟದವರೆಗೆ ಇಂದಿನ ಮಹಿಳೆಯರು ಹೆಚ್ಚಿನ ಕೆಲಸದ ಹೊರೆಯಲ್ಲಿ ಭಾಗಿಯಾಗಿದ್ದಾರೆ.

ಒಂದು ದೇಶದ ಆರ್ಥಿಕ ಬೆಳವಣಿಗೆಗೆ ನೇರವಾಗಿ ಪುರುಷರಿಗಿಂತ ಮಹಿಳೆಯರು ಹೆಚ್ಚು ಕಾರಣರಾಗಿದ್ದರೂ ಸಹ ಮಹಿಳೆಯರು ಕೆಲಸ ಮಾಡುವ ಸ್ಥಳಗಳೇನೂ ಆರೋಗ್ಯಕರವಾದ ಮತ್ತು ಸುರಕ್ಷಿತವಾದ ಪರಿಸರವನ್ನೊಂದಿಲ್ಲ. ಕೆಲಸದ ಸ್ಥಳಗಳಲ್ಲಿ ಸುರಕ್ಷತಾ ವಿಧಾನಗಳನ್ನು ಮತ್ತು ಉಪಕರಣಗಳ ಸೌಲಭ್ಯ ಒದಗಿಸಿಲ್ಲದ ಕಾರಣದಿಂದಾಗಿ ದೈಹಿಕ ಹಿಂಸೆಗಳಿಂದ ನರಳಿದರೆ ಲೈಂಗಿಕ ಹಿಂಸೆ ಮತ್ತು ಕಿರುಕುಳಗಳಿಂದಾಗಿ ಮಾನಸಿಕವಾಗಿಯೂ ಜರ್ಜರಿತ ರಾಗುತ್ತಾರೆ. ಉದಾಹರಣೆಯಾಗಿ, ಮಹಿಳೆಯರೇ ಪ್ರಧಾನ ಸಂಖ್ಯೆಯಲ್ಲಿ ಕಾರ್ಮಿಕರಾಗಿರುವ ಪಾಕಿಸ್ತಾನದ ಕೆಲಸ ಸ್ಥಳಗಳಲ್ಲಿ ಅಪಾಯಕಾರಿ ಕೆಲಸ-ಕಾರ್ಯಗಳಲ್ಲಿ ಪುನರಾವರ್ತಿತವಾಗಿರುವ ಅನೇಕ ಘಟನಾವಳಿಗಳು ಜ್ವಲಂತ ಸಾಕ್ಷಿಯಾಗಿವೆ. ಮಹಿಳೆಯೊಬ್ಬಳ ಕೈ ಬೆರಳುಗಳು ತಿರುಗುವ ಗಾಲಿಗೆ ಸಿಕ್ಕು ತುಂಡರಿಸಿ ರಕ್ತ ಸೋರುತ್ತಿದ್ದರೂ ಯಾರೊಬ್ಬರು ಅವಳ ಸಹಾಯಕ್ಕೆ ಧಾವಿಸಿ ಬರಲಿಲ್ಲ. ಏಕೆಂದರೆ ಸಹ ಕಾರ್ಮಿಕರೂ ಸಹ ಅದೇ ಅಪಾಯಕಾರಿ ಕೆಲಸವನ್ನು ನಿರ್ವಹಿಸಬೇಕು ಮತ್ತು ಇಂತಹ ಘಟನೆಗಳು ಸಾಮಾನ್ಯವಾಗಿದ್ದು, ದೈನಂದಿನ ಉತ್ಪಾದನೆಯು ನಿಗದಿತ ಮಟ್ಟಕ್ಕಿಂತ ಕುಂಠಿತವಾದರೆ ಅವರನ್ನೂ ಸಹ ಕೆಲಸದಿಂದ ತೆಗೆದು ಹಾಕುವರೆಂಬ ಭಯವಿತ್ತು. ಮತ್ತೊಂದು ಘಟನೆಯಲ್ಲಿ ಕರಾಚಿಯಲ್ಲಿನ ರಫ್ತು ಉತ್ತೇಜನಾ ವಲಯದಲ್ಲಿ ಸ್ಥಾಪಿತವಾಗಿರುವ 'ಎಕ್ಸ್‌ಪೀರಿಯನ್ಸ್ ಗಾರ್ಮೆಂಟ್ಸ್' ಕಾರ್ಖಾನೆಯಲ್ಲಿ ಮಹಿಳಾ ವ್ಯವಸ್ಥಾಪಕರು ವಿನಾಕಾರಣ ಅಲ್ವಿನಾ ಎಂಬ ಮಹಿಳಾ ನೌಕರೆಯನ್ನು ಹಿಂಸಿಸಿದರು. ಉರಿಯುವ ಗಾಯಕ್ಕೆ ಉಪ್ಪು ಸವರುವಂತೆ ಆ ದುಡಿವ ಮಹಿಳೆಯನ್ನು ತಕ್ಷಣದಿಂದಲೇ ನೌಕರಿಯಿಂದ ವಜಾ ಸಹ ಮಾಡಲಾಯಿತು. ಆದರೆ ವಿವಿಧ ಕಾರ್ಮಿಕ ಸಂಘಟನೆಗಳ ಮತ್ತು ಮಹಿಳಾ ಸಂಘಟನೆಗಳ ಒತ್ತಾಯಕ್ಕೆ ಮಣಿದು ಕೆಲಸಕ್ಕೆ ಇಷ್ಟೆಲ್ಲಾ ಕಾರ್ಮಿಕ- ವಿರೋಧಿನೀತಿಯನ್ನು ಪಾಲಿಸುತ್ತಿರುವ ಆ ಕಾರ್ಖಾನೆಯ ವಿರುದ್ಧ ಯಾವುದೇ ರೀತಿಯ ನ್ಯಾಯಾಲಯ ಕಟ್ಲೆ ಅಥವಾ ಪರಿವೀಕ್ಷಣೆಯನ್ನು ಸರ್ಕಾರ ಮಡದಿರುವುದು ಸರ್ಕಾರವು ಹೇಗೆ ಬಂಡವಾಳಶಾಹಿಯನ್ನು ಬೆಂಬಲಿಸುತ್ತದೆ ಎನ್ನುವುದಕ್ಕೆ ರಾಚುವ ಸಾಕ್ಷಿಯಾಗಿದೆ. ಇಂತಹ ಅದೆಷ್ಟೋ ಘಟನೆಗಳು, ಪ್ರತಿ ತಿಂಗಳಲ್ಲೂ ದುಡಿವ ಮಹಿಳೆಯರ ಮಾನಸಿಕ ಹಿಂಸೆ, ಅತ್ಯಾಚಾರ ಮತ್ತು ಅಪಹರಣಗಳ ಸುದ್ದಿಗಳ ಪಾಕಿಸ್ತಾನಿ ಮಾಧ್ಯಮದಲ್ಲಿ ವರದಿಯಾಗುತ್ತವೆ.

> **ಕಣ್ಣೀರು ಅನುಭವ**
>
> ಎಲ್ಲಿಂದ ಬರುತಿಹುದು ಕಣ್ಣೀರು ಗೊತ್ತೆ?
> ಹಗಲಿರುಳು ಸುರಿಸಿದರು ಬತ್ತದ್ದೆ ಮತ್ತೆ
> ಶುದ್ಧ ನೀರೂ ಸಿಗದ ಬಡಜನರ ಬಾಳು
> ಕಣ್ಣೀರಿನಲ್ಲಿಯೇ ಕೈತೊಳೆವ ಗೋಳು
>
> - ವಿಡಂಬಾರಿ

ಕೆಲವೊಂದು ಸಮೀಕ್ಷೆಗಳ ಪ್ರಕಾರ ಸಿಂಧ್ ಪ್ರಾಂತ್ಯದಲ್ಲಿ 10,000 ಕುಟುಂಬಗಳಿಗಿಂತಲೂ ಹೆಚ್ಚು ಸಂಖ್ಯೆ ಯಲ್ಲಿ ಜೀತಕಾರ್ಮಿಕರಾಗಿದ್ದಾರೆ, ಇದೇ ಸಂಖ್ಯೆಯಷ್ಟು ಜನ ಪಂಜಾಬ್ ಪ್ರಾಂತ್ಯದ ಇಟ್ಟಿಗೆ ಸುಡುವ ಕಾರ್ಖಾನೆಯಲ್ಲಿ ಜೀತ ಕಾರ್ಮಿಕರಾಗಿದ್ದಾರೆ. ಇದರಲ್ಲಿ ಅರ್ಧಕ್ಕರ್ಧ ಮಹಿಳೆಯರೇ ಇದ್ದರೆ. ಗಾರ್ಮೆಂಟ್ಸ್ ಮತ್ತು ಬಲೆ ತಯಾರಿಕೆಯಲ್ಲಿ ಮಹಿಳೆಯರು ಸರಿಸಮಾನ ಕೆಲಸ ಮಾಡಿದರೂ ಸಹ ಅವರ ಕೂಲಿಗಳು ಪುರುಷರಿಗಿಂತ ಶೇ.30 ರಷ್ಟು ಕಡಿಮೆಯಿದೆ. ಪಾಕಿಸ್ತಾನವೇ ಏಕೆ ಬೆಂಗಳೂರಿನಲ್ಲಿರುವ ಹಲವಾರು ಕೈಗಾರಿಕಾ ಪ್ರದೇಶಗಳಿಗೆ ಒಂದು ಬಾರಿ ಭೇಟಿಯಿತ್ತರೆ ಸಾಕು ಮಹಿಳೆಯರ ಕಾರ್ಮಿಕ-ಜೀವನ ಎಷ್ಟು ದುಸ್ತರ ವಾಗಿದೆಯೆಂದು ಮನವರಿಕೆಯಾದೀತು. ಆಮ್ಲಯುಕ್ತ ನೀರಲ್ಲಿ ತೊಳೆಯುವ ಕೆಲಸ ಮಾಡುವ ಮಹಿಳೆಯರ ಕೈ ಚರ್ಮ ಸುಟ್ಟಿರುವುದು, ಸೀಸಯುಕ್ತ ವಿಷಕಾರಿ ಗಾಳಿ ಸೇವನೆಯಿಂದ ಶ್ವಾಸಕೋಶ ತೊಂದರೆ, ಸಯನೈಡ್ ವಿಸರ್ಜನೆಯಿಂದ ಆರೋಗ್ಯನಾಶ, ಇತ್ಯಾದಿ ಚಿತ್ರಣಗಳು ಮನಕಲಕಿ ಕಣ್ಣೀರು ತರುತ್ತವೆ.

ಮಹಿಳಾ ಕಾರ್ಮಿಕ - ವಿರೋಧಿ ವಾತಾವರಣ ದಿಂದ ದೇಶದಲ್ಲಿನ ದುಡಿವ ಮಹಿಳೆಯರ ಬವಣೆ ಮುಗಿಲು ಮಟ್ಟಿದೆ. ಸಮಾನ ಅಂತಸ್ತು ಮತ್ತು ಹಕ್ಕುಗಳನ್ನು ಸಂವಿಧಾನ ನೀಡಿದ್ದರೂ ಸಹ ಬಹುತೇಕ ಮಹಿಳೆಯರು ಅನ್ಯಾಯ, ತಾರತಮ್ಯ ಮತ್ತು ದಬ್ಬಾಳಿಕೆಯಿಂದ ನರಳುತ್ತಿದ್ದಾರೆ.

**ಕಾರ್ಮಿಕ ಕಾನೂನುಗಳನ್ನು ಬದಲಿಸುವ ಅಗತ್ಯವಿದೆ :**

ಮಹಿಳಾ ಕಾರ್ಮಿಕರ ಹಕ್ಕುಗಳನ್ನು ಕಾಪಾಡಲು, ಅದರಲ್ಲೂ ವಿಶೇಷವಾಗಿ ಸಮಾನ ಅವಕಾಶ ಮತ್ತು ಸಮಾನ ಕೂಲಿ ಒದಗಿಸಲು ಕಾರ್ಮಿಕ ಕಾನೂನುಗಳನ್ನು ಮತ್ತು ಕಾರ್ಖಾನೆ ಕಾಯಿದೆಗಳನ್ನು ಬದಲಿಸುವ ಅತ್ಯಗತ್ಯವಿದೆ. ಅನೌಪಚಾರಿಕ ವಲಯಗಳಲ್ಲಿ ಮತ್ತು ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವವರಿಗೆ ಯಾವುದೇ ಕಾನೂನಿನ ಬೆಂಬಲವಿಲ್ಲ ಹಾಗೂ ಹೆರಿಗೆ ರಜೆ ಪಡೆಯಲೂ ಸಹ ಅಸಾಧ್ಯವಾಗಿದೆ. ಎಲ್ಲಾ ಕಾರ್ಮಿಕರ ಜೀವನ ರಕ್ಷಣೆ ಮಾಡುವ ಸಲುವಾಗಿ ಕಾರ್ಮಿಕ ಕಾನೂನುಗಳನ್ನು ಬದಲಾಯಿಸಬೇಕು ಮತ್ತು ಯಾವುದೇ ಪಕ್ಷಪಾತವಿಲ್ಲದೆ ಕಾರ್ಯರೂಪಕ್ಕಿಳಿಸಬೇಕು. ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಗುರುತರವಾದ ಕಾರ್ಯವನ್ನು ಮಾಡುತ್ತಿರುವವರೆಂದರೆ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಗುಣಮಟ್ಟಗಳು ಹಾಗೂ ಮಹಿಳೆಯ ಮೇಲಿನ ತಾರತಮ್ಯ ನಿರ್ಮೂಲನಾ ಸಮಾವೇಶಗಳು, ಮಹಿಳೆಗೆ ಸಮಾನ ಹಕ್ಕನ್ನು ನೀಡುವ ಪ್ರಶ್ನೆಯು ಪ್ರಾಥಮಿಕ ಮಾನವ ಹಕ್ಕಿನ ವಿಷಯವೇ ಆಗಿದೆ. **ಒಂದು ಸಮಾಜದ ಮಹಿಳಾ ಕಾರ್ಮಿಕರು ಮರ್ಯಾದೆ ಮತ್ತು ಗೌರವಯುತ ಜೀವನ ನಡೆಸಬೇಕಾದರೆ ಆ ಸಮಾಜವು ಈ ಸಮಸ್ಯೆಗಳನ್ನು ಪ್ರಥಮ ಆದ್ಯತೆಯಿಂದ ಪರಿಹರಿಸಬೇಕು.**

ಕೂಲಿ ಮತ್ತು ಉದ್ಯೋಗಾವಕಾಶಗಳಲ್ಲಿ ಮಹಿಳೆಯರಿಗಿರುವ ತಾರತಮ್ಯ ಬರೇ ತೃತೀಯ ರಾಷ್ಟ್ರಗಳಿಗೆ ಮಾತ್ರ ಸೀಮಿತವಾಗಿಲ್ಲ. 2003 ನೇ ವರ್ಷದ ಜರ್ಮನಿ ಫೆಡರಲ್ ಅಂಕಿ ಅಂಶಗಳ ಕಛೇರಿಯು ವರದಿ ಮಾಡಿರುವಂತೆ ಜರ್ಮನ್ ಮಹಿಳೆಯ ಸರಾಸರಿ ತಿಂಗಳ ಸಂಬಳವು ಪುರುಷರಿಗಿಂತ ಶೇ.30 ರಷ್ಟು ಕಡಿಮೆಯಿದೆ. ಆರ್ಥಿಕ ಮತ್ತು ಸಾಮಾಜಿಕ ಸಂಶೋಧನಾ ಸಂಸ್ಥೆಯ ಅಧ್ಯಯನದಿಂದ ತಿಳಿದು ಬಂದಂತೆ ಅದಿಕ ಸಂಖ್ಯೆಯಲ್ಲಿ ಖಾಸಗಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಕಾರ್ಮಿಕ ಸಂಘಟನೆಗಳ ಅನುಪಸ್ಥಿತಿ ಇದೆಯೋ ಅಲ್ಲಿ ಮಾತ್ರ ಪುರುಷ ಮತ್ತು ಮಹಿಳೆಯರ ಸಂಬಳದ ನಡುವಿನ ಅಂತರ ಬಹಳ ಹೆಚ್ಚಾಗಿರುವುದು ಕಂಡುಬರುತ್ತದೆ.

○

## ಬಿಜೆಪಿ ಸೋಲು ಜನವಿರೋಧಿ, ಕೋಮುವಾದಿ ರಾಜಕಾರಣದ ತಿರಸ್ಕಾರ ಈ ಫಲಿತಾಂಶ

ಬೀದರ್ ಲೋಕಸಭಾ ಉಪಚುನಾವಣೆಯಲ್ಲಿ ಕೋಮುವಾದಿ ಬಿಜೆಪಿಯನ್ನು ನಿರ್ಣಾಯಕವಾಗಿ ಸೋಲಿಸಿರುವ ಮತದಾರರನ್ನು ಅಭಿನಂದಿಸಿರುವ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯು 'ಕರ್ನಾಟಕದ ಜನತೆಯ ಮನಸ್ಸಿನ ಕನ್ನಡಿ ಈ ಫಲಿತಾಂಶ' ಎಂದು ವಿಶ್ಲೇಷಿಸಿದೆ. ಇದು ಬಿಜೆಪಿಯನ್ನು ಸೋಲಿಸಬೇಕೆಂದು ಕರೆ ನೀಡಿದ ಪಕ್ಷದ ನಿಲುಮೆಗೆ ಅನುಗುಣವಾಗಿದೆ ಎಂದಿದೆ.

ಬೀದರ್‌ನಲ್ಲಿ ಬಿಜೆಪಿಯು ಸತತವಾಗಿ ಐದುಬಾರಿ ಗೆದ್ದಿದ್ದ ಕ್ಷೇತ್ರ. ಮಾತ್ರವಲ್ಲ ಒಂದೊಮ್ಮೆ ಆರು ಶಾಸಕರನ್ನು ಹೊಂದಿದ್ದು ಈ ಬಾರಿ ಸೋತಿರುವುದು ಗಮನಾರ್ಹ. ಅಭಿವೃದ್ಧಿ, ಜನರ ಜ್ವಲಂತ ಸಮಸ್ಯೆಗಳನ್ನು ಲೋಕಸಭೆಯಲ್ಲಿ ಎತ್ತದೇ, ನಿರ್ಲಕ್ಷಿಸಿ, ಸಂಸದೀಯ ಕಲಾಪಗಳನ್ನು ಅಸ್ತವ್ಯಸ್ತ ಗೊಳಿಸುತ್ತಲೇ ಬಂದ ಬಿಜೆಪಿಯನ್ನು ಜನರು ತಿರಸ್ಕರಿಸಿದ್ದಾರೆ. ಕಳೆದ ಚುನಾವಣಾ ಫಲಿತಾಂಶದಿಂದ ಪಾಠ ಕಲಿಯದ,

**ಬೀದರ್ ಚುನಾವಣೆ**

'ಹಿಂದುತ್ವಕ್ಕೆ' ಮರಳುವುದಾಗಿ ಹೇಳಿದ ಬಿಜೆಪಿಯನ್ನು ಒಪ್ಪುವುದಿಲ್ಲವೆಂದು ಜನತೆ ಸ್ಪಷ್ಟವಾಗಿ ನಿರಾಕರಿಸಿದೆ.

ಕರ್ನಾಟಕದ ಜನತೆಯ ಈ ಮನೋಭಾವ ವನ್ನು ಎಲ್ಲಾ ಜಾತ್ಯತೀತ ಶಕ್ತಿಗಳು ಅರಿಯ ಬೇಕು. ಕಳೆದ ಚುನಾವಣೆಯಲ್ಲಿ ಬಿಜೆಪಿ 79 ಸ್ಥಾನ ಪಡೆದರೂ ಕೂಡಾ ಎಸ್.ಎಂ.ಕೃಷ್ಣ ಸರ್ಕಾರದ ನೀತಿಗಳ ವಿರುದ್ಧ ಜನ ನೀಡಿದ ಮತ ಎಂಬುದನ್ನು ಮನಗಾಣಬೇಕು. ಬಿಜೆಪಿಯನ್ನು ಹಿಮ್ಮೆಟ್ಟಿಸಲು, ಕೋಮುವಾದದ ವಿರುದ್ಧ ದೃಢತೆಯಿಂದ ಹೋರಾಡಲು ಜಾತ್ಯತೀತ ಶಕ್ತಿಗಳು ಮುಂದಾಗಬೇಕು ಎಂದು ಸಿಪಿಐ(ಎಂ) ಕರೆ ನೀಡಿದೆ.

**ಮಹಾರಾಷ್ಟ್ರದಲ್ಲಿ**

ನಮ್ಮ ನೆರೆಯ ಮಹಾರಾಷ್ಟ್ರದಲ್ಲಿಯೂ ಬಿಜೆಪಿ-ಶಿವಸೇನಾ ಕೂಟ ಏನೆಲ್ಲಾ ಕಲಸುಮೇಲೋಗರದ ತಂತ್ರಗಳನ್ನು ಅನುಸರಿಸಿದರೂ ಅದನ್ನು ತಿರಸ್ಕರಿಸಿ ಅಧಿಕಾರ ಹಿಡಿಯದಂತೆ ಮತದಾರರು ಸ್ಪಷ್ಟ ತೀರ್ಪು ನೀಡಿದ್ದಾರೆ. ಎನ್‌ಡಿಎ ಕೂಟ ಬಿಜೆಪಿ-ಶಿವಸೇನಾದಂತಹ ಮತಾಂಧ ಶಕ್ತಿಗಳ ವಿರುದ್ಧ 14ನೇ ಲೋಕಸಭಾ ಚುನಾವಣೆಗಳಲ್ಲಿ ಕಂಡುಬಂದ ಜನತೆಯ ಆಕ್ರೋಶ ಮುಂದುರಿದಿರುವುದನ್ನು ಗಮನಿಸಬೇಕು ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದ್ದು,ಅಲ್ಲಿನ ಮತದಾರರನ್ನು ಅಭಿನಂದಿಸಿದೆ.

**ಈ ವಾರ ಕರ್ನಾಟಕ ಒಂದು ನೋಟ**

— ಎಸ್.ವೈ.ಗುರುಶಾಂತ್

# ದತ್ತ ಜಯಂತಿಯ ವಿಕೃತ ಆಚರಣೆಗೆ ಅವಕಾಶ ಬೇಡ


**ಸಂಘ ಪರಿವಾರ ಬಾಬಾಬುಡನ್ ಗಿರಿಗೆ ಕೋಮುವಾದದ ಕೊಳ್ಳಿ ಹಿಡಿದು ಹೊರಟಿದೆ. ಅಲ್ಲಿನ ಪರಂಪರೆಗೆ ವ್ಯತಿರಿಕ್ತವಾದ ದತ್ತಮಾಲೆ, ದತ್ತ ಜಯಂತಿ, ಪೂಜೆ-ಯಜ್ಞಗಳನ್ನು ಜನ ತಿರಸ್ಕರಿಸಬೇಕು. ಸರ್ಕಾರ ನ್ಯಾಯಾಲಯದ ಆದೇಶ ಜಾರಿಗೊಳಿಸಬೇಕು. ಮಾತ್ರವಲ್ಲ ಇದನ್ನು ಉಲ್ಲಂಘಿಸುವ ಕೃತ್ಯಗಳಿಂದ ದೂರವಿರಲೇಬೇಕು.**

ಬಾಬಾಬುಡನ್ ಗಿರಿಯಲ್ಲಿ ಸೌಹಾರ್ದತೆಯ ಪರಂಪರೆಯನ್ನು ಧ್ವಂಸಗೊಳಿಸಲು ಕೋಮುದ್ವೇಷದ ಕೊಳ್ಳಿ ಇಡಲು ಸಂಘ ಪರಿವಾರ ಮತ್ತೆ ಸನ್ನದ್ಧವಾಗುತ್ತಿದೆ. ಹಿಂದಿನಂತೆ 'ದತ್ತಜಯಂತಿ' ಹೆಸರಿನಲ್ಲಿ ದ್ವೇಷ ಹೆಚ್ಚಿಸುವ ಯೋಜನೆಗಳು ಸಿದ್ದಗೊಂಡಿವೆ. 'ದತ್ತಜಯಂತಿ'ಇರುವುದು ಡಿಸೆಂಬರ್‌ನಲ್ಲಿ. ದತ್ತ ಹೋಮ, ಶೋಭಾ ಯಾತ್ರೆಗಳ ಮೂಲಕ ವಿಧ್ವಂಸಕ ಅಜೆಂಡಾ ಜಾರಿಗೊಳಿಸಲು ವಿವಿಧ ಕಾರ್ಯಕ್ರಮಗಳನ್ನು ಪರಿವಾರ ಪ್ರಕಟಿಸಿವೆ. ಅಕ್ಟೋಬರ್ 31 ರಂದು ದತ್ತ ಮಾಲೆ ಅಭಿಯಾನ - 25 ರಂದು ಅಯ್ಯಪ್ಪ ಸ್ವಾಮಿಯ ಭಕ್ತರು ಹಾಕುವಂತಹ ಮಾಲೆ ಧರಿಸಿ 31 ರಂದು ಬಾಬಾಬುಡನ್‌ಗಿರಿಯಲ್ಲಿರುವ ದರ್ಗಾ ಪೀಠದ ಗುಹೆಗೆ ತೆರಳಿ ಪೂಜೆ ಸಲ್ಲಿಸುವುದು, ಇರುಮುಡಿಕೊಡುವುದು. ಅಂದು ದತ್ತ ಯಜ್ಞ ಎಂಬುದು ನಡೆಯಲಿದ್ದು ಅದರಲ್ಲಿ ಭಾಗವಹಿಸುವುದು. ಅಕ್ಟೋಬರ್ 28 ರಿಂದ 30 ರವರೆಗೆ ಎಲ್ಲಾ ಜಿಲ್ಲಾ - ತಾಲ್ಲೂಕು ಕೇಂದ್ರಗಳಲ್ಲಿ ಪ್ರಚಾರ ಕೈಗೊಂಡು ಶೋಭಾ ಯಾತ್ರೆಯೆಂಬ ಮೆರವಣಿಗೆ ನಡೆಸುವುದು. 31 ರಂದು 'ಧರ್ಮಸಂಸತ್' ಎಂಬ ಸಮಾವೇಶ ಬೆಟ್ಟದ ಮೇಲೆ ನಡೆಸಿ ವಿಷ ಕಾರುವುದು.

ಬಜರಂಗದಳ, ವಿಹೆಚ್‌ಪಿ ಆಚರಿಸುತ್ತಿರುವ 'ದತ್ತಜಯಂತಿ - ಯಜ್ಞ' ಯೆಂಬುದು ಹಿಂದೆಂದೂ ಇಲ್ಲದ ಆಚರಣೆ. ದತ್ತಾತ್ರೇಯ ಹಾಗೂ ಸೂಫಿ ಪಂಥಗಳಿಗೆ ತನ್ನದೇ ಆದ ವಿಶಿಷ್ಟ ಪೂಜಾ ಪದ್ಧತಿ ಇದೆ. ಅಲ್ಲಿ ದತ್ತ-ಸೂಫಿ ಪಂಥಗಳೆರಡರ ಮಿಳಿತದಲ್ಲಿ ರೂಪುಗೊಂಡ ಅವೈಧಿಕ ಪೂಜಾ ಪದ್ಧತಿ ಇದೆ. ಈ ಅವೈಧಿಕ ಪಂಥವು ವರ್ಣ ಮತ್ತು ಜಾತಿಯ ಆಚರಣೆಗಳನ್ನು ವಿರೋಧಿಸುತ್ತದೆ. ಆದರೆ ಈ ಪಂಥದ ಹೆಸರು ಬಳಸಿ ಯಜ್ಞ, ಹೋಮ-ಪೂಜಾ(ದತ್ತ ವಿಗ್ರಹ ಇಟ್ಟು)ಗಳಂತಹ ವೈಧಿಕ - ಆಗಮಿಕ ಆಚರಣೆಗಳನ್ನು ತರಲು ಮುಂದಾಗಿರುವುದು ಆ ಪರಂಪರೆಗೆ ವಿರೋಧಿಯಾದದು.

ಕಳೆದ ಈಚಿನ ವರುಷಗಳಲ್ಲಿ ಆರಂಭಿಸಿರುವ ಇಂತಹ ಜಯಂತಿಯ ನಿಜವಾದ ಉದ್ದೇಶ ಏನೆಂಬುದು ಸ್ಪಷ್ಟವಿದೆ. ಇವು ಸೌಹಾರ್ದತೆ ಪರಂಪರೆಗೆ, ಕೋಮು ಸಾಮರಸ್ಯಕ್ಕೆ ದಕ್ಕೆ ತರುವ ಕೃತ್ಯಗಳಾಗಿವೆ. ಅನೇಕ ಸಮಸ್ಯೆಗಳಿಂದ ಬಾಧಿತ ಜನರನ್ನು ಸೆಳೆದು ಹಾದಿ ತಪ್ಪಿಸುತ್ತಿರುವ ಕೋಮುವಾದಿ ಹುನ್ನಾರವಿದು. ಇದಕ್ಕೆ ಧಾರ್ಮಿಕತೆ ಸೋಗು ಹಾಕಲಾಗುತ್ತಿದೆ. ಅವರ ಗುರಿ ಧರ್ಮ ನಿರಪೇಕ್ಷತೆಯ ಮೇಲೆ ಧಾಳಿ. ಅಂತಿಮವಾಗಿ ಹಿಂದೂ-ಮುಸ್ಲಿಂ ಮತೀಯ ಘರ್ಷಣೆಗೆಡೆಮಾಡಿ ವಿಭಜನೆ ತರುವುದು.

ಸಂಘ ಪರಿವಾರದ ಈ ಕೃತ್ಯಗಳು ಪರಂಪರೆಗೆ ವಿರೋಧ ಮಾತ್ರವಲ್ಲ, ಕಾನೂನು ಸಂವಿಧಾನಕ್ಕೂ ಅಪವಾದದ ಕೃತ್ಯಗಳು. ಕಾನೂನು ಬಾಹಿರವಾದದ್ದು - ಹಿಂದೆ ರಾಜ್ಯ ಹೈಕೋರ್ಟ್ ಇಲ್ಲಿನ ಪೂಜಾ ವಿಧಾನ-ಪರಂಪರೆ, ಆಚರಣೆಗಳನ್ನು ಏನೆಂದು ಸ್ಪಷ್ಟವಾಗಿ ದಾಖಲಿಸಿದೆ. ಮತ್ತು 1975 ರ ಹಿಂದಿನ ಆಚರಣೆ - ಪದ್ಧತಿಗಳ ಯಥಾ ಸ್ಥಿತಿಯನ್ನು ಕಾಯ್ದುಕೊಂಡು ಬರಲು ನಿರ್ದೇಶಿಸಿದೆ. ಆದರೆ ಇದನ್ನು ಹಿಂದಿನ ಸರ್ಕಾರಗಳು ಪಾಲಿಸಲಿಲ್ಲ. ಎಸ್.ಎಂ.ಕೃಷ್ಣ ರ ಕಾಂಗ್ರೆಸ್ ಸರ್ಕಾರವಂತೂ



ಬಾಬಾಬುಡನ್‌ಗಿರಿ — ಪ್ರಶಾಂತ ಕೊಳ್ಳಕ್ಕೆ ಬಜರಂಗಿಗಳ ಕೊಳ್ಳಿ ಕಳೆದ ವರ್ಷದಲ್ಲಿ ಹಾವಳಿ

ಹಂತಹಂತವಾಗಿ ಚೆಡ್ಡಿಗಳ ಅಜೆಂಡಾವನ್ನು ತಾನೇ ಜಾರಿಗೊಳಿಸಲು ಮುಂದಾಯಿತು. ಪೂಜೆ, ಯಜ್ಞಗಳು ಉಸ್ತುವಾರಿ ಸಚಿವರ ಸಮ್ಮುಖದಲ್ಲೇ ನಡೆದು ಮೃದು ಹಿಂದುತ್ವದ ರಾಜೀ ಮನೋಭಾವ ಸರ್ಕಾರವೇ ತೋರಿ, ಖಾವಿ ಪಡೆಗಳಿಗೆ ಕುಮ್ಮಕ್ಕು ನೀಡಿತು. ಈ ಸಮಸ್ಯೆ ಇಷ್ಟು ವ್ಯಾಪಕಗೊಳ್ಳಲು ಸಾಧ್ಯವಾಯಿತು. ಧರ್ಮನಿರಪೇಕ್ಷತ, ಪ್ರಗತಿಪರ ಶಕ್ತಿಗಳ ತೀವ್ರ, ಪ್ರತಿರೋಧವಿಲ್ಲದಿದ್ದಲ್ಲಿ 'ಕರಸೇವಕರ' ತಮ್ಮ ವಿಧ್ವಂಸಕ ಅಜೆಂಡಾ ಜಾರಿಯಾಗಿ ಇನ್ನೊಂದು ಅಯೋಧ್ಯಾಕಾಂಡ ನಡೆದೇಹೋಗುತ್ತಿತ್ತು.

ಕಳೆದ ಚುನಾವಣೆಯಲ್ಲಿ ಕೃಷ್ಣರ ಸರ್ಕಾರದ ನೀತಿಗಳ ವಿರುದ್ಧ ಬೇಸತ್ತು ಮತ ನೀಡಿದರು. ಇದರ ಲಾಭವನ್ನು ವಿಶೇಷವಾಗಿ ಪಡೆದುಕೊಂಡ ಬಿಜೆಪಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಂಸತ್ ಸದಸ್ಯ ಸ್ಥಾನ ಹಾಗೂ ನಗರ ಕ್ಷೇತ್ರ ಒಳಗೊಂಡು ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ಗೆದ್ದಿತು. ಇದು ಜನಾದೇಶವನ್ನು ವಿಕೃತವಾಗಿ ವ್ಯಾಖ್ಯಾನಿಸಿಕೊಂಡ ಖಾವಿ ಪಡೆಗಳ ಅಟ್ಟಹಾಸಕ್ಕೆ ಎಣೆ ಇಲ್ಲದಂತೆ ಮಾಡಿದೆ. ಬಜರಂಗದಳದ ನಾಯಕರು, ಶಾಸಕರು ಮನಬಂದಂತೆ ಆಡತೊಡಗಿ ತಮ್ಮದೇ ಕಾನೂನು-ನ್ಯಾಯ ಚಲಾಯಿಸುತ್ತಿದ್ದಾರೆ. ನಿಯಮ ಮೀರಿ ಪ್ರತಿ ಹುಣ್ಣಿಮೆಗೂ ಬುಡನ್ ದರ್ಗಾಕ್ಕೆ ತೆರಳಿ 'ಪೂಜೆ' ಮಾಡುತ್ತಿದ್ದಾರೆ. ಇದಕ್ಕೆ ಸರ್ಕಾರ ಕಡಿವಾಣ ಹಾಕಿಲ್ಲ.

ಇಂತಹ ಸಂದರ್ಭದಲ್ಲಿ 'ದತ್ತಜಯಂತಿ'ಯ ವಿಕೃತ ಆಚರಣೆಗೆ ಸರ್ಕಾರ ಅವಕಾಶ ಕೊಡಬಾರದು. ದೃಢವಾಗಿ ಎದುರಿಸಬೇಕು. ಆ ಕಾರ್ಯಕ್ರಮಗಳಿಂದ ಸರ್ಕಾರ ಪೂರ್ಣವಾಗಿ ದೂರ ಇರಬೇಕು. ನ್ಯಾಯಾಲಯದ ನಿರ್ದೇಶನದಂತೆ 1975 ರ ಮೊದಲಿನ ಸ್ಥಿತಿ ಕಾಯ್ದುಕೊಳ್ಳಬೇಕು.

ಹಿಂದೆ ಈ ಬಗ್ಗೆ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರನ್ನು ಸಿಪಿಐ(ಎಂ), ಸಿಪಿಐ-ಜೆಡಿ(ಎಸ್) ಮುಖಂಡರ ನಿಯೋಗ ಭೇಟಿ ಮಾಡಿದಾಗ ಈ ವಿಕೃತಿಗಳನ್ನು ಸರಿಪಡಿಸಲಾಗುವುದು ಎಂದು ಭರವಸೆ ನೀಡಿದ್ದರು. ಹೊಸ ಸೆಕ್ಯುಲರ್ ಸರ್ಕಾರ ಕ್ರಮ ವಹಿಸಲಿದೆಯೆಂದಿದ್ದರು. ಈಗ ಧರಂ ಸರ್ಕಾರ ಈ ದಿಶೆಯಲ್ಲಿ ಕ್ಷಿಪ್ರ ಕಾರ್ಯಪ್ರವೃತ್ತರಾಗಬೇಕಿದೆ.

ಒಂದೆಡೆ ಇದಕ್ಕಾಗಿ ಆಡಳಿತಾತ್ಮಕ ಕ್ರಮಗಳ ಅಗತ್ಯವಿದೆ. ಆದರೆ ಅದೇ ಸಾಲದು. ರಾಜಕೀಯವಾಗಿ, ಜನತೆಯನ್ನು ಸಂಘ ಪರಿವಾರದ ಕೋಮುವಾದಿ ಹುನ್ನಾರಗಳ ವಿರುದ್ಧ ಜಾಗೃತಗೊಳಿಸಿ, ಹೋರಾಟದಲ್ಲಿ ತೊಡಗಿಸಬೇಕು. ಎಲ್ಲಾ ಪ್ರಗತಿಪರ, ಸೆಕ್ಯುಲರ್ ಶಕ್ತಿಗಳ ಪ್ರತಿರೋಧ ಒಡ್ಡಬೇಕು. ರಾಜ್ಯದ ಎಲ್ಲಾ ಜಿಲ್ಲೆ, ತಾಲ್ಲೂಕುಗಳಲ್ಲಿಯೂ ಈ ಶಕ್ತಿಗಳ ಹುನ್ನಾರ ಬಯಲಿಗೆಳೆಯಬೇಕು.

# ಹೆಚ್ಚಿದ ಸಾರಿಗೆ ದರ - ಜನರ ಮೇಲೆ ಸರ್ಕಾರದ ಪ್ರಹಾರ

***ಬೀದರ್‌ನಲ್ಲಿ ಮತದಾನವಾದ ಕೂಡಲೇ ಸರ್ಕಾರ ಬಸ್ ಪ್ರಯಾಣದ ಸಾರಿಗೆ ದರಗಳನ್ನು ಹೆಚ್ಚಿಸಿದೆ. ಈ ಏರಿಕೆಗೆ ಸರ್ಕಾರ ಕೊಡುವ ಕಾರಣಗಳು ಸಮರ್ಥನಿಯವಲ್ಲ. ಜನರಿಗೆ ಅನುಕೂಲ ಕಲ್ಪಿಸುವ ಕಲ್ಯಾಣದ ಕಲ್ಪನೆಯಿಂದ ವ್ಯಾಪಾರೀಕರಣದತ್ತ ಸರ್ಕಾರ ಸಾಗುತ್ತಿರುವುದರ ದ್ಯೋತಕವೇ?***

ಕರ್ನಾಟಕದ ನೂತನ ಸರ್ಕಾರ ಜನಸಾಮಾನ್ಯರ ಮೇಲೆ ಗಧಾಪ್ರಹಾರ ಆರಂಭಿಸಿದೆ. ನೂರು ದಿನಗಳ ಆಮೆ ನಡಿಗೆಯ ಸಾಧನೆಗಳನ್ನು ಈಚೆಗೆ ಕೊಚ್ಚಿಕೊಂಡಿತು. ಅಗಾಧ ನಿರೀಕ್ಷೆಯೆದರು ಸ್ವಲ್ಪ ಕಾದುನೋಡಿ ದಿನಗಳು ಸಾಕಾಗಲಿಲ್ಲ ಎಂದಿತು. ಆದರೆ ನೂರು ದಿನಗಳಲ್ಲೇ ಬಜೆಟ್, ಮಧ್ಯಾವಧಿ ಆರ್ಥಿಕ ಯೋಜನೆ, ವಿಶ್ವಸಂಸ್ಥೆ ವರದಿ, ಆ ನೀತಿ-ಈ ನೀತಿ ಎಂದು ಮೆತ್ತಗೆ ಅಡಿಗೆ ಸಿದ್ಧಗೊಳಿಸಿ ಈಗ ಒಂದೊಂದಾಗಿ ಬಡಿಸಹೊರಟಿದೆ. ಈಗಿನ ಲೇಟೆಸ್ಟ್ ಪ್ರಹಾರ ಸಾರಿಗೆ ಬಸ್‌ಗಳ ಪ್ರಯಾಣ ದರಗಳ ಹೆಚ್ಚಳ! ರಾಜ್ಯ ಸಂಸ್ಥೆ 10.56 ರಷ್ಟು, ಬೆಂಗಳೂರು ನಗರ ಸಾರಿಗೆ ಶೇ 4 ರಷ್ಟು ಎಂದು ಪ್ರಕಟಿಸಿದೆ. ನಿಜ ಸ್ವರೂಪದಲ್ಲಿ ಇದು ಇನ್ನೂ ಹೆಚ್ಚಾಗಲಿದೆ. 14 ರ ಮಧ್ಯರಾತ್ರಿಯಿಂದಲೇ ಜಾರಿಗೆ ಬರುವಂತೆ ದಿಢೀರ್ ಆಜ್ಞೆ!

ಈ ದರಗಳ ಏರಿಕೆಯನ್ನು ಈ ಮೊದಲೇ ಮಾಡುವ ನಿರ್ಧಾರ ಇತ್ತಂತೆ! ತಡೆಹಿಡಿದು ಕೊಂಡಿದ್ದು ಯಾಕೆ? ಬೀದರ್ ಚುನಾವಣೆಯ ಕನ್ನದುರು ಕಾಣುತ್ತಿತ್ತಂತೆ. ಮತದಾನದ ಮೊದಲೇ ಏರಿಸಿದರೆ ಸರ್ಕಾರದ ಎಲ್ಲಾ ಕೆಲಸಬಿಟ್ಟು ಬೀದರ್‌ನಲ್ಲಿ ನೆಂಟರ ಮನೆಯಲ್ಲಿ ವಾರಗಟ್ಟಲೆ ಠಿಕಾಣಿ ಹೂಡಿ ಆತಿಥ್ಯ ಸ್ವೀಕರಿಸುತ್ತಾ, ಗೆಲುವಿಗಾಗಿ ಶ್ರಮಿಸುತ್ತಿದ್ದ ಮುಖ್ಯಮಂತ್ರಿ, ಚಿಕ್ಕಮಂತ್ರಿಯಾದಿ ಯಾಗಿ ಅನೇಕ ಶಾಸಕರಿಗೆ ಜನರಿಂದ 'ನಿಜ ಆತಿಥ್ಯ' ಸಿಗಬಹುದೆಂದು ಮುಂದೂಡಿದ್ದರಂತೆ. ಅಲ್ಲಿ ಮತದಾನವಾಯಿತು. ಪ್ರಭುವಾಗಿದ್ದ ಪ್ರಜೆ ತೆರೆಗೆ ನೂಕಲ್ಪಟ್ಟ. ಇಲ್ಲಿ ದರ ಏರಿಕೆಯಾಯಿತು. ಇನ್ನು ಪ್ರಜಾಪ್ರಭುಗಳದ್ದೇ ಕಾರುಬಾರು.

ಸಾರಿಗೆ ಈ ದರ ಏರಿಕೆಗೆ ಪೆಟ್ರೋಲ್ - ಡೀಸೆಲ್ ಬೆಲೆ ಹೆಚ್ಚಳ, ನೌಕರರಿಗೆ ತುಟ್ಟಿಭತ್ಯೆ ನೀಡಲಾಗುತ್ತಿರುವುದು ಕಾರಣವೆಂದೇ ಹೇಳುತ್ತಿದ್ದಾರೆ. ಈ ವಾದ ಎಲ್ಲಾ ಸರ್ಕಾರಗಳಿಂದಲೂ ಕೇಳಿಯಾಗಿದೆ. ಎಲ್ಲಕ್ಕೂ ಕಾರ್ಮಿಕರ ಸಂಬಳವೇ ಕಾರಣವೆಂದು ಹೇಲಾಗುತ್ತದೆ. ಅಂದರೆ ಸಂಬಳ, ಸೌಲಭ್ಯ ಇಲ್ಲದೇ ನೌಕರರ ಕೆಲಸ ಮಾಡಬೇಕು ಎಂಬಂತೆ! ಆದರೆ ಸಾರಿಗೆ ಸಂಸ್ಥೆಯೊಳಗಿನ ಪ್ರತಿಹಂತದಲ್ಲೂ ನಡೆಯುವ ವ್ಯವಹಾರಗಳ ವಿಪರೀತ ಭ್ರಷ್ಟಾಚಾರ, ಆದಾಯ ಸೋರಿಕೆಯನ್ನು ಎಂದಾದರೂ ಸಚಿವರಾಗಲೀ, ಸರ್ಕಾರವಾಗಲೀ ಗುರುತಿಸಿವೆಯೇ? ಹಿಂದೊಮ್ಮೆ ಶರಣರ 'ವಾರಸುದಾರ'ರೊಬ್ಬರು (ಖಂಡ್ರೆ) ಸಚಿವರಾಗಿದ್ದಾಗ ಕೋಟ್ಯಾಂತರ ರೂಪಾಯಿಗಳ ನಕಲಿ ಟಿಕೆಟ್ ಜಾಲ ಪತ್ತೆಯಾಯಿತು. ಸಂಶಯದ ಸುಳಿ ಸಚಿವರ ಸುತ್ತಲೇ ತಿರುಗಿತು. ಬಳಿಕ ಆ ಪ್ರಕರಣವೇ ಮುಚ್ಚಿಹೋಯಿತು. ಈಗಲೂ ಮಂತ್ರಿ ಖಾತೆ ಹಂಚಿಕೆಯಲ್ಲಿ ಸಾರಿಗೆ ಖಾತೆ ಪಡೆಯುವುದು ಪ್ರತಿಷ್ಠೆಯ, ಬಲಾಢ್ಯತನದ ಸಂಕೇತವಾಗಿದೆ. ಈ ಎಲ್ಲಾ ಸೋರಿಕೆ ಕೇಳಬೇಕಾದವರೇ ಇಲಾಖೆ ಭ್ರಷ್ಟತೆಯಲ್ಲಿ ಶಾಮೀಲಾದರೆ ಕೇಳುವವರಾರು?

ಸಾರಿಗೆ ದರ ಏರಿಕೆಗೆ ಸರ್ಕಾರ ಹೇಳುವಂತಹ ಅಂಶಗಳೂ ಸ್ವಲ್ಪ ಕಾರಣವಿರಬಹುದು. ಆದರೆ ಪ್ರಧಾನವಾಗಿ ಒಂದು ಅಂಶವನ್ನು ಮರೆಮಾಚಲಾಗುತ್ತಿದೆ. ಇತ್ತೀಚೆಗೆ ಬಜೆಟ್ ಅಧಿವೇಶನದ ಕೊನೆಯಲ್ಲಿ ಬಿಜೆಪಿಯ ಗದ್ದಲದ ನಡುವೆ ಪಾಸಾದ ಮಧ್ಯಾವಧಿ ಹಣಕಾಸು ಯೋಜನೆಯಲ್ಲಿ ಸಾರಿಗೆ, ವಿದ್ಯುತ್, ಶಿಕ್ಷಣ, ಸಮಾಜ ಕಲ್ಯಾಣ, ಆರೋಗ್ಯ ಸೇವೆಯಂತಹ ರಂಗಗಳಿಗೆ ಶೇ 15 ರಷ್ಟು ಅನುದಾನ ಕಡಿತ ಮಾಡಲಾಗುವುದು ಎಂಬುದು ಸಹ ಮುಖ್ಯ ಕಾರಣ. ಇದು ವಿಶ್ವಬ್ಯಾಂಕ್‌ನ ನಿರ್ದೇಶನ, ಇದನ್ನೇ ವಿಶ್ವಬ್ಯಾಂಕ್‌ನ ಕಂಟ್ರಿ ಅಧ್ಯಕ್ಷ ಬಂದಾಗ ಉಪಮುಖ್ಯಮಂತ್ರಿಗೆ ಜಾರಿಗಾಗಿ ದಬಾಯಿಸಿ ಹೇಳಿದ್ದು. ಸಾರಿಗೆ ಸಂಸ್ಥೆಗೆ ನೆರವಿನ ನೇರ ಕಡಿತ ಒಂದೆಡೆ,ಇನ್ನೊಂದೆಡೆ ಶಿಕ್ಷಣ-ಸಮಾಜ ಕಲ್ಯಾಣಕ್ಕೆ ಕಡಿತ ಮಾಡುವುದೂ ಸಹ. ನೇರವಾಗಿ ಪ್ರಯಾಣಿಕರಿಗೆ ಭಾರ ಬೀಳುತ್ತದೆ. ಉದಾರೀಕರಣ -ಜಾಗತೀಕರಣದ ನೀತಿಯು ಸಿದ್ಧಾಂತದಂತೆ ಇದನ್ನೆಲ್ಲಾ ಜನರೇ ಭರಿಸಬೇಕು. ಆದ್ದರಿಂದಲೇ ಜನಕಲ್ಯಾಣ-ಸಮಾಜ ಕಲ್ಯಾಣ ಜನರಿಗೆ ನೆರವು ಎಂಬುದು ಹಾರಿಹೋಗುತ್ತಿದೆ. ಸಾರಿಗೆ ಸಂಸ್ಥೆ ಆರಂಭವಾದದ್ದೇ ಖಾಸಗಿ ಮಾಲೀಕರ ವಿಪರೀತ ಸುಲಿಗೆ ತಪ್ಪಿಸಿ, ಹೆಚ್ಚಿನಸಾರಿಗೆ ಅನುಕೂಲ ಕಲ್ಪಿಸಿ, ಗ್ರಾಮಗ್ರಾಮಗಳಿಗೂ ತಲುಬೇಕೆಂಬುದು. 'ಸಾರ್ವಜನಿಕ ಸಾರಿಗೆ'ಯು ಲಾಭೋದ್ಯಮವಾಗಿರದೇ ಜನರಿಗೆ ಸಹಾಯಕ, ಅಲ್ಲಿ ಲಾಭ ನಷ್ಟ ನೋಡುವಂತಿಲ್ಲ. ಪ್ರಜೆಗಳಿಗೆ ಅನುಕೂಲವೇ ಪ್ರಧಾನ ಎಂಬ ನೀತಿಯಿಂದಾಗಿ. ಆದರೀಗ ಅಂತಹ ನೀತಿಯಿಂದ ದೂರ ಸರಿಯಲಾಗಿದೆ. ಜನ ಈ ನೀತಿಗಳಿಗೆ ಬೇಸತ್ತು ಸೋಲಿಸಿದ್ದರೂ, ಅದರ ಲಾಭ ಹೊಡೆದು ವಿಶ್ವಬ್ಯಾಂಕ್ ಸೇವೆಗೆ ಪುನರ್ ಸನ್ನದ್ಧರಾಗುವುದು ಇಂದಿನ ಸ್ಥಿತಿ. ಇಂತಹ ಧಾಳಿಗಳನ್ನು ಹಿಂತೆಗೆದುಕೊಂಡು, ಏರಿದ ದರಗಳನ್ನು ಇಳಿಸಿ ಜನತೆಯನ್ನು ರಕ್ಷಿಸಬೇಕು. ಈಗಾಗಲೇ ಹೇಳದೆ ಕೇಳದೇ ಹೆಚ್ಚಿಸಿರುವ ದರವೇ ಸಾಕಾಗಿದೆಯೆಂಬುದು ಗಮನಿಸಬೇಕು. ಸಾರಿಗೆ ಸಂಸ್ಥೆಗೆ ಸರ್ಕಾರ ನೆರವು ನೀಡಬೇಕು.

## ನಕ್ಸಲೀಯರು - ಪೊಲೀಸರ ಚಕಮಕಿಯಲ್ಲಿ ಕಳೆದುಹೋಗುತ್ತಿರುವ ಮೂಲ ಪ್ರಶ್ನೆಗಳು

ಪಶ್ಚಿಮ ಘಟ್ಟದ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳ ಗಡಿಯ ಬರ್ಕಣ ಜಲಪಾತದ ಬಳಿ ನಕ್ಸಲೀಯರು ಮತ್ತು ಪೊಲೀಸರ ನಡುವೆ ಗುಂಡಿನ ಚಕಮಕಿ ಈ ವಾರದ ಸೋಮವಾರ (11 ರಂದು) ನಡೆದಿದೆ. ಒಂದಿಬ್ಬರಾದರೂ ಸತ್ತಿರಬಹುದೆಂದು ಪೊಲೀಸರು ಹೇಳಿದ್ದಾರೆ. ಆದರೆ ಶವಗಳು ಸಿಕ್ಕಿಲ್ಲ. ಕಾಡಿನಿಂದ ಖಚಿತ ಮಾಹಿತಿಯೂ ಇನ್ನೂ ಹೊರಬಂದಿಲ್ಲ.

ಇತ್ತೀಚೆಗೆ ಮಗೆಬೈಲನಲ್ಲಿ ಚಂದ್ರಶೇಖರ್ ಎಂಬುವರ ರಕ್ಷಣೆಗಿದ್ದ ಮುಖ್ಯ ಪೇದೆ ಮುದ್ದಪ್ಪನನ್ನು ನಕ್ಸಲೀಯ ತಂಡವೊಂದು ಅಪಹರಿಸಿ, ಆತನ ಬಳಿಯಿದ್ದ ಆಧುನಿಕ ಎಸ್‌ಎಲ್‌ಆರ್ ರೈಫಲ್ ಕಿತ್ತುಕೊಂಡಿದ್ದರು. ನಕ್ಸಲೀಯರು ಆತನನ್ನು ಬಿಟ್ಟರೋ, ಅಥವಾ ಆತ ತಪ್ಪಿಸಿಕೊಂಡು ಬಂದನೋ ಅಂತೂ ಬದುಕಿಬಂದಿದ್ದಾನೆ. ಪೇದೆ ಮುದ್ದಪ್ಪ ದೂರು ದಾಖಲಿಸಿದ್ದಾನೆ. ಇದಾದ ಬಳಿಕ ಪೊಲೀಸ್ ಕಾರ್ಯಾಚರಣೆ ತೀವ್ರಗೊಂಡಿದೆ. ಪರಿಣಾಮ ಬರ್ಕಣದಲ್ಲಿ ಬೀಡು ಬಿಟ್ಟಿದ್ದ ನಕ್ಸಲೀಯ ತಂಡ ಪತ್ತೆಯಾಗಿ ಚಕಮಕಿಯಾಗಿದೆ. ಅನೇಕ ಶಸ್ತ್ರಾಸ್ತ್ರಗಳು, ಇತ್ಯಾದಿಗಳನ್ನು ವಸ್ತುಗಳನ್ನು ಡೇರೆಯಲ್ಲಿ ಬಿಟ್ಟು ನಕ್ಸಲೀಯರು ಓಡಿದ್ದಾರೆ. ಈ ಘಟನೆಗಳನ್ನು ನಕ್ಸಲೀಯ ವಕ್ತಾರರು ಬೆಂಗಳೂರಿನಲ್ಲಿ ದೃಢೀಕರಿಸಿದ್ದಾರೆ. ಈ ಶಸ್ತ್ರಾಸ್ತ್ರಗಳು ಹೇಗೆ ಬಂದವು? ಎಲ್ಲಿಂದ? ಪ್ರಶ್ನೆಗೆ ನಿಖರ ಮಾಹಿತಿ ಬಹಿರಂಗ ಆಗಬೇಕಿದೆ. ಪೊಲೀಸರ ಶಂಕೆಯಂತೆ ಇತ್ತೀಚಿನ ಹೈದ್ರಾಬಾದ್ ರ್‍ಯಾಲಿಗೆ ತೆರಳಿದ್ದ ಸುಮಾರು 50 ಜನ

ಪುಟ 8 ಕ್ಕೆ

# ಮೆಟಲ್ ಕ್ಲೋಸರ್ಸ್ ಕಾರ್ಮಿಕರ ಮೇಲೆ ಮತ್ತೊಮ್ಮೆ ಭೀಕರ ಹಲ್ಲೆ



ಮಾಲೀಕರ ಗೂಂಡಾ ಧಾಳಿಗೆ ಈಡಾದ ಕಾರ್ಮಿಕ


ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಮೆಟಲ್ ಕ್ಲೋಸರ್ಸ್ ಕಾರ್ಖಾನೆ ಕಾರ್ಮಿಕರು ಸಂಘ ರಚಿಸಿಕೊಂಡ ನಂತರ ಸಂಘ ಉಳಿಸಿಕೊಳ್ಳಲು ನಡೆಸಿರುವ ಹೋರಾಟಗಳ ಬಗ್ಗೆ ಪತ್ರಿಕಾರಂಗದಲ್ಲಿ ಈಗಾಗಲೇ ಅನೇಕ ಬಾರಿ ವರದಿಗಳು ಪ್ರಕಟವಾಗಿದ್ದು ಇಡೀ ರಾಜ್ಯದ ದುಡಿಯುವ ಜನತೆಯ ಗಮನ ಸೆಳೆದಿದೆ.

ಸಂಘ ರಚಿಸಿಕೊಂಡ ಏಕೈಕ ಕಾರಣಕ್ಕಾಗಿ ಕಾರ್ಖಾನೆಗೆ ಎರಡು ತಿಂಗಳ ಕಾಲ ಬೀಗಮುದ್ರೆ ಹಾಕಿದ ಬಳಿಕ ಕಾರ್ಮಿಕರು ಮುಖ್ಯಮಂತ್ರಿಗಳ ನಿವಾಸದ ಮುಂದೆ ಪ್ರತಿಭಟನೆ ನಡೆಸಿದ ನಂತರ ಮುಖ್ಯಮಂತ್ರಿಗಳ ನಿರ್ದೇಶನದಂತೆ ಮಾನ್ಯ ಕಾರ್ಮಿಕ ಸಚಿವರ ಮಧ್ಯಪ್ರವೇಶದಿಂದ ವಿಧಾನಸೌಧದಲ್ಲಿ ಒಪ್ಪಂದವೊಂದು ನಡೆದು ನಂತರ ಪುನಃ ಕಾರ್ಮಿಕರು ಕೆಲಸಕ್ಕೆ ಮರಳಿದ್ದರು. ಆದರೆ ಈ ಒಪ್ಪಂದದಂತೆ ಮಾಲೀಕರು ಈವರೆಗೆ 53 ಮಂದಿ ಕಾರ್ಮಿಕರಿಗೆ ಬದಲಿ ಕೆಲಸ ನೀಡಿರುವುದಿಲ್ಲ. ಸರ್ಕಾರ ನಿಗದಿ ಪಡಿಸಿರುವ ಕನಿಷ್ಠ ವೇತನ ಸಹಾ ನೀಡುತ್ತಿಲ್ಲ. ಈಗಲೂ ಕಾರ್ಮಿಕರ ಸಂಬಳ ರೂ. 1100.00 ರಿಂದ 1600.00 ಮಾತ್ರ. ಸಂಘ ಬಿಟ್ಟು ಬಂದರೆ ಕನಿಷ್ಠ ವೇತನ ನೀಡುವುದಾಗಿ ಮಾಲೀಕರ ಒತ್ತಾಯ ಜೊತೆಗೆ ಬೆಂಗಳೂರಿನಿಂದ ಕುಣಿಗಲ್ ಘಟಕಕ್ಕೆ ಕೆಲಸಕ್ಕೆ ಹೋಗುವ ಕಾರ್ಮಿಕರ ಮೇಲೆ ಹಲ್ಲೆ, ಮಹಿಳಾ ಕಾರ್ಮಿಕರಿಗೆ ಕಡ್ಡಾಯ ರಜೆ ಈ ಎಲ್ಲಾ ಕಿರುಕುಳಗಳನ್ನು ಮಾಲೀಕರು ಮುಂದುವರೆಸಿದ್ದಾರೆ. ಕಾರ್ಮಿಕ ಸಚಿವರ ಮುಂದೆ ನಡೆದ ಒಪ್ಪಂದವನ್ನು ಜಾರಿ ಮಾಡದಿರುವ ಬಗ್ಗೆ ಕಾರ್ಮಿಕ ಆಯುಕ್ತರು ಕರೆಯುವ ಸಭೆಗಳಿಗೆ ಮಾಲೀಕರು ಸದಾ ಸುಳ್ಳು ನೆಪ ಹೇಳಿ ಗೈರುಹಾಜರು. ಸರ್ಕಾರ ನಿಗದಿ ಪಡಿಸಿರುವ ಕನಿಷ್ಠ ವೇತನ ಜಾರಿಗೊಳಿಸಲು ಸರ್ಕಾರದ ಕಾರ್ಮಿಕ ಇಲಾಖೆಯೇ ನಿಷ್ಕ್ರಿಯೆಯಾಗಿದೆ.

## ಪೊಲೀಸರ ನಿಷ್ಕ್ರಿಯತೆ - ಕಾರ್ಮಿಕರಿಂದ ಪ್ರತಿಭಟನೆ

ಒಪ್ಪಂದದಂತೆ 53 ಮಂದಿ ಕಾರ್ಮಿಕರಿಗೆ ಕೆಲಸ ನೀಡಬೇಕು ಹಾಗೂ ಕೂಡಲೇ ಸರ್ಕಾರ ನಿಗದಿ ಪಡಿಸಿರುವ ಕನಿಷ್ಠ ವೇತನ ನೀಡುವಂತೆ ಒತ್ತಾಯ ಮಾಡಲು ಮೆಟಲ್ ಕ್ಲೋಸರ್ಸ್ ಕಾರ್ಮಿಕರು ಕಾರ್ಖಾನೆ ಮುಂಭಾಗದಲ್ಲಿ ಇದೇ ಅಕ್ಟೋಬರ್ 11 ರಿಂದ 24 ಗಂಟೆಗಳ ಸರದಿ ಉಪವಾಸ ನಡೆಸಲು ತೀರ್ಮಾನಿಸಿದ್ದಾರೆ. ಹಾಗೂ ಸಂಘದ ಪದಾಧಿಕಾರಿ ಹಾಗೂ ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾದ ಕಾಂ। ಇ.ಕೆ.ಎನ್. ರಾಜನ್ ಇದೇ ಅಕ್ಟೋಬರ್ 25 ರಿಂದ ಕಾರ್ಖಾನೆ ಮುಂದೆ ಅನಿರ್ದಿಷ್ಠ ಉಪವಾಸ ನಡೆಸಲು ತೀರ್ಮಾನ ಮಾಡಲಾಯಿತು.

ಕಾರ್ಖಾನೆ ಮುಂದೆ ಮುಖ್ಯದ್ವಾರದಿಂದ 50 ಮೀಟರ್ ದೂರದಲ್ಲಿ ಮಾತ್ರವೇ ಯಾವುದೇ ಪ್ರತಿಭಟನೆ ಮಾಡಬೇಕೆಂದು ಸಿವಿಲ್ ನ್ಯಾಯಾಲಯದ ತಡೆಯಾಜ್ಞೆ, ಸತ್ಯಾಗ್ರಹ ನಡೆಸಲು ಟೆಂಟ್ ಹಾಕದಂತೆ ಪೋಲೀಸರ ಒತ್ತಡ. ಕಾರ್ಮಿಕರು ಸಿವಿಲ್ ನ್ಯಾಯಾಲಯದ ಆದೇಶದಂತೆ ಕಾರ್ಖಾನೆ ಬಳಿ 50 ಮೀಟರ್ ಅಂತರದಲ್ಲಿ ಸತ್ಯಾಗ್ರಹ ನಡೆಸಲು ದೃಢ ತೀರ್ಮಾನ ತೆಗೆದುಕೊಂಡು ಟೆಂಟ್ ಹಾಕಿದರು. ಕಾರ್ಖಾನೆ ಮುಂದೆ ಸರದಿ ಉಪವಾಸ ನಡೆಸಬಾರದು, ಸತ್ಯಾಗ್ರಹದ ಟೆಂಟ್ ಇರಬಾರದು ಎಂದು ಕುತಂತ್ರ ನಡೆಸಿದ ಮಾಲೀಕ ಪ್ರಶಾಂತ್ ಹೆಗ್ಡೆ, ಜನರಲ್ ಮ್ಯಾನೇಜರ್ ಆರ್.ಬಿ. ಶೆಟ್ಟಿ ಬಾಡಿಗೆ ಗೂಂಡಾಗಳ ಮೂಲಕ 10.10.2004 ರಂದು ಭಾನುವಾರ ರಾತ್ರಿ ಸತ್ಯಾಗ್ರಹದ ಟೆಂಟ್ ಒಳಗೆ ಮಲಗಿದ್ದ ಕಾರ್ಮಿಕರ ಮೇಲೆ ಮಚ್ಚು, ಚೈನ್, ದೊಣ್ಣೆಗಳಿಂದ ಭೀಕರ ಹಲ್ಲೆ ನಡೆಸಿದ್ದಾರೆ, ಹಲ್ಲೆಗೆ ಒಳಗಾದ ಕಾರ್ಮಿಕ ಕೆಂಪಯ್ಯನ ತಲೆ ಒಡೆದು 6 ಹೊಗೆ ಹಾಕಲಾಗಿದೆ, ಕೈ ಬೆರಳು ತುಂಡಾಗಿದೆ, ಕಾಲಿಗೆ ಮಚ್ಚಿನಿಂದ ಒಡೆಯಲಾಗಿದೆ. ಇದೇ ರೀತಿ ಕಾರ್ಮಿಕನಾದ ಶಂಕರನಿಗೆ ಸೈಕಲ್ ಚೈನಿನಿಂದ ಬೆನ್ನಿನ ಮೇಲೆ ತೀವ್ರವಾಗಿ ಒಡೆಯಲಾಗಿದೆ. ಕಾರ್ಮಿಕ ಶ್ರೀನಿವಾಸ್‌ಗೆ ಕೈ ಮುರಿದಿದೆ. ಇದೇ ರೀತಿ ಕಾರ್ಮಿಕರಾದ ಮಂಜು, ಮಹೇಶ್, ವೆಂಕಟೇಶ್, ಮುನಿರಾಜ ಸಹಾ ದಾಳಿಗೆ ಒಳಗಾಗಿ ಪೆಟ್ಟು ತಿಂದಿರುತ್ತಾರೆ. ತಕ್ಷಣದಲ್ಲಿಯೇ ಕಾರ್ಮಿಕರ ಮೇಲೆ ದಾಳಿ ನಡೆಸಿದ ಗೂಂಡಾಗಳನ್ನು ಹಾಗೂ ಕಾರ್ಮಿಕರ ಮೇಲೆ ದಾಳಿ ಮಾಡಿಸಿರುವ ಮಾಲೀಕನನ್ನು ಹಾಗೂ ಕಾರ್ಖಾನೆಯ ಮ್ಯಾನೇಜರ್‌ಗಳನ್ನು ಬಂಧಿಸುವಂತೆ ಒತ್ತಾಯಿಸಿ ಅಲ್ಪ ಸಮಯದಲ್ಲಿಯೇ ಕಾರ್ಮಿಕರನ್ನು ಸಂಘಟಿಸಿ ಪೊಲೀಸ್ ಕಮೀಷನರ್‌ರವರ ಮುಂದೆ ತುರ್ತಾಗಿ ಪ್ರತಿಭಟನೆ ನಡೆಸಲಾಯಿತು.



ಪೊಲೀಸರ ನಿಷ್ಕ್ರಿಯತೆಯನ್ನು ಪ್ರತಿಭಟಿಸಿ, ಗೂಂಡಾಗಳ ಬಂಧನಕ್ಕೆ ಆಗ್ರಹಿಸಿ ಪೊಲೀಸ್ ಕಮಿಷನ್ ಕಚೇರಿಯೆದುರೇ ಪ್ರತಿಭಟನೆ. ಮಾತನಾಡುತ್ತಿರುವವರು ಕಾಂ. ವಿ.ಜೆ.ಕೆ. ಕಾಂ. ರಾಜನ್, ಪ್ರಕಾಶ್, ಗೋಪಾಲಗೌಡರು ಚಿತ್ರದಲ್ಲಿದ್ದಾರೆ.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ। ವಿ.ಜೆ.ಕೆ. ನಾಯರ್, ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ। ಕೆ.ಪ್ರಕಾಶ್, ಸಿಐಟಿಯು ರಾಜ್ಯ ಕಾರ್ಯದರ್ಶಿ ಕಾಂ। ಇ.ಕೆ.ಎನ್. ರಾಜನ್, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ। ಮೀನಾಕ್ಷಿ ಸುಂದರಂ, ಜಿಲ್ಲಾ ಮುಖಂಡರುಗಳಾದ ಗೋಪಾಲಗೌಡರ ನೇತೃತ್ವದಲ್ಲಿ ನಿಯೋಗ ಹೋಗಿ ಪೊಲೀಸ್ ಕಮೀಷನರ್‌ರವರನ್ನು ಭೇಟಿ ಮಾಡಿ ಕಾರ್ಮಿಕರ ಮೇಲೆ ದಾಳಿ ನಡೆಸಿದವರನ್ನು ಬಂಧಿಸುವಂತೆ ಮನವಿ ಅರ್ಪಿಸಲಾಯಿತು.

ಪ್ರತಿಭಟನೆಯಲ್ಲಿ ಬೆಂಗಳೂರಿನ ವಿವಿಧ ಕಾರ್ಖಾನೆಗಳ ಕಾರ್ಮಿಕರು, ಮುಖಂಡರುಗಳು ಭಾಗವಹಿಸಿದ್ದರು. ಕಾರ್ಮಿಕರ ಮೇಲೆ ದಾಳಿ ನಡೆಸಿದರೆ ಕಾರ್ಖಾನೆ ಮುಂದೆ ಸತ್ಯಾಗ್ರಹ ನಡೆಯದಂತೆ ಮಾಡಬಹುದು ಎಂಬ ಮೆಟಲ್ ಕ್ಲೋಸರ್ಸ್ ಮಾಲೀಕನ ತಂತ್ರ ವಿಫಲವಾಗಿದೆ. ದಾಳಿಗೆ ಅಂಜದ ಮೆಟಲ್ ಕ್ಲೋಸರ್ಸ್ ಕಾರ್ಮಿಕರು ಕಾರ್ಖಾನೆ ಮುಂದೆ ಅಕ್ಟೋಬರ್ 12 ರಿಂದ ಸರದಿ ಉಪವಾಸ ನಡೆಸುತ್ತಿದ್ದಾರೆ. ಸಮಸ್ಯೆ ಬಗೆಹರಿಯದಿದ್ದಲ್ಲಿ ಅಕ್ಟೋಬರ್ 25 ರಿಂದ ಕಾಂ। ಇ.ಕೆ.ಎನ್. ರಾಜನ್ ಕಾರ್ಖಾನೆ ಮುಂದೆ ಅನಿರ್ದಿಷ್ಟ ಉಪವಾಸ ನಡೆಸಲಿದ್ದಾರೆ. ಸರ್ಕಾರ ಕೂಡಲೇ ಮೆಟಲ್ ಕ್ಲೋಸರ್ಸ್ ಕಾರ್ಖಾನೆ ಕಾರ್ಮಿಕರ ಸಮಸ್ಯೆ ಬಗೆಹರಿಸಲು ಮಧ್ಯಪ್ರವೇಶಿಸುವಂತೆ ಒತ್ತಾಯಿಸಲು ಅಕ್ಟೋಬರ್ 26 ರಂದು ಬೆಂಗಳೂರಿನ ಸಮಸ್ತ ಕಾರ್ಮಿಕ ವರ್ಗ ಸಿಐಟಿಯು ನೇತೃತ್ವದಲ್ಲಿ ಮುಖ್ಯಮಂತ್ರಿಗಳ ನಿವಾಸಕ್ಕೆ ಮುತ್ತಿಗೆ ಹಾಕಲು ತೀರ್ಮಾನಿಸಲಾಗಿದೆ.

ಕಾರ್ಮಿಕರ ಮೇಲೆ ದಾಳಿ ನಡೆಸಿದವರನ್ನು ಈವರೆಗೂ ಬಂಧಿಸಲು ಪೊಲೀಸರು ವಿಫಲರಾಗಿದ್ದಾರೆ. ಆದರೆ ಮಾಲೀಕರು ನೀಡಿದ ಸುಳ್ಳು ದೂರುಗಳ ಮೇಲೆ ಕಾರ್ಮಿಕರನ್ನೇ ಬಂಧಿಸಲು ಮುಂದಾಗುತ್ತಿದ್ದಾರೆ.

● **ಮೆಲ್ಕಿಯೋರ್. ಆರ್.ಡಿ.**

# ಜಾಗತೀಕರಣ ಬಡವರನ್ನು ಇನ್ನಷ್ಟು ಬಡವರನ್ನಾಗಿಸುತ್ತದೆ

ಕರ್ನಾಟಕ ಪ್ರಾಂತ ರೈತ ಸಂಘದ ಮಂಗಳೂರು ತಾಲೂಕು ಸಮ್ಮೇಳನವು ಇತ್ತೀಚೆಗೆ ಮುನ್ನೂರು ಯುವಕ ಮಂಡಲದ ಸಭಾಂಗಣದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಸಮ್ಮೇಳನವನ್ನು ಉದ್ಘಾಟಿಸಿದ ಸಿ.ಪಿ.ಐ (ಎಂ)ನ ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್ ಮಾತನಾಡುತ್ತಾ 'ಕಳೆದ 6 ವರ್ಷದ ಎನ್‌ಡಿಎ ಆಡಳಿತದಲ್ಲಿ ಈ ದೇಶದ ಕೃಷಿಕರನ್ನು, ಬಡ ರೈತರನ್ನು ಕೇಳುವವರೇ ಇಲ್ಲದೆ ಅವರ ಬದುಕು ಯಾತನಾಮಯವಾಗಿತ್ತು. ಅವರು ಕಷ್ಟಪಟ್ಟು ಬೆಳೆಸಿದ ಬೆಳೆಗೆ ಸರಿಯಾದ ಬೆಲೆಯಿಲ್ಲದೆ ಕಂಗಾಲಾಗಿ ಸಾಲದ ಬಲೆಯಲ್ಲಿ ಸಿಲುಕುವಂತಾಯಿತು. ದೇಶದ ಅನೇಕ ರಾಜ್ಯಗಳಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂತು. ಜಾಗತೀಕರಣ, ಉದಾರೀಕರಣ ನೀತಿಗಳು ಬಡವರನ್ನು ಇನ್ನಷ್ಟು ಬಡವರನ್ನಾಗಿ ಮಾಡಿತು. ಇಂತಹ ಸಂದರ್ಭದಲ್ಲಿ ದೇಶದ ಪ್ರಜ್ಞಾವಂತ ಜನ ಎನ್‌ಡಿಎ ಸರಕಾರವನ್ನು ಅಧಿಕಾರದಿಂದ ಕೆಳಗಿಳಿಸಿತು. ಈ ವಾಸ್ತವ ಸ್ಥಿತಿಯನ್ನು ಈಗಿರುವ ಸರಕಾರ ರೈತರ, ಜನಸಾಮಾನ್ಯರ ಬದುಕು ಹೇಗಿದೆ ಎಂದು ಅರ್ಥ ಮಾಡಿಕೊಳ್ಳಬೇಕೆಂದು ಹೇಳಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಮಂಗಳೂರು ತಾಲ್ಲೂಕು ರೈತ ಸಂಘದ ಅಧ್ಯಕ್ಷರಾದ ರಾಮಚಂದ್ರ ಉಚ್ಚಿಲ್ ವಹಿಸಿದ್ದರು. ಸಮ್ಮೇಳನ ಉದ್ದೇಶಿಸಿ ಜಿಲ್ಲಾ ಅಧ್ಯಕ್ಷರಾದ ಅಬ್ರಹಾಂ ಕರ್ಕಡ, ಉಪಾಧ್ಯಕ್ಷರಾದ ಯು.ಬಿ.ಲೋಕಯ್ಯ, ಜತೆ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ, ಕೋಟೆಕಾರು ಬೀಡಿ ಯೂನಿಯನ್ ಕಾರ್ಯದರ್ಶಿ ಕೆ.ಮಂಜಪ್ಪ, ಡಿವೈಎಫ್ಐ ನ ಗಣೇಶ್ ಟೈಲರ್ ಮಾತನಾಡಿದರು.

ಯು.ಪಾಲ್ ಡಿಸೋಜ ಸ್ವಾಗತಿಸಿ ಸಂಜೀವ ಬಗ್ಗೆ ಸುಪ್ರಿಂ ಕೋರ್ಟು ಆದೇಶವನ್ನು ಹಿಂದಿನ ಎನ್.ಡಿ.ಎ ಸರಕಾರ ತಿದ್ದುಪಡಿ ಮಾಡಬಹುದಿತ್ತು. ಆದರೆ ಯಾವುದೇ ಕ್ರಮ ಕೈಗೊಳ್ಳದ ಎನ್‌ಡಿಎ ಸರಕಾರಕ್ಕೆ ಬಡವರ ಬಗ್ಗೆ ಕಿಂಚಿತ್ತೂ ಕಾಳಜಿ ಇರಲಿಲ್ಲ. ಇವತ್ತು ಮತ್ತೆ ಆ ಹೆಸರಿನಲ್ಲಿ ರಾಜಕೀಯ ಮಾಡುತ್ತಿದೆ ಎಂದವರು ಕಟುವಾಗಿ ಟೀಕಿಸಿದರು.

ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಸಂಘದ ಜಿಲ್ಲಾ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್‌ರವರು ರೈತರ ಬಗ್ಗೆ ಕಿಂಚಿತ್ತು ಕಾಳಜಿ ಇಲ್ಲದ ಬಿಜೆಪಿ ಇವತ್ತು ರಾಷ್ಟ್ರಧ್ವಜದ ಹೆಸರಿನಲ್ಲಿ ರಾಜಕೀಯ ಮಾಡುತ್ತಿದೆ. ರೈತರು, ಕೃಷಿ, ಕೂಲಿಕಾರ್ಮಿಕರು ಈ ಬಗ್ಗೆ ಎಚ್ಚರಿಕೆಯಿಂದಿರಬೇಕೆಂದು ತಿಳಿಸಿದರು. ಇನ್ನೋರ್ವ ಮುಖಂಡರಾದ ಯಾದವ ಶೆಟ್ಟಿ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದರು.

## ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಸಮ್ಮೇಳನಗಳು

ಎಲ್ಲರು ವಂದಿಸಿದರು.

**ಬೆಳ್ತಂಗಡಿ** ತಾಲೂಕು ಸಮ್ಮೇಳನ ತಾರೀಕು 15.09.2004 ರಂದು ಎಸ್.ಜಿ.ಬಿ. ಹಾಲ್‌ನಲ್ಲಿ ನಡೆಯಿತು. ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಬಯ್ಯಾರೆಡ್ಡಿಯವರು ಅರಣ್ಯ ಒತ್ತುವರಿ ಭೂಮಿಯಲ್ಲಿ ಕೃಷಿ ಮಾಡಿಕೊಂಡು ಅದನ್ನೇ ನಂಬಿ ಜೀವನ ನಡೆಸುತ್ತಿರುವ ಸಾವಿರಾರು ಬಡ ಕುಟುಂಬವನ್ನು ಒಕ್ಕಲೆಬ್ಬಿಸುವ ಹುನ್ನಾರ ನಡೆಸುತ್ತಿದ್ದು ಯಾವುದೇ ಕಾರಣಕ್ಕೂ ಅವರನ್ನು ಒಕ್ಕಲೆಬ್ಬಿಸಲು ಬಿಡುವುದಿಲ್ಲ ಎಂದು ಸಂಘ ರಾಷ್ಟ್ರಮಟ್ಟದಲ್ಲಿ ತೀರ್ಮಾನಿಸಿದೆ ಎಂದರು. ಈ ಎನ್.ಜಿ.ಒ ಹಾಲ್‌ನಿಂದ ರೈತರು ಘೋಷಣೆಗಳನ್ನು ಕೂಗುತ್ತಾ ಪೊಲೀಸ್ ಮೈದಾನದಲ್ಲಿ ಬಹಿರಂಗ ಸಭೆ ಮಾಡಿ ಸಮ್ಮೇಳನ ಕೊನೆಗೊಂಡಿತು. ಸಮ್ಮೇಳನದಲ್ಲಿ ಶಿವಕುಮಾರ್, ಬಿ.ಎಂ.ಭಟ್, ಮಂಜುನಾಥ್, ಹಮೀದ್, ಡಿವೈಎಫ್ಐ ಮುಖಂಡರು ಹಾಗೂ ಜನವಾದಿ ಮಹಿಳಾ ಸಂಘದ ಮುಖಂಡರುಗಳು ಭಾಗವಹಿಸಿದ್ದರು ಎಂದು ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿ ಪಾಪಚ್ಚನ್, ಹರಿದಾಸ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಂತರ ಉಜಿರೆ ಗ್ರಾಮದ ಲ್ಯಾಲ ಗಡಿಯಲ್ಲಿ ಸರಕಾರಿ ಜಾಗದಲ್ಲಿ ಭೂರಹಿತ ಕೃಷಿ ಕೂಲಿ ಕಾರ್ಮಿಕರು ನಿರ್ಮಿಸಿದ ನಗರಕ್ಕೆ ಸಂಘದ ಮುಖಂಡರಾದ ದಿವಂಗತ ಕೆ.ವಿ.ರಾವ್ (ಎಳಚಿತ್ತಾಯ) ನಗರ ಎಂಬ ನಾಮಫಲಕವನ್ನು ಬಯ್ಯಾರೆಡ್ಡಿಯವರು ಅನಾವರಣ ಮಾಡಿದರು.



ಸಮ್ಮೇಳನ ಉದ್ದೇಶಿಸಿ ಮಾತನಾಡುತ್ತಿರುವ ಶ್ರೀಯಾನ್ ರವರು

**ಕರ್ನಾಟಕದಲ್ಲಿನ ಪರ್ಯಾಯ ರಾಜಕಾರಣದ ಚಿಂತನ ಮಂಥನ ನಡೆದಿದೆ. ಇಂತಹ ಪರ್ಯಾಯ ರಾಜಕಾರಣಕ್ಕೆ ಮೂಲ ಆಧಾರವಾಗುವ ಸಂಗತಿಗಳಾವುವು? ರಾಜ್ಯದಲ್ಲಿ ಜನಪರ ಚಳುವಳಿಗಳು ಸಾಗಿಬಂದ ಹಾದಿ, ಅದರ ಏಳುಬೀಳಿನ ಅನುಭವಗಳತ್ತ ಪಕ್ಷಿನೋಟ ಹರಿಸುತ್ತಾ, ಪ್ರಸಕ್ತ ಸನ್ನಿವೇಶ ಪರ್ಯಾಯ ಗೊತ್ತುಗುರಿ ಹಾಗೂ ಸಾಧ್ಯತೆಗಳನ್ನು ಗುರುತಿಸಿದ್ದಾರೆ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿಯವರು**



# ಪರ್ಯಾಯ ರಾಜಕಾರಣದ ರಾಜಕೀಯ

ಪರ್ಯಾಯ ರಾಜಕಾರಣದ ಮಾತು ಇಂದು ಮತ್ತೆ ಮತ್ತ ಕೇಳಿಬರುತ್ತಿದೆ. ಪತ್ರಿಕಾಗೋಷ್ಠಿ, ವಿಚಾರಸಂಕಿರಣಗಳು, ಸಮಾವೇಶಗಳು ಜರುಗುತ್ತಿವೆ. ಚುನಾವಣೆಗೆ ಮೊದಲೇ ರಾಜ್ಯ ರೈತಸಂಘದ ನಾಯಕ ಪ್ರೊ. ಎಂ.ಡಿ.ನಂಜುಂಡ ಸ್ವಾಮಿಯವರ ನಿಧನದನಂತರ ನಡೆದ ಶ್ರದ್ಧಾಂಜಲಿ ಸಭೆಯ ಸಂದರ್ಭಗಳಲ್ಲಿ ಮತ್ತೆ ಮತ್ತೆ ಸೇರಿದ ದಲಿತ ಸಂಘರ್ಷ ಸಮಿತಿ ಹಾಗೂ ರೈತರ ಸಂಘದ ನಾಯಕರುಗಳ ಮನಸ್ಸಿನಲ್ಲಿ ಮೊದಲು ಈ ಬಗೆಯ ವಿಚಾರಗಳು ಮೂಡಿಬಂದವು. ದಲಿತ ಸಂಘರ್ಷ ಸಮಿತಿಯು ಬೇರೆ ಬೇರೆ ಬಣಗಳನ್ನು ಒಂದುಗೂಡಿಸಿ ದಲಿತರೆಲ್ಲರ ಐಕ್ಯತೆಯನ್ನು ಸಾಧಿಸಬೇಕು. ರಾಜ್ಯ ರೈತ ಸಂಘದ ಬಣಗಳನ್ನು ಒಂದುಗೂಡಿಸಿ ರಾಜ್ಯ ರೈತ ಸಂಘವನ್ನು ಒಗ್ಗೂಡಿಸಬೇಕು. ಆನಂತರ ದಲಿತ ಸಂಘರ್ಷ ಸಮಿತಿ ಮತ್ತು ರಾಜ್ಯ ರೈತ ಸಂಘಗಳನ್ನು ಒಗ್ಗೂಡಿಸಬೇಕು ಎಂಬ ಯೋಚನೆ ಚರ್ಚಿತವಾಯಿತು. ಇವುಗಳ ಜೊತೆಗೆ ಕಮ್ಯುನಿಸ್ಟ್ ಪಕ್ಷಗಳನ್ನು ಕೂಡ ಸೇರಿಸಿಕೊಂಡು ಪ್ರಗತಿಪರ ಶಕ್ತಿಗಳ ಐಕ್ಯತೆಯನ್ನು ಸಾಧಿಸಬೇಕೆಂಬ ದಿಶೆಯಲ್ಲಿ ದಲಿತ, ರೈತ, ಕಮ್ಯುನಿಸ್ಟ್ ಚಳುವಳಿಗಳನ್ನು ಒಳಗೊಂಡ ವಿಚಾರಸಂಕಿರಣ ಹಾಗೂ ಸಭೆಗಳು ನಡೆದವು. ಇವುಗಳ ಫಲವಾಗಿ ಕರ್ನಾಟಕ ಜನಪರ ಚಳುವಳಿಗಳ ಒಕ್ಕೂಟವೊಂದನ್ನು ರೂಪಿಸಿಕೊಳ್ಳಬೇಕೆಂಬ ಚರ್ಚೆಗಳೂ, ಅದಕ್ಕಾಗಿ ಒಂದು ಸಂಚಾಲಕ ಸಮಿತಿಯೂ ಅಸ್ತಿತ್ವಕ್ಕೆ ಬಂತು. ಕೋಮುವಾದಿಗಳನ್ನು ಸೋಲಿಸಲು ಈ ಎಲ್ಲಾ ಸಂಘಟನೆಗಳೂ ಕೆಲಸ ಮಾಡಬೇಕೆಂಬ ಕರೆಯನ್ನು ನೀಡಿದವು.

**ಚುನಾವಣಾ ನಂತರದ ಆತುರ**

ಚುನಾವಣಾ ನಂತರದ ದಿನಗಳಲ್ಲಿ ಕರ್ನಾಟಕದಲ್ಲಿ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದನಂತರ, ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯವಾಗಿ ಜಾತ್ಯತೀತ ಶಕ್ತಿಯಾಗಿ ಜನಕ್ಕೆ ಪರ್ಯಾಯ ನೀಡುತ್ತಿದ್ದ ಜನತಾದಳದ ಶಕ್ತಿಯ ಸೀಮೆಗಳು ಸ್ಪಷ್ಟವಾಗಿ ಗೋಚರವಾದ ನಂತರ ಈ ಸಂದರ್ಭವನ್ನು ಬಳಸಿಕೊಳ್ಳಲು ತ್ವರಿತವಾಗಿ ರಾಜಕೀಯ ಪಕ್ಷವನ್ನು ಸ್ಥಾಪಿಸುವ ಆತುರ ಇಂದು ಎದ್ದು ಕಾಣುತ್ತಿದೆ. ಹೀಗಾಗಿ ದಲಿತ ಸಂಘರ್ಷ ಸಮಿತಿಯ ಎಲ್ಲಾ ಬಣಗಳ ಹಾಗೂ ರೈತ ಸಂಘದ ಎರಡು ಬಣಗಳ ಐಕ್ಯತೆಯನ್ನು ಸಾಧಿಸುವ ಮಾತನ್ನು ಅಲ್ಲಿಯೇ ಕೈಬಿಟ್ಟು ದಲಿತ ಸಂಘರ್ಷ ಸಮಿತಿಯ ಒಂದು ಬಣ ರಾಜ್ಯ ರೈತ ಸಂಘದ ಒಂದು ಬಣ ಇಂದು ಪರ್ಯಾಯ ರಾಜಕಾರಣದ ಬಗ್ಗೆ ವಿಚಾರ ಸಂಕಿರಣ, ಪತ್ರಿಕಾಗೋಷ್ಠಿಗಳನ್ನು ನಡೆಸುತ್ತಿವೆ.

**ಸಮಾಜದ ಚಲನೆ ಮತ್ತು ಚಳುವಳಿಗಳು ಹಾಗೂ ಸಂಘಟನೆಗಳು**

ತರಾತುರಿಯಲ್ಲಿ ರಾಜಕೀಯ ಪಕ್ಷವೊಂದನ್ನು ಸ್ಥಾಪಿಸುವ ಆತುರದಲ್ಲಿ ಅನೇಕ ಪ್ರಮುಖ ಸಂಗತಿಗಳನ್ನು, ಪರ್ಯಾಯ ರಾಜಕಾರಣದ ಸಂದರ್ಭದಲ್ಲಿ ಚಳುವಳಿಗಳನ್ನು ನಡೆಸಿದವರು ಮರೆಯಲಾಗದ, ಕಡೆಗಣಿಸಲಾಗದ ಅಂಶಗಳನ್ನು ನಿರ್ಲಕ್ಷಿಸಲಾಗುತ್ತಿದೆ. ಇದು ಇಂತಹ ಯಾವುದೇ ಕ್ರಿಯೆಯ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ. ಈ ಎಲ್ಲಾ ಕ್ರಿಯೆಗಳು ಯಾವ ಸಮಾಜದಲ್ಲಿ ನಡೆಯುತ್ತಿವೆಯೋ ಆ ಸಮಾಜದ ಅಗತ್ಯ ಸ್ವರೂಪಗಳನ್ನು ಕಡೆಗಣಿಸಲಾಗುತ್ತಿದೆ. ಯಾವುದೇ ರಾಜಕೀಯ, ಸಾಮಾಜಿಕ ಚಳುವಳಿ, ಪಕ್ಷ, ಸಂಘಟನೆ ಸಮಾಜದ ಚಲನೆಯ ಭಾಗವಾಗಿ ಮಾತ್ರ ಅಸ್ತಿತ್ವಕ್ಕೆ ಬರುತ್ತದೆ. ಸಮಾಜದ ಮುಂಚಲನೆಯ ಹಾಗೂ ಹಿಂಚಲನೆಯ ಸಂಘರ್ಷದಲ್ಲಿ ಹುಟ್ಟಿಬರುತ್ತವೆ. ಈ ಚಲನೆಯ ಸಾಧಕವಾಗಿ ಮಾತ್ರ ಈ ಪಕ್ಷಗಳಿಗೆ, ಸಂಘಟನೆಗಳಿಗೆ ಅಥವಾ ಚಳುವಳಿಗೆ ಪ್ರಸುತ್ತತೆ. ಈ ಚಲನೆಗೆ ಸಾಧಕವಾಗಿಲ್ಲದಿದ್ದರೆ ಅವು ಅಪ್ರಸ್ತುತವಾಗುತ್ತವೆ. ಇದು ದಲಿತ ಚಳುವಳಿ ಹಾಗೂ ರಾಜ್ಯ ಸಂಘಟನೆಗಳಿಗೂ ಅನ್ವಯಿಸುತ್ತದೆ. ಕಮ್ಯುನಿಸ್ಟ್ ಚಳುವಳಿಗಳಿಗೂ ಅನ್ವಯಿಸುತ್ತದೆ. ಸಮಾಜದ ಮುಂಚಲನೆಯ ಆಶಯದಿಂದ ಮೂಡಿದ ಈ ಚಳುವಳಿಗಳು ಸಮಾಜದ ಮುಂಚಲನೆಗೆ ಸಾಧಕವಾ ಗಿರುವಷ್ಟು ಸಮಯವೂ ವೃದ್ಧಿಸುತ್ತವೆ. ಜನರನ್ನು ಸೆಳೆಯುತ್ತವೆ. ಅಂದಿನ ಸಮಾಜದ ವಾಸ್ತವಿಕ ಪರಿಸ್ಥಿತಿಯಲ್ಲಿ ಗಟ್ಟಿಯಾದ ಕಾಲನ್ನೂರಿ ಸಮಾಜದ ಮುಂಚಲನೆಯ ಅಗತ್ಯಗಳನ್ನು ಅರಿತುಕೊಳ್ಳುತ್ತಾ ಅದಕ್ಕೆ ಸಂವಾದಿಯಾಗಿ ಸ್ಪಂದಿಸುತ್ತಾ ಇರುವ ಕಾಲವೂ ಬೆಳೆಯುತ್ತಾ ಹೋಗುತ್ತವೆ. ಈ ಕ್ರಿಯೆ ಸ್ಥಗಿತವಾದಾಗ ನಿನ್ನೆಯ ಮೊನ್ನೆಯ ದಿನಗಳಲ್ಲಿಯೇ ಉಳಿದು ಇಂದಿನ ಅಗತ್ಯಗಳಿಗೆ ಸ್ಪಂದಿಸದಾದಾಗ, ಸಮಾಜದ ಮುಂಚಲನೆಯ ಸಾಧಕವಾಗದೆ ಜಡವಾದಾಗ ದುರ್ಬಲವಾಗುತ್ತವೆ. ನಶಿಸಿ ಹೋಗುತ್ತವೆ ಕೂಡಾ.

**ಜಿ.ಎನ್.ನಾಗರಾಜ್**

> **ದಲಿತ ಹಾಗೂ ರೈತ ಚಳುವಳಿಗಳು ಮತ್ತೆ ತಮ್ಮ ಹಿಂದಿನ ಸ್ಥಿತಿಯತ್ತ ಮರಳಬೇಕಾದರೇ ತಮ್ಮ ಸಂಘಟನೆ, ಚಳುವಳಿಗಳ ಕೊರತೆ, ವೈಫಲ್ಯಗಳ ಬಗ್ಗೆ ಚಿಂತನೆ ಮಾಡದೆ ಅದನ್ನು ಸರಿಪಡಿಸಿಕೊಳ್ಳಲು ದೃಢವಾದ ಪ್ರಯತ್ನ ಮಾಡದೆ ಸಾಧ್ಯವಾದೀತೆ?**

**ಭೂಸುಧಾರಣೆ, ಹಸಿರುಕ್ರಾಂತಿಯ ಫಲಗಳು**

ಕರ್ನಾಟಕದಲ್ಲಿ 70 ರ ದಶಕದಲ್ಲಿ ಬೆಳೆದ ದಲಿತ ಚಳುವಳಿ, ದಲಿತ ಸಂಘರ್ಷ ಸಮಿತಿ, 80 ರ ದಶಕದ ರಾಜ್ಯ ರೈತ ಸಂಘ ತಂತಾನೆ ಸೃಷ್ಟಿಯಾದವುಗಳಲ್ಲ. ಅಂದಿನ ಸಮಾಜದ ವಾಸ್ತವದ ಫಲಗಳು. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಭಾರತದಲ್ಲಿ, ಕರ್ನಾಟಕದಲ್ಲಿ ಆಳಿದ ಸರ್ಕಾರಗಳು ಅನುಸರಿಸಿದ ನೀತಿಗಳ ಫಲವಾಗಿ ಅಂದಿನ ಸಮಾಜದ ರಚನೆಯಲ್ಲಿ ಸಾಮಾಜಿಕ ಸಂಬಂಧಗಳಲ್ಲಿ ಕೆಲವು ಮಾರ್ಪಾಡು ಗಳು ಮೂಡಿದವು. ಅದರಲ್ಲಿ ಭೂಸುಧಾರಣೆ, ನೀರಾವರಿ ವಿಸ್ತರಣೆ, ಹಸಿರು ಕ್ರಾಂತಿ, ಶಿಕ್ಷಣದ ವಿಸ್ತರಣೆ, ಸರ್ಕಾರಿ-ಅರೆ ಸರ್ಕಾರಿ ಸಂಸ್ಥೆಗಳ ವಿಸ್ತರಣೆ ಇವು ಪ್ರಮುಖವಾದವು. ಅಂದು ಜಾರಿಗೆ ತಂದ ಸೀಮಿತ ಸ್ವರೂಪದ ಭೂಸುಧಾರಣೆ ಹಾಗೂ ಹಸಿರುಕ್ರಾಂತಿಯ ಫಲವಾಗಿ ಕೃಷಿಯಲ್ಲಿ ಸಾರ್ವಜನಿಕ ಬಂಡವಾಳದ ಸೀಮಿತ ಹೂಡಿಕೆಗಳ ಫಲವಾಗಿ ಗೇಣಿದಾರರಿಗೆ, ಕೂಲಿಕಾರರಿಗೆ ಭೂಮಿ ದೊರೆಯಲಿಲ್ಲ. ಭೂ ಮಾಲಿಕತ್ವ ತೊಲಗಲಿಲ್ಲ. ಬದಲಾಗಿ ಕೃಷಿಯಲ್ಲಿ ಬಂಡವಾಳಶಾಹಿಯ ಪ್ರವೇಶವಾಯಿತು. ದರ್ಪ ದಬ್ಬಾಳಿಕೆಗಳ ಆಗರವಾಗಿದ್ದ ಪಾಳೆಯಗಾರಿ ಭೂಮಾಲಕ ಅರೆ ಪಾಳೆಯಗಾರಿ ಭೂಮಾಲಕನಾಗಿ, ಬಂಡವಾಳಶಾಹಿ ಭೂಮಾಲಕ'ನಾಗಿ ಪರಿವರ್ತಿತನಾದ. ಕೆಲವರು ಶ್ರೀಮಂತ ರೈತರಾದರು. ಗೇಣಿ ಭೂಮಿ ಪಡೆದ ಕೆಲವರು ಮಧ್ಯಮವರ್ಗದ ರೈತರಾದರು. ಆದರೆ ಗೇಣಿದಾರರ ದೊಡ್ಡ ಭಾಗ ಹೊರದಬ್ಬಲ್ಪಟ್ಟು ಕೂಲಿಕಾರರಾದರು, ಸಣ್ಣ ರೈತರು ಭೂಮಾಲಕರು ಅಳೆದುಕೊಡುತ್ತಿದ್ದ ಧಾನ್ಯ ರೂಪದ ಕೂಲಿಗೆ ಬದಲಾಗಿ ಹಣರೂಪದ ಕೂಲಿ ರೂಢಿಗೆ ಬಂದಿತು. ಪಾಳೆಯಗಾರಿ ಶೋಷಣೆಯ ಜಾಗದಲ್ಲಿ ಅರೆ ಪಾಳೆಯಗಾರಿ ಹಾಗೂ ಬಂಡವಾಳಶಾಹಿ ಶೋಷಣೆ ಅಸ್ತಿತ್ವಕ್ಕೆ ಬಂತು. ಇದು ಶತಮಾನಗಳಿಂದ ಶೋಷಿತರಾದ ದಲಿತ ಕೂಲಿಕಾರರಿಗೆ ಸಂಘಟನೆ ಮಾಡಿಕೊಳ್ಳುವ ಅವಕಾಶ ಹಾಗೂ ಅವಶ್ಯಕತೆಯನ್ನು ಮೂಡಿಸಿದವು. ಜೊತೆಗೆ ಶಿಕ್ಷಣ, ಉದ್ಯೋಗ ಪಡೆದ ದಲಿತ ಮಧ್ಯಮವರ್ಗ ಮತ್ತು ಅದರಲ್ಲಿನಿಂದ ದಲಿತ ಚಿಂತಕರು ಉದಯಿಸಿದರು. ಇವುಗಳ ಜೊತೆಗೆ ಭೂಸುಧಾರಣೆ, ಹಸಿರುಕ್ರಾಂತಿಗಳ ಸೀಮಿತತೆಯಿಂದ, ಶಿಕ್ಷಣ ಉದ್ಯೋಗದ ಬೆಳವಣಿಗೆ ಕುಂಠಿತಗೊಳ್ಳಲು ಆರಂಭಿಸಿದಾಗ ಕಾಂಗ್ರೆಸ್ ಪಕ್ಷದ ವಿರುದ್ಧ ಅತೃಪ್ತಿ, ಅಸಮಾಧಾನಗಳು ಹಬ್ಬಿದವು. 1967 ರಲ್ಲಿ ದೇಶದ ಎಂಟು ರಾಜ್ಯಗಳಲ್ಲಿ ಕಾಂಗ್ರೆಸ್ ಸೋತು ಹೋಯಿತು. ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರ ಉಳಿಸಿಕೊಂಡರೂ ಕೂಡಾ ಕಡಿಮೆ ಸ್ಥಾನಗಳನ್ನು ಪಡೆಯಿತು. ಸಮಾಜವಾದಿ ಪಕ್ಷದ ಹಲವರು ವಿರೋಧ ಪಕ್ಷದ ಶಾಸಕರಾಗಿ ಆಯ್ಕೆಯಾದರು. ಈ ಹಿನ್ನೆಲೆಯಲ್ಲಿ ಶಿಕ್ಷಿತ ದಲಿತ ಚಿಂತಕರಿಂದ 70 ರ ದಶಕದಲ್ಲಿ ದಲಿತ ಸಾಹಿತ್ಯ, ದಲಿತ ಜೀವನದ ಬಗೆಗಿನ ಚಿಂತನೆಗಳು ಮೂಡಿ ಬೆಳೆದವು. ದಲಿತ ಸಂಘರ್ಷ ಸಮಿತಿಯ ಹುಟ್ಟಿಗೆ ಕಾರಣವಾಯಿತು. ಹಾಗೆಯೇ ದೇಶದ ಬಂಡವಾಳಶಾಹಿಗಳಿಂದ ಕೃಷಿ ಫಸಲುಗಳ ಬೆಲೆಯನ್ನು ತಗ್ಗಿಸುವ ಹಾಗೂ ಕೃಷಿ ಸಾಮಗ್ರಿಗಳ ಬೆಲೆ ಏರಿಸುವ ಮೂಲಕ ಕೃಷಿ ಬಂಡವಾಳಶಾಹಿಗಳ ಹಾಗೂ ರೈತರ ಶೋಷಣೆಗೆ 70 ರ ದಶಕದ ಕೊನೆಯ ವರ್ಷಗಳಲ್ಲಿ ತೀವ್ರತರವಾದ 80 ರ ದಶಕದಲ್ಲಿ ರೈತ ಚಳುವಳಿಗೆ ಹಾಗೂ ರಾಜ್ಯ ರೈತ ಸಂಘದ ಉದಯಕ್ಕೆ ಕಾರಣವಾಯಿತು. ದಲಿತ ಚಳುವಳಿ, ರಾಜ್ಯ ರೈತ ಸಂಘದ ಚಳುವಳಿಗಳು ಬೆಳೆದವು. ರಾಜ್ಯದ ಸಾಮಾಜಿಕ ಚಳುವಳಿ ಹಾಗೂ ರಾಜಕೀಯದ ಮೇಲೆ ಪರಿಣಾಮ ಬೀರಿದವು.

**ದಲಿತ, ರೈತ ಚಳುವಳಿಗಳ ಕುಗ್ಗುವಿಕೆ, ವಿಭಜನೆ**

ದಲಿತರ ಹಾಗೂ ರೈತರ ಕೆಲವು ಪ್ರಶ್ನೆಗಳಿಗೆ ಪರಿಹಾರ ದೊರೆಯಿತು. ಆ ಸಮಸ್ಯೆಗಳು ತೀವ್ರವಾಗಿರುವವರೆಗೂ, ಎರಡೂ ಚಳುವಳಿಗಳೂ ಆಯಾ ಜನ ವಿಭಾಗಗಳನ್ನು ಸೆಳೆದವು. ಆದರೆ ದಲಿತರ ಎಲ್ಲಾ ದಲಿತರ ಅದರಲ್ಲಿಯೂ ಗ್ರಾಮೀಣ ಪ್ರದೇಶದ ದಲಿತರ ಜೀವನದ ಪ್ರಮುಖ ಪ್ರಶ್ನೆಗಳನ್ನು, ಅಸ್ಪೃಶ್ಯತೆ, ದಬ್ಬಾಳಿಕೆ, ಭೂಮಿ, ಕೂಲಿ, ಉದ್ಯೋಗದ ಪ್ರಶ್ನೆಗಳನ್ನು ಗಂಭೀರವಾಗಿ ಎತ್ತಿಕೊಳ್ಳದೇ ಹೋದಾಗ ದಲಿತ ಚಳುವಳಿಗೆ ದಲಿತ ಸ್ಪಂದನೆ ಕಡಿಮೆಯಾಗ ತೊಡಗಿತು. ಅದೇ ರೈತರ ದಿನನಿತ್ಯದ ಕೆಲವು ಪ್ರಮುಖ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತಿದ್ದ ರಾಜ್ಯ ರೈತ ಸಂಘ ನಂತರ ರೈತರ ಬದಲಾಗುತ್ತಿದ್ದ ಪ್ರಶ್ನೆಗಳನ್ನು ಎತ್ತಿಕೊಳ್ಳುವುದನ್ನು ಕೈಬಿಟ್ಟಾಗ, ಗ್ಯಾಟ್, ಡೆಂಕಲ್ ಮೊದಲಾದ ಪ್ರಶ್ನೆಗಳಿಗೆ ರೈತರ ದಿನನಿತ್ಯದ ಬದುಕಿನ ಪ್ರಶ್ನೆಗಳನ್ನು ಜೋಡಿಸಿಕೊಳ್ಳುವುದರಲ್ಲಿ ವಿಫಲವಾದಾಗ ಬುಡಮಟ್ಟದ ರೈತ ಕಾರ್ಯಕರ್ತರ ಹಂಬಲ, ಬಯಕೆಗಳಿಗೆ ಕಿವುಡಾಗಿ ವಿಶ್ವಮುಖಿ ಯಾದಾಗ ರಾಜ್ಯ ರೈತ ಸಂಘದ ಬಲ ಕುಗ್ಗಿತು. ದಕ್ಷಿಣ ಕರ್ನಾಟಕದಿಂದ ಉತ್ತರ ಕರ್ನಾಟಕಕ್ಕೆ ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕದ ಕೆಲ ಪಾಕೆಟ್‌ಗಳಿಗೆ ಸೀಮಿತವಾಯಿತು.

> **ವಿಸ್ತಾರವಾದ ಜನ ಚಳುವಳಿಗಳೇ ರಾಜಕೀಯದ ಆಧಾರವಾದಾಗ ಮಾತ್ರ ಪರ್ಯಾಯ ರಾಜಕಾರಣ ಎಂಬ ಮಾತು ಸಲ್ಲುತ್ತದೆ. ಜನಸಾಮಾನ್ಯರೇ ಆ ಪಕ್ಷದೊಳಗೆ ಸಂಘಟನೆಯೊಳಗೆ ನಿರ್ಧಾರಕ ಶಕ್ತಿಗಳಾಗಬೇಕು.**

ಹೀಗೆ ಒಟ್ಟು ರೈತ ಸಮುದಾಯದ, ದಲಿತ ಸಮುದಾಯದ ಪ್ರಶ್ನೆಗಳನ್ನು ನಿರ್ಲಕ್ಷ್ಯ ಮಾಡುವುದರಲ್ಲಿ ನಾಯಕರ ವ್ಯಕ್ತಿನಿಷ್ಠೆಯ ಮನೋಭಾವ, ಸ್ವಾರ್ಥಗಳೂ ಗಣನೀಯವಾಗಿ ಪರಿಣಾಮ ಬೀರಿವೆ.

ಚಳುವಳಿಯ ಅಧೀನದಲ್ಲಿ ಜನಸಮುದಾಯದ ಅಧೀನದಲ್ಲಿ ನಾನೋ, ನನ್ನ ಅಧೀನದಲ್ಲಿ ಜನಸಮುದಾಯವೋ ಎಂಬ ಮನೋಭಾವನೆ ಮೇಲಿನಿಂದ ಆರಂಭವಾಗಿ ಕೆಳಗಿನವರೆಗೂ ಹಬ್ಬಿತು.ಇದಕ್ಕೆ ಮುಖ್ಯವಾದ ಕಾರಣ ಆಯಾ ಜನಸಮುದಾಯದ ಅತ್ಯಂತ ಕೆಳಮಟ್ಟದ ಕಾರ್ಯಕರ್ತರ, ಹಳ್ಳಿಗಳ ಸಾಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ಪಡೆಯುವ, ಅವುಗಳನ್ನು ಮಾನ್ಯ ಮಾಡುವಂತೆ ಒತ್ತಾಯಿಸುವ ಸಂಘಟನಾ ವಿಧಾನಗಳೇ ಇಲ್ಲ; ಮುಖ್ಯವಾಗಿ ಸದಸ್ಯತ್ವ, ಗ್ರಾಮ ಘಟಕಗಳು, ಸಮಯ ಬದ್ಧವಾಗಿ ಸಮ್ಮೇಳನಗಳು ನಾಯಕತ್ವದ ಆಯ್ಕೆಯಲ್ಲಿ ಸಾಮಾನ್ಯ ಸದಸ್ಯರ ನಿಯಂತ್ರಣ ಇವುಗಳಿಗೆ ಅವಕಾಶವಿಲ್ಲದೆ ಹೋದದ್ದು. ಇದು ವ್ಯಕ್ತಿ ನಿಷ್ಠತೆ ರಾರಾಜಿಸಲು ಹಾಗೂ ತಪ್ಪು ದಾರಿಗೆ ತಿರುಗಲು ಅವಕಾಶವಾಯಿತು. ಅದರಲ್ಲಿ ರಾಜಕೀಯ ತಪ್ಪುಗಳು, ಆರ್ಥಿಕ ಭ್ರಷ್ಟತೆಗಳೂ ಸೇರಿವೆ.

**ರಾಜಕೀಯ ತಪ್ಪುಗಳು**

ಅದೇ ಸಂದರ್ಭದಲ್ಲಿ ರಾಜಕೀಯ ಅಧಿಕಾರದ ಆಸೆಯಿಂದ ಎಸಗಿದ ತಪ್ಪುಗಳು, ಸಮಯ ಸಂದರ್ಭಗಳನ್ನು ವಾಸ್ತವ ಪರಿಸ್ಥಿತಿಯನ್ನು ಗಮನಿಸದೆ ತೆಗೆದುಕೊಂಡ ರಾಜಕೀಯ ನಿರ್ಧಾರಗಳು, ರಾಜಕೀಯ ಸ್ವತಂತ್ರತೆಯನ್ನು ಕಾಯ್ದುಕೊಳ್ಳುವ ದೃಢ ಪ್ರಯತ್ನಗಳ ಅಭಾವ ಇವೂ ಕೂಡಾ ಈ ಚಳುವಳಿಗಳ ವಿಘಟನೆಗಳಿಗೆ ಕಾರಣವಾಗಿವೆ.

ಪುಟ 8 ಕ್ಕೆ

# ಅಗ್ಗದ ಅಕ್ಕಿ ಗೋಧಿ ಅಧ್ವಾನ ನೇರ ಸಂಘ

**ಬಡತನದ ರೇಖೆಯಿಂದ ಕೆಳಗಿರುವ ಕುಟುಂಬಗಳಿಗೆ ಅಗ್ಗದ ದರದಲ್ಲಿ ಆಹಾರಧಾನ್ಯಗಳನ್ನು ಒದಗಿಸುವ ಸರ್ಕಾರದ ಭರವಸೆ ತಲೆಕೆಳಗಾಗಿದೆ. ಕೆ.ಜಿ.ಗೆ 3 ರೂ.ದರದಲ್ಲಿ ಅಕ್ಕಿ, ಗೋದಿ ವಿತರಣೆ ಆರಂಭವಾಗಿದ್ದರೂ, ಹಳದಿ ಪಡಿತರ ಕಾರ್ಡುಗಳನ್ನು ಕಡಿತ ಮಾಡುವ ಸರ್ಕಾರದ ಆದೇಶದಿಂದಾಗಿ ಅರ್ಹ ಬಿಪಿಎಲ್ ಕುಟುಂಬಗಳಿಗೆ ಆಹಾರದಾನ್ಯ ವಿತರಣೆ ಆಗುತ್ತಿಲ್ಲ. ಎಲ್ಲ ಬಡವರಿಗೆ ಹಳದಿ ಪಡಿತರ ಕಾರ್ಡುಗಳನ್ನು ವಿತರಣೆ ಮಾಡಿ ಅಗ್ಗದ ದರದ ಅಕ್ಕಿ, ಗೋದಿ, ಸೀಮೆ ಎಣ್ಣೆ ಮೊದಲಾದವುಗಳನ್ನು ನೀಡಬೇಕೆಂದು ಒತ್ತಾಯಿಸಿ ಅಕ್ಟೋಬರ್ 29ರಂದು ರಾಜ್ಯಾದ್ಯಂತ ತಹಶೀಲ ಕಛೇರಿಗಳಿಗೆ ಮುತ್ತಿಗೆ ಹಾಕುವ ಚಳುವಳಿಗೆ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ಕರೆ ನೀಡಿರುವ ಹಿನ್ನೆಲೆಯಲ್ಲಿ ಈ ಲೇಖನ.**

ಕಡುಬಡತನದಲ್ಲಿದ್ದ ವ್ಯಕ್ತಿಯೊಬ್ಬ ಹಳದಿ ಪಡಿತರ ಕಾರ್ಡು ಸಿಗಲಿಲ್ಲ ಹಾಗೂ ಇರುವ ಹಸಿರು ಕಾರ್ಡ್‌ಗೆ ನ್ಯಾಯಬೆಲೆ ಅಂಗಡಿಯವರು ಪಡಿತರ ಆಹಾರಧಾನ್ಯ ಕೊಡಲಿಲ್ಲ ಎಂದು ಬೇಸತ್ತು ಮನೆ ಮುಂದೆ ಇದ್ದ ವಿದ್ಯುತ್ ಕಂಬ ಹತ್ತಿ, ವಿದ್ಯುತ್ ತಂತಿ ಹಿಡಿದು ಆತ್ಮಹತ್ಯೆ ಮಾಡಿಕೊಂಡ ಹೃದಯ ವಿದ್ರಾವಕ ಘಟನೆಯೊಂದು ಚಾಮರಾಜನಗರ ತಾಲೂಕಿನ ಮಸಣಾಪುರ ಗ್ರಾಮದಲ್ಲಿ ಇದೇ ಅಕ್ಟೋಬರ್ 9 ರಂದು ಜರುಗಿದೆ.

ನಂಜಾನಾಯ್ಕ ಎಂಬವರ ಪುತ್ರ ಸಿದ್ಧನಾಯ್ಕ (35) ಎಂಬಾತನೇ ಮೃತಪಟ್ಟ ದುರ್ದೈವಿ. ಬಡತನದ ಬೇಗೆಯಲ್ಲಿ ಬೇಯುತ್ತಿದ್ದ ಈತ ಕೂಲಿ ಕೆಲಸ ಮಾಡಿ ಬಂದ ಹಣದಿಂದ ಹೇಗೋ ಕುಟುಂಬದ ನಿರ್ವಹಣೆ ಮಾಡುತ್ತಿದ್ದ. ಹಸಿರು ಕಾರ್ಡನ್ನು ವಾಪಸ್ ತೆಗೆದುಕೊಂಡು ಹಳದಿ ಪಡಿತರ ಕಾರ್ಡ್ ನೀಡುವುದಕ್ಕೆ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಈತನ ಕುಟುಂಬವನ್ನು ಕೈಬಿಡಲಾಗಿತ್ತು. ಹಸಿರು ಕಾರ್ಡನ್ನು ಬಳಸಿಕೊಂಡೇ ಗ್ರಾಮದ ನ್ಯಾಯ ಬೆಲೆ ಅಂಗಡಿಯಿಂದ ತಿಂಗಳಿಗೆ ಆಗುವಷ್ಟು ಆಹಾರಧಾನ್ಯಗಳನ್ನು ಪಡೆದುಕೊಂಡು ಇದುವರೆಗೆ ಆತ ಜೀವನ ಸಾಗಿಸುತ್ತಿದ್ದ.

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ ಬಂದ ಸುತ್ತೋಲೆಗೆ ಅನುಗುಣವಾಗಿ ಜಿಲ್ಲೆಯಲ್ಲಿ ಹೆಚ್ಚುವರಿ ಪಡಿತರ ಕಾರ್ಡುಗಳನ್ನು ಕಡಿತಗೊಳಿಸುವಂತೆ ಜಿಲ್ಲಾಧಿಕಾರಿಗಳು ಆದೇಶಿಸಿದ್ದರು. ಈ ಹಿನ್ನೆಲೆಯಲ್ಲಿ ಅಕ್ಟೋಬರ್ 8 ರಂದು ಶುಕ್ರವಾರ ಪಡಿತರ ಪದಾರ್ಥಗಳನ್ನು ಕೊಳ್ಳಲು ಹಸಿರು ಕಾರ್ಡ್‌ನೊಂದಿಗೆ ನ್ಯಾಯಬೆಲೆ ಅಂಗಡಿಗೆ ಹೋಗಿದ್ದ ಸಿದ್ಧನಾಯ್ಕನಿಗೆ ಹಸಿರು ಕಾರ್ಡ್‌ಗೆ ಆಹಾರ ಪದಾರ್ಥಗಳನ್ನು ನೀಡಲಾಗುವುದಿಲ್ಲ; ಹಳದಿ ಪಡಿತರ ಕಾರ್ಡ್ ತಂದರೆ ಮಾತ್ರ ಪಡಿತರ ಆಹಾರ ಧಾನ್ಯಗಳನ್ನು ನೀಡುವುದಾಗಿ ನ್ಯಾಯಬೆಲೆ ಅಂಗಡಿ ಮಾಲೀಕ ತಿಳಿಸಿ ಆತನನ್ನು ವಾಪಸ್ ಕಳುಹಿಸಿದ್ದ. ಈ ಬಗ್ಗೆ ಗ್ರಾಮ ಲೆಕ್ಕಿಗನನ್ನು ಕೇಳಿದಾಗ ಆತ ಹಸಿರು ಕಾರ್ಡ್‌ಗಳನ್ನು ಸರ್ಕಾರ ರದ್ದುಮಾಡಿರುವ ವಿಷಯವನ್ನು ತಿಳಿಸಿದ. ತನಗೆ ಹಳದಿ ಕಾರ್ಡ್ ನೀಡುವಂತೆ ಸಿದ್ಧನಾಯ್ಕ ಗ್ರಾಮ ಲೆಕ್ಕಿಗನಿಗೆ ಮನವಿ ಮಾಡಿದಾಗ ಈಗ ಹಳದಿ ಕಾರ್ಡ್ ವಿತರಣೆ ಸಾಧ್ಯವಿಲ್ಲ ಎಂದು ಗ್ರಾಮಲೆಕ್ಕಿಗ ನಿರಾಕರಿಸಿದ.

ಕಳೆದ ಎರಡು ದಿನಗಳಿಂದ ಮನೆಯಲ್ಲಿ ಯಾವುದೇ ಆಹಾರ ಪದಾರ್ಥಗಳಿಲ್ಲದೆ ಸಿದ್ಧನಾಯ್ಕನ ಪತ್ನಿ ಮತ್ತು ಮೂರು ಮಕ್ಕಳು, ಊಟವಿಲ್ಲದೆ ಕಂಗಾಲಾಗಿದ್ದರು. ಜಿಗುಪ್ಸೆಗೊಂಡು, ದಿಕ್ಕು ತೋಚದವನಾದ ಆತ ಮನೆ ಮುಂದಿದ್ದ ಕಬ್ಬಿಣದ ವಿದ್ಯುತ್ ಕಂಬವನ್ನು ಹತ್ತಿ, ವಿದ್ಯುತ್ ತಂತಿಯನ್ನು ಕೈಯಲ್ಲಿ ಹಿಡಿದು, ವಿದ್ಯುತ್ ಪ್ರಹಾರಕ್ಕೊಳಗಾಗಿ, ಮೇಲಿನಿಂದ ನೆಲಕ್ಕೆ ಬಿದ್ದು ಸಾವನ್ನಪ್ಪಿದ್ದಾನೆ. ಪೋಲಿಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರಾಜ್ಯಾದ್ಯಂತ ಹಳದಿ ಪಡಿತರ ಕಾರ್ಡ್ ವಿತರಣೆಯಲ್ಲಿನ ಅವ್ಯವಸ್ಥೆ, ಅಧಿಕಾರಿಗಳ ನಿರ್ಲಕ್ಷ ಮತ್ತು ಸರ್ಕಾರದ ಕಪಟ ನೀತಿಗೆ ಬಡ ಕೂಲಿಕಾರನೊಬ್ಬ ಬಲಿಯಾಗಿದ್ದಾನೆ. ಆತನ ಕುಟುಂಬ ಬೀದಿಪಾಲಾಗಿದೆ. ಎರಡು ದಿನಗಳಿಂದ ಊಟವಿಲ್ಲದೆ ಹಸಿವಿನಿಂದ ನರಳುತ್ತಿದ್ದ ಹೆಂಡತಿ ಮಕ್ಕಳ ಪರಿಸ್ಥಿತಿ ನೋಡಲಾರದೆ ಸಿದ್ಧನಾಯ್ಕ ವಿದ್ಯುತ್ ಸ್ಪರ್ಶ ಮಾಡಿಕೊಂಡು ಸಾವಿಗೆ ಶರಣಾದ ಮಸಣಾಪುರ ಗ್ರಾಮದಲ್ಲೀಗ ಸ್ಮಶಾನಮೌನ. ಪಡಿತರ ಆಹಾರ ದೊರೆಯದ ಕುಟುಂಬಗಳು ಹಸಿವಿನೊಂದಿಗೆ ಭಯಭೀತರಾಗಿದ್ದಾರೆ. ಮಸಣಾಪುರದಲ್ಲಿ ಬಡವರು, ಕಡುಬಡವರೇ ಹೆಚ್ಚು. ಸಿದ್ಧನಾಯ್ಕ ವಿದ್ಯುತ್ ಕಂಬವನ್ನೇರಿ ತಂತಿ ಹಿಡಿದು ಕ್ಷಣಾರ್ಧದಲ್ಲಿ ಹೆಣವಾಗಿ ಬಿದ್ದ ಘಟನೆಯಿಂದ ಬಡ ಕೂಲಿಕಾರರು ಬೆಚ್ಚಿ ಬಿದ್ದಿದ್ದಾರೆ. ಕಡುಬಡವನಾದ ಸಿದ್ಧನಾಯ್ಕ ಜೋಪಡಿಯೊಂದರಲ್ಲಿ ಹೆಂಡತಿ ರತ್ನಮ್ಮ, ಮಕ್ಕಳಾದ ರುಕ್ಕಮ್ಮ, ಜ್ಯೋತಿ ಮತ್ತು ಮಣಿರಾಜು ಅವರೊಂದಿಗೆ ಜೀವಿಸುತ್ತಿದ್ದ. ಮೂರೂ ಮಕ್ಕಳು 10 ವರ್ಷದೊಳಗಿನವರು. ಕೂಲಿ ಮಾಡಿಯೇ ನಾಲ್ವರ ಹೊಟ್ಟೆ ತುಂಬಿಸುತ್ತಿದ್ದ ಸಿದ್ಧನಾಯ್ಕನನ್ನು ಕಳೆದುಕೊಂಡು ಆತನ ಕುಟುಂಬ ಈಗ ದಿಕ್ಕಿಲ್ಲದಂತಾಗಿದೆ. ಪುಟ್ಟ ಮಕ್ಕಳೊಂದಿಗೆ ಅನಾಥಳಾಗಿ ನಿಂತಿರುವ ರತ್ನಮ್ಮ ಮೌನವಾಗಿ ರೋಧಿಸುತ್ತಿದ್ದಾಳೆ. ತಂದೆಯನ್ನು ಕಳೆದುಕೊಂಡ ಮಕ್ಕಳು ಗಾಬರಿಗೊಂಡಿದ್ದಾರೆ.

ಅಗ್ಗದ ಅಕ್ಕಿ ಗೋಧಿ ಪಡೆಯಲು ಹಳದಿ ಕಾರ್ಡ್ ವಿತರಣೆಯಲ್ಲಿನ ಅದ್ವಾನವೇ ಸಿದ್ಧನಾಯ್ಕನ ಸಾವಿಗೆ ಕಾರಣವೆಂದು ಗ್ರಾಮಸ್ಥರು ಆರೋಪಿಸುತ್ತಿದ್ದಾರೆ. ಅಧಿಕಾರಕ್ಕೆ ಬರುವ ಪ್ರತಿಯೊಂದು ಸರ್ಕಾರವೂ ಕಡು ಬಡವರಿಗಾಗಿಯೇ ಇರುವ ಪಡಿತರ ವ್ಯವಸ್ಥೆಯಲ್ಲಿನ ಕಾರ್ಡುಗಳ ಬಣ್ಣ ಬದಲಾಯಿಸುವ ಹೆಸರಿನಲ್ಲಿ ಬಡವರ ಜೀವಗಳೊಂದಿಗೆ ಚೆಲ್ಲಾಟವಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸುತ್ತಾರೆ. ಹಸಿರು ಕಾರ್ಡ್ ಹಿಂತಿರುಗಿಸಿ ಹಳದಿ ಕಾರ್ಡ್ ಪಡೆದುಕೊಳ್ಳಬೇಕು ಎಂಬುದೇ ಹಲವರಿಗೆ ಗೊತ್ತಿಲ್ಲ. ಸರ್ಕಾರ 3 ರೂ.ಗೆ ಕಿಲೋ ಅಕ್ಕಿ ಕೊಡುತ್ತಿದೆ ಎಂದು ತಿಳಿದಾಗ ಹಸಿವೆಯಿಂದ ನರಳುತ್ತಿದ್ದ ಸಿದ್ದನಾಯ್ಕ ಹತ್ತು ರೂ.ಸಾಲ ಮಾಡಿ ನ್ಯಾಯಬೆಲೆ ಅಂಗಡಿಗೆ ಹೋಗಿದ್ದ. ಆದರೆ ಈಗ ಹಸಿರು ಕಾರ್ಡ್ ಜಾರಿಯಲ್ಲಿಲ್ಲ, ಹಳದಿ ಕಾರ್ಡ್‌ಗೆ ಮಾತ್ರ ಅಕ್ಕಿ ಕೊಡಲಾಗುತ್ತದೆ ಎಂಬ ಉತ್ತರದಿಂದ ಅಧೀರನಾದ. ಹಳದಿ ಕಾರ್ಡ್ ಕೊಡುವಂತೆ ಗ್ರಾಮಲೆಕ್ಕಿಗನ ಬಳಿ ಮನವಿ ಸಲ್ಲಿಸಿದ. ಈಗಾಗಲೇ ಎಲ್ಲರಿಗೂ ಹಳದಿ ಕಾರ್ಡ್ ನೀಡಿದ್ದೇವೆ. ಹಾಗಾಗಿ ಈಗ ಮತ್ತೆ ಕೊಡಲಾಗುವುದಿಲ್ಲ ಎಂದ ಗ್ರಾಮಲೆಕ್ಕಿಗನ ಉತ್ತರದಿಂದ ಮತ್ತಷ್ಟು ಕಂಗಾಲಾಗಿದ್ದಾನೆ. ಮಕ್ಕಳಿಗೆ ತುತ್ತು ಅನ್ನ ನೀಡಲಾಗದ ತನ್ನ ಅಸಹಾಯಕ ಸ್ಥಿತಿಗೆ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಆತನ ನೆರೆಯ ನಿವಾಸಿಗಳು ಹೇಳುತ್ತಾರೆ.

**ಹುಸಿಯಾದ ಭರವಸೆ :**

'ಕಡುಬಡವರನ್ನು ಮತ್ತು ಹತಭಾಗ್ಯರನ್ನು ಹಸಿವೆಯಿಂದ ರಕ್ಷಿಸುವುದು ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳಲ್ಲಿ ಪರಮ ಪ್ರಾಶಸ್ತ್ಯ ಪಡೆದಿದೆ' ಎಂಬ ಭರವಸೆ ಹೇಗೆ ಹುಸಿಯಾಗಿದೆ ಎಂಬುದು ಅನಾವರಣಗೊಂಡಿದೆ. ಉಪ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಜುಲೈ 19 ರಂದು ಸದನದಲ್ಲಿ ತಮ್ಮ 2004-05 ರ ಆಯವ್ಯಯ ಪತ್ರವನ್ನು ಮಂಡಿಸುತ್ತಾ "ಕಡು ಬಡವರು ಮತ್ತು ಹತ ಭಾಗ್ಯರನ್ನು ಹಸಿವೆಯಿಂದ ರಕ್ಷಿಸುವುದು ಹಾಗೂ ಅವರು ಸವಲತ್ತುಗಳಿಂದ ವಂಚಿತರಾಗ ದಂತೆ ನೋಡಿಕೊಳ್ಳುವುದು ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳಲ್ಲಿ ಪರಮ ಪ್ರಾಶಸ್ತ್ಯ ಪಡೆದಿದೆ. ಕಡುಬಡವರಿಗೆಂದೇ ಮೀಸಲಿಟ್ಟಿದ್ದ ಆಹಾರ ದಾನ್ಯವನ್ನು ಇತ್ತೀಚೆಗೆ ವಿವಿಧ ಯೋಜನೆಗಳಡಿ ದುರುಪಯೋಗ ಮಾಡಿಕೊಂಡಿರುವುದು ದುರಾದೃಷ್ಟಕರ ಮತ್ತು ಅಕ್ಷಮ್ಯ ಅಪರಾಧ. ಇಂತಹ ವ್ಯಾಪಕ ದುರುಪಯೋಗವನ್ನು ತಡೆಗಟ್ಟಲು ಮತ್ತು ಸಹಾಯಧನದ ಆಹಾರದಾನ್ಯಗಳನ್ನು ಉದ್ದೇಶಿತ ಜನರಿಗೆ ತಲುಪಿಸಲು ತಕ್ಷಣವೇ ಕ್ರಮ ಕೈಗೊಂಡು ಅನರ್ಹ ಪಡಿತರ ಕಾರ್ಡುದಾರರನ್ನು ಪಟ್ಟಿಯಿಂದ ತೆಗೆದು ಹಾಕಲಾಗುವುದು. ಈ ಪ್ರಕ್ರಿಯೆಯು 2004 ರ ಅಗಸ್ಟ್ 31 ರ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ. ಬಡತನ ರೇಖೆಯಿಂದ ಕೆಳಗಿರುವ ಕುಟುಂಬಗಳಿಗೆ ಅಗ್ಗದ ದರದಲ್ಲಿ ಆಹಾರಧಾನ್ಯ ಒದಗಿಸುವುದು ನಮ್ಮ ಸರ್ಕಾರದ ಬದ್ಧತೆಯಾಗಿದೆ. ಈ ನಿಟ್ಟಿನಲ್ಲಿ ಬಡತನ ರೇಖೆಯ ಕೆಳಗಿರುವ ಪ್ರತಿ ಕುಟುಂಬದ ಪಡಿತರ ಕಾರ್ಡುದಾರರಿಗೆ ಪ್ರತಿತಿಂಗಳು 20 ಕೆ.ಜಿ ಅಕ್ಕಿ ಮತ್ತು 5 ಕೆ.ಜಿ ಗೋಧಿಯನ್ನು ಕಿಲೋಗೆ 3 ರೂ.ಗಳಂತೆ ಒದಗಿಸಲಾಗುವುದು. ಇದು ಕರ್ನಾಟಕದ ಬಡಜನತೆಗೆ ಗಣನೀಯ ಪ್ರಮಾಣದಲ್ಲಿ ನೆರವಾಗಲಿದೆ. ಈ ಕಾರ್ಯಕ್ರಮಕ್ಕಾಗಿ ನಾನು 300 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ" ಎಂದು ಹೆಮ್ಮೆಯಿಂದ ಘೋಷಿಸಿದ್ದರು.


'ಸಬ್ಸಿಡಿ ಆಳ್ವಿಕೆ'ಯನ್ನು ಕೊನೆಗೊಳಿಸಬೇಕೆಂಬ ವಿಶ್ವಬ್ಯಾಂಕ್ ನಿರ್ದೇಶನದಂತೆ ಹಿಂದಿನ ಎಸ್.ಎಂ.ಕೃಷ್ಣ ಸರ್ಕಾರವು ರಾಜ್ಯದಲ್ಲಿ ಚಾಲನೆಯಲ್ಲಿದ್ದ 63 ಲಕ್ಷ ಹಸಿರು ಪಡಿತರ ಕಾರ್ಡ್‌ಗಳ ಸಂಖ್ಯೆಯನ್ನು 42 ಲಕ್ಷಕ್ಕೆ ಇಳಿಸಲು ನಿರ್ಧಾರ ಮಾಡಿತ್ತು. ಪಡಿತರ ಕಾರ್ಡ್‌ಗಳು ಅರ್ಹರಲ್ಲದವರ ಪಾಲಾಗಿವೆ ಎಂಬ ನೆಪ ಮಾಡಿಕೊಂಡು ಕಾರ್ಡ್‌ಗಳ ಸಂಖ್ಯೆಯನ್ನು ಕಡಿಮೆ ಮಾಡಲು ಸರ್ಕಾರ ಮುಂದಾಗಿತ್ತು. ಪಡಿತರ ಕಾರ್ಡ್‌ಗಳು ಹೇಗೆ ಅರ್ಹರಲ್ಲದವರ ಪಾಲಾದವು ಎಂಬುದಕ್ಕೆ ಸರ್ಕಾರದ ವಿವರಣೆ ಇಲ್ಲ. ಸರ್ಕಾರಿ ಯಂತ್ರ ಶಾಮೀಲಾಗದೆ ಇಂತಹ ಅವ್ಯವಹಾರ ಸಾಧ್ಯವಿರಲಿಲ್ಲ. ಆಳುವ ಪಕ್ಷದ ಏಜೆಂಟರ ಮೂಲಕ ಅರ್ಹರಲ್ಲದವರು ಪಡೆದುಕೊಂಡ ಪಡಿತರ ಕಾರ್ಡ್‌ಗಳನ್ನು ಕಿತ್ತುಕೊಳ್ಳುವ ಬದಲು ಕಾರ್ಡ್‌ಗಳ ಬಣ್ಣ ಬದಲಾಯಿಸಿ ವಿತರಿಸುವ ನೆಪಮಾಡಿಕೊಂಡು ಮತ್ತೆ ಅರ್ಹರಲ್ಲದವರಿಗೆ ಕಾರ್ಡ ವಿತರಣೆ ಮಾಡಲು ಮತ್ತು ಆ ಮೂಲಕ ಅರ್ಹ ಕಾರ್ಡ್‌ದಾರರ ಸಂಖ್ಯೆಯನ್ನು ಕಡಿಮೆ ಮಾಡಲು ಕೃಷ್ಣ ಸರ್ಕಾರ ಮುಂದಾಗಿತ್ತು. ಹಳದಿ ಕಾರ್ಡ್ ವಿತರಣೆಗಾಗಿ ಫಲಾನುಭವಿಗಳನ್ನು ಗುರುತಿಸುವ ಹೊಣೆಯನ್ನು ಕಂದಾಯ ಇಲಾಖೆಗೆ ವಹಿಸಿ ಕೊಡಲಾಯಿತು. ಹಳದಿ ಕಾರ್ಡ್ ಫಲಾನುಭವಿಗಳ ಯಾದಿಯಲ್ಲಿ ತಮ್ಮ ಹೆಸರುಗಳಿಲ್ಲದಿರುವುದನ್ನು ಗಮನಿಸಿದ ಬಡವರು ರಾಜ್ಯದ ವಿವಿಧ ಭಾಗಗಳಲ್ಲಿ ಪಕ್ಷಾತೀತವಾಗಿ ಬೀದಿಗಿಳಿದಾಗ ಸರ್ಕಾರ ಎಲ್ಲರಿಂದಲೂ ಅರ್ಜಿ ಸ್ವೀಕರಿಸುವ ನಾಟಕ ಆರಂಭ ಮಾಡಿತು. ಲಕ್ಷಾಂತರ ಅರ್ಜಿಗಳು ಸ್ವೀಕೃತವಾದರೂ ಅವರಿಗೆ ಹಳದಿ ಕಾರ್ಡ್‌ಗಳ ವಿತರಣೆ ಆಗಲಿಲ್ಲ. ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟು ಕೆಲವು ಕಡೆ ತಾತ್ಕಾಲಿಕ ಕಾರ್ಡ್‌ಗಳ ವಿತರಣೆಯಾಯಿತು. ಹೀಗೆ ಗೊಂದಲ ಮುಂದುವರೆಯಿತು. ಚುನಾವಣೆಯಲ್ಲಿ ಜನತೆ ಕೃಷ್ಣ ಸರ್ಕಾರದ ವಿರುದ್ಧವೇ ಮು... ಚಲಾಯಿಸಿತು.

ಬದಲಾವಣೆಯ ಪರವಾಗಿ ಜನಾದೇಶ ಪಡೆ... ಹೊಸ ಸಮ್ಮಿಶ್ರ ಸರ್ಕಾರವು ಪಡಿತರ ಕಾರ್ಡ್‌ಗ... ಗೊಂದಲವನ್ನು ಕೊನೆಗಾಣಿಸುವ ಭರವ... ಯನ್ನೇನೋ ನೀಡಿತು. ಅದಕ್ಕಾಗಿ 300 ಕೋ... ರೂ.ಗಳನ್ನು ಮೀಸಲಿಡಲಾಯಿತು. ಅದ...



ಹಸಿವ ನೀಗಿಸಿ, ಆಹಾರ ಭದ್ರತೆ ಒದಗಿಸಿ ಎಂದು ರೇಷನ್ ಕಾರ್ಡಿಗಾಗಿ ಬೆಂಗಳೂರಿನಲ್ಲಿ ಜೆ.ಎಂ.ಎಸ್.ಧರಣಿ

**ಈ ಕೊಲೆಗೆ ಕೊನೆಯಿಲ್ಲವೇ?** - ಹಸಿರುಕಾರ್ಡಿಗೆ ಅಕ್ಕಿ ನೀಡಲಿಲ್ಲ ಎಂದು ಹತಾಶನಾಗಿ ವಿದ್ಯುತ್ ಕಂಬ ಏರಿ ಆತ್ಮಹತ್ಯೆ ಮಾಡಿಕೊಂಡ ಕಡು ಬಡವ ಸಿದ್ದ ನಾಯ್ಕ, ರೋಧಿಸುತ್ತಿರುವ ಕುಟುಂಬದವರು



# ಅನಿವಾರ್ಯ

ವಿಶ್ವಬ್ಯಾಂಕ್ ಹಾಕಿದ ಗೆರೆ ದಾಟುವಲ್ಲಿ ಹೊಸ ಸಮ್ಮಿಶ್ರ ಸರ್ಕಾರವೂ ವಿಫಲವಾಗಿರುವುದನ್ನು ನಾವು ಈಗ ಕಾಣುತ್ತಿದ್ದೇವೆ. ಕಡುಬಡವರಿಗೆ ಅಗ್ಗದ ಅಕ್ಕಿ, ಗೋಧಿ ವಿತರಿಸುವ ಕಾರ್ಯಕ್ರಮದ ಘೋಷಣೆ ಯಾಯಿತು. ಆದರೆ ಒಂದೇ ತಿಂಗಳೊಳಗೆ ಸರ್ಕಾರ ಜಿಲ್ಲಾಧಿಕಾರಿಗಳಿಗೆ ಸುತ್ತೋಲೆಯೊಂದನ್ನು ಕಳುಹಿಸಿ ಶೇ.30 ರಷ್ಟು ಹಳದಿ ಪಡಿತರ ಕಾರ್ಡ್‌ಗಳನ್ನು ರದ್ದುಮಾಡಲು ಆದೇಶ ನೀಡಿತು. ಸದರಿ ಆದೇಶವನ್ನು ಇದುವರೆಗೂ ಹಿಂತೆಗೆದು ಕೊಳ್ಳಲಾಗಿಲ್ಲ ಎಂಬುದನ್ನು ಗಮನಿಸಬೇಕು.

ಕಾರ್ಡ್‌ಗಳ ಸಂಖ್ಯೆಯನ್ನು ಕಡಿತ ಮಾಡಲು ಹೊಸ ಕಾರಣವೊಂದನ್ನು ಕಂಡುಹುಡುಕಲಾಗಿತ್ತು. 2001 ರ ಜನಗಣತಿಯಲ್ಲಿ ದಾಖಲಾಗಿರುವ ಕುಟುಂಬಗಳ ಸಂಖ್ಯೆಗೆ ಪಡಿತರ ಕಾರ್ಡ್‌ಗಳನ್ನು ಕಡಿತ ಮಾಡಬೇಕು ಎಂಬುದೇ ಸರ್ಕಾರದ ಆದೇಶ. ಒಂದು ಗ್ರಾಮದಲ್ಲಿ ಒಟ್ಟು ಪಡಿತರ ಕಾರ್ಡ್‌ಗಳ ಸಂಖ್ಯೆ ಒಟ್ಟು ಕುಟುಂಬಗಳ ಸಂಖ್ಯೆಗಿಂತ ಹೆಚ್ಚಾಗಿದ್ದರೆ ಹಳದಿ ಪಡಿತರ ಕಾರ್ಡ್‌ಗಳನ್ನು ಕಡಿತಗೊಳಿಸಬೇಕು.

ಸರ್ಕಾರದ ಈ ಕ್ರಮದ ವಿರುದ್ಧ ವ್ಯಾಪಕ ಪ್ರತಿಭಟನೆ ವ್ಯಕ್ತವಾಗುತ್ತಿದ್ದಂತೆ ಬೀದರ್ ಉಪಚುನಾವಣೆ ಸಮೀಪಿಸಿತ್ತು. ಅಗ್ಗದ ದರದಲ್ಲಿ ಅಕ್ಕಿ ಗೋದಿ ಪಡೆಯಲು ಅರ್ಹರಾದ ಫಲಾನುಭವಿ ಗಳನ್ನು ಗುರುತಿಸುವಲ್ಲಿ ಜಿಲ್ಲಾಧಿಕಾರಿ ಗಳು ವಿಫಲರಾಗಿದ್ದು 2 ತಿಂಗಳ ಒಳಗಾಗಿ ಸಮೀಕ್ಷೆ ನಡೆಸಿ, ಅರ್ಹರಿಗೆ ಹಳದಿ ಕಾರ್ಡ್ ವಿತರಣೆ ಮಾಡದಿದ್ದರೆ ಜಿಲ್ಲಾಧಿಕಾರಿಗಳನ್ನೇ ಹೊಣೆಗಾರ ರನ್ನಾಗಿ ಮಾಡುವುದಾಗಿ ಉಪಮುಖ್ಯಮಂತ್ರಿ ಸಿದ್ಧರಾಮಯ್ಯ ಗುಡುಗಿದರು. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿ ಧರ್ಮಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿ ಕಾರಿಗಳು ಹಾಗೂ ಜಿಲ್ಲಾಧಿಕಾರಿಗಳ 2 ದಿನಗಳ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಆದರೆ ಹಳದಿ ಕಾರ್ಡ್‌ಗಳ ಸಂಖ್ಯೆಯನ್ನು ಕಡಿತ ಮಾಡಬೇಕೆಂಬ ಆದೇಶವನ್ನು ಹಿಂತೆಗೆದುಕೊಳ್ಳುವ ಆದೇಶ ಮಾತ್ರ ಇನ್ನೂ ಹೊರಬೀಳಲಿಲ್ಲ.

**ಅರ್ಥವಿಲ್ಲದ ಮಾನದಂಡಗಳು :**

ಉತ್ತರಕನ್ನಡ ಜಿಲ್ಲೆಯಲ್ಲಿ ಈ ಹಿಂದೆ ನೀಡಲಾಗಿದ್ದ 1,85,472 ಹಳದಿ ಪಡಿತರ ಕಾರ್ಡ್‌ಗಳ ಪೈಕಿ 22,900 ಕಾರ್ಡ್‌ಗಳನ್ನು ರದ್ದುಪಡಿಸಬಹುದಾಗಿದೆಯೆಂದು ಜಿಲ್ಲಾಡಳಿತ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಗದಗ ತಾಲೂಕಿನಲ್ಲಿ 17,500 ಹಳದಿ ಕಾರ್ಡ್‌ಗಳನ್ನು ರದ್ದುಪಡಿಸಲಾಗಿದೆ ಎಂದು ಹೇಳಲಾಗುತ್ತಿದೆ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನಲ್ಲಿ 19,285 ಹಳದಿ ಕಾರ್ಡ್‌ದಾರರಿಗೆ ಪಡಿತರ ಪದಾರ್ಥಗಳನ್ನು ನಿಲ್ಲಿಸಿರುವುದು ವರದಿಯಾಗಿದೆ. ಹಳದಿ ಕಾರ್ಡ್ ವಿತರಣೆಯ ವಿಷವರ್ತುಲಕ್ಕೆ ಸಿಕ್ಕಿ ಸಾವನ್ನಪ್ಪಿದ ಸಿದ್ದನಾಯ್ಕನ ಜಿಲ್ಲೆಯಾದ ಚಾಮರಾಜನಗರ ಜಿಲ್ಲೆಯಲ್ಲಿ 36,052 ಕಾರ್ಡುಗಳನ್ನು ಕಡಿತ ಮಾಡಲು ನಿರ್ಧರಿಸಲಾಗಿದೆ. ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕೊಂದರಲ್ಲೇ 14,000 ಹಳದಿ ಕಾರ್ಡುಗಳನ್ನು ರದ್ದು ಮಾಡಬೇಕಾಗಿದೆ ಎಂದು ತಾಲ್ಲೂಕ್ ತಹಶೀಲ್ದಾರ್ ಅಭಿಪ್ರಾಯಪಟ್ಟಿದ್ದಾರೆ. ಇದು ಯಾವುದೇ ಒಂದು ಜಿಲ್ಲೆ ಅಥವ ಒಂದು ತಾಲೂಕಿನ ಕಥೆಯಲ್ಲ, ಪ್ರತಿಯೊಂದು ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನ ಕಾರ್ಡ್‌ದಾರರ ಮೇಲೆ ಈ ದಾಳಿ ಆರಂಭವಾಗಿದೆ.

ಅರ್ಹರಲ್ಲದವರು ಭಾರೀ ಸಂಖ್ಯೆಯಲ್ಲಿ ಹಳದಿ ಪಡಿತರ ಕಾರ್ಡ್‌ಗಳನ್ನು ಹೊಂದಿದ್ದಾರೆ ಎಂದು ಮತ್ತೆ ಆರೋಪಿಸಲಾಗುತ್ತಿದೆ. ಆದರೆ ಅರ್ಹರಲ್ಲ ದವರಿಗೆ ಹೇಗೆ ಕಾರ್ಡ್ ವಿತರಣೆ ಮಾಡಲಾಗಿದೆ ಎಂಬ ಪ್ರಶ್ನೆಗೆ ಮಾತ್ರ ಉತ್ತರ ದೊರಕುವುದಿಲ್ಲ, ಇನ್ನು ಮುಂದೆಯಾದರೂ ಹಾಗಾಗದಂತೆ ತಡೆಯಲು ಸರ್ಕಾರ ಯಾವ ಪ್ರಾಯೋಗಿಕ ಕ್ರಮಗಳನ್ನು ಕೈಗೊಳ್ಳಬಯಸಿದೆ ಎಂಬುದೂ ಸ್ಪಷ್ಟವಾಗಿಲ್ಲ. ಸರ್ಕಾರದ ಧೋರಣೆ ಹೆಚ್ಚೆಚ್ಚು ಸಂದೇಹಾಸ್ಪದವಾಗುತ್ತಿದ್ದು ಬಡ ಜನತೆಯ ಪರದಾಟ ತಪ್ಪುವ ಲಕ್ಷಣಗಳೇನೂ ಕಾಣುತ್ತಿಲ್ಲ.

ರಾಜ್ಯದಲ್ಲಿ ಅದೆಷ್ಟೋ ಕುಟುಂಬಗಳಿಗೆ ಇದುವರೆಗೆ ಯಾವ ಪಡಿತರ ಕಾರ್ಡ್ ಸಿಕ್ಕಿಲ್ಲ. ಸಾವಿರಾರು ಬಡ ಕುಟುಂಬಗಳಿಗೆ ಕೇಸರಿ ಕಾರ್ಡ್ ಗಳನ್ನು ಕೊಟ್ಟು ಯಾವುದೇ ಪ್ರಯೋಜನ ದೊರೆಯದಂತೆ ಮಾಡಲಾಗಿದೆ. ಎಷ್ಟೋ ಕುಟುಂಬಗಳಿಗೆ ನೀಡಲಾದ ಹಸಿರು ಕಾರ್ಡ್‌ಗಳ ಹಾಗೂ ತಾತ್ಕಾಲಿಕ ಕಾರ್ಡ್‌ಗಳ ಬದಲಾಗಿ ಹಳದಿ ಕಾರ್ಡ್ ವಿತರಣೆ ಮಾಡಲಾಗಿಲ್ಲ. ಇದರ ಜೊತೆಗೆ, ಅರ್ಹರಲ್ಲದವರ ಕಾರ್ಡ್ ರದ್ದು ಮಾಡುವ ಭರದಲ್ಲಿ ಅರ್ಹ ಬಡವರ ಕಾರ್ಡ್‌ಗಳು ರದ್ದಾಗುವ ಅಪಾಯವೇ ಹೆಚ್ಚು. ಬಡತನದ ರೇಖೆಯ ಕೆಳಗಿರುವ ಕುಟುಂಬಗಳಿಗೆ ಮಾತ್ರ ಪಡಿತರ ಕಾರ್ಡ್ ಕೊಡುವ ಈ 'ಟಾರ್ಗೆಟೆಡ್' ಪದ್ಧತಿಯಿಂದಾಗಿ ಪಡಿತರ ಸೌಲಭ್ಯದಿಂದ ವಂಚಿತರಾಗುವವರು ಬಡವರೇ.

ಗ್ರಾಮಾಂತರ ಪ್ರದೇಶದಲ್ಲಿ ವಾರ್ಷಿಕ ರೂ. 12,000 ಕ್ಕಿಂತ ಕಡಿಮೆ ಮತ್ತು ನಗರ ಪ್ರದೇಶದಲ್ಲಿ ವಾರ್ಷಿಕ 17,00 ರೂ.ಗಿಂತ ಕಡಿಮೆ ಆದಾಯವಿರುವ ಕುಟುಂಬಗಳು ಬಿ.ಪಿ.ಎಲ್. ಕಾರ್ಡ್ ಪಡೆಯಲು ಅರ್ಹರಿರುತ್ತಾರೆ ಎಂದು ಹೇಳಲಾಗಿದೆ. ಒಂದುಕುಟುಂಬದ ವಾರ್ಷಿಕ ಆದಾಯವನ್ನು ನಿರ್ದಿಷ್ಟವಾಗಿ ಅಳೆಯುವುದು ಕಷ್ಟಸಾಧ್ಯವಾಗಿರುವುದರಿಂದ ಹೆಚ್ಚು ಸ್ಥಿತಿವಂತರೂ ಕಾರ್ಡ್‌ಗಳನ್ನು ಪಡೆದಿದ್ದಾರೆ. ಕೆಲವೆಡೆ ರಾಜಕೀಯ ಒತ್ತಡಗಳಿಗೆ ಮಣಿದು ಒಂದೇ ಕುಟುಂಬಕ್ಕೆ ಮೂರ್‍ನಾಲ್ಕು ಕಾರ್ಡ್‌ಗಳನ್ನು ನೀಡಲಾಗಿದೆ. ಫಲಾನುಭವಿಗಳನ್ನು ಕಡ್ಡಾಯವಾಗಿ ಗ್ರಾಮ ಸಭೆಗಳಲ್ಲಿ ಆಯ್ಕೆ ಮಾಡಬೇಕೆನ್ನುವ ಬೇಡಿಕೆಯನ್ನು ಸರ್ಕಾರ ಗಣನೆಗೆ ತೆಗೆದುಕೊಳ್ಳಲಿಲ. ಅದರ ಬದಲು ಪಿ.ಪಿ.ಎಲ್. ಪಟ್ಟಿಯಿಂದ ಫಲಾನುಭವಿ ಗಳನ್ನು ತೆಗೆದುಹಾಕಲು ಹಾಗೂ ಪಟ್ಟಿಯಲ್ಲಿ ಫಲಾನುಭವಿಗಳನ್ನು ಸೇರಿಸಲು ಹೊಸ ಮಾನದಂಡಗಳನ್ನು ನೀಡಲಾಗಿದೆ. 5.1.2004 ರ ಸರ್ಕಾರಿ ಸುತ್ತೋಲೆಯಲ್ಲಿ ನೀಡಲಾದ ಮಾನದಂಡಗಳು ಬಹುತೇಕ ಸರಿಯಾಗಿವೆ. ಗುಡಿಸಲು ನಿವಾಸಿಗಳು, ಜೀತ ಕಾರ್ಮಿಕರು, ಕೃಷಿ ಕೂಲಿಕಾರರು, ಕುಟುಂಬದ ನಿರ್ವಹಣೆಗಾಗಿ ಕಾಲಕಾಲಕ್ಕೆ ವಲಸೆ ಹೋಗುವವರು ಹಾಗೂ ಯಾವುದೇ ಆದಾಯವಿಲ್ಲದ ನಿರ್ಗತಿಕರು ಬಿ.ಪಿ.ಎಲ್. ಪಟ್ಟಿಗೆ ಸೇರಿಸಬಹುದಾದವರು. ಆದರೆ ಆಶ್ರಯ ಯೋಜನೆಯ ಫಲಾನುಭವಿ ಗಳೆಲ್ಲರೂ ಬಡತನ ರೇಖೆಯ ಕೆಳಗೆ ಇರುವವರೆಂದು ಹೇಳಲಾಗುವುದಿಲ್ಲ. ಆಶ್ರಯ ಯೋಜನೆಯ ಸೌಲಭ್ಯವೂ ಕೂಡಾ ಸಾಕಷ್ಟು ದುರುಪಯೋಗಕ್ಕೆ ಒಳಗಾಗಿದ್ದು ಆಶ್ರಯ ಮನೆಗಳು ದೊಡ್ಡ ಪ್ರಮಾಣದಲ್ಲಿ ಆಸ್ತಿವಂತರ ಪಾಲಾಗಿವೆ.

ಬಿಪಿಎಲ್ ಪಟ್ಟಿಯಿಂದ ತೆಗೆದುಹಾಕ ಬೇಕಾದವರನ್ನು ಗುರುತಿಸಲು ನೀಡಲಾದ ಕೆಲವು ಮಾನದಂಡಗಳು ಸರಿಯಾಗಿವೆ. 5 ಎಕರೆಗಿಂತ ಹೆಚ್ಚು ಜಮೀನು ಹೊಂದಿರುವ ಕುಟುಂಬ, ದೂರವಾಣಿ, ಮೊಬೈಲ್ ಫೋನ್ ಹೊಂದಿರು ವವರು, ಎರಡು ಅಥವಾ ಹೆಚ್ಚು ನೀರಾವರಿ ಪಂಪ್‌ಸೆಟ್ ಇಲ್ಲವೆ ಕೊಳವೆಬಾವಿ ಹೊಂದಿರವವರು, ಸರ್ಕಾರಿ ಅಥವಾ ಅರೆ ಸರ್ಕಾರಿ ಖಾಯಂ ಉದ್ಯೋಗಿಗಳು, ಟ್ರಾಕ್ಟರ್ ಅಥವಾ ಟೆಲ್ಲರ್ಸ್ ಹೊಂದಿರವವರು, ವಾರ್ಷಿಕ ವಿದ್ಯುಚ್ಛಕ್ತಿ ಬಿಲ್ ರೂ. 5000 ಕ್ಕಿಂತ ಅಧಿಕ ಪಾವತಿಸುವವರು, ಮೋಟಾರ್ ಚಾಲಿತ ದ್ವಿಚಕ್ರ ಅಥವಾ ನಾಲ್ಕು ಚಕ್ರ ವಾಹನದ ಮಾಲೀಕರು, ಆದಾಯ ತೆರಿಗೆ ವ್ಯಾಪ್ತಿಗೆ ಒಳಪಡುವ ಕುಟುಂಬಗಳು, ಗುತ್ತಿಗೆದಾರರು, ವಾಣಿಜ್ಯೋದ್ಯಮಿಗಳು ಮತ್ತು ಕಮಿಷನ್ ಏಜೆಂಟ್ಸ್ ಬಿ.ಪಿ.ಎಲ್. ಪಟ್ಟಿಗೆ ಸೇರ್ಪಯಾಗಲು ಅನರ್ಹರು. ಆದರೆ ಐದು ನೂರು ರೂ.ಗಳಿಗೆ ದೊರೆಯುವ ಒಂದು ಫ್ಯಾನ್ ಇದ್ದ ಕುಟುಂಬಕ್ಕೆ ಪಡಿತರ ಕಾರ್ಡ್ ನಿರಾಕರಿಸವುದು ಯಾವ ನ್ಯಾಯ? ಒಂದು ಟಿ.ವಿ. ಖರೀದಿ ಮಾಡಿದರೆ ಇನ್ನೊಂದು ಟಿ.ವಿ. ಉಚಿತವಾಗಿ ದೊರೆಯುವ ದಿನಗಳಲ್ಲಿ ಮನೆಯಲ್ಲಿ ಒಂದು ಬಣ್ಣದ ಟಿ.ವಿ. ಇರುವ ಕಾರಣದಿಂದ ಪಡಿತರ ಕಾರ್ಡ್ ರದ್ದು ಮಾಡವುದು ಸಮಂಜಸವಾಗದು. ಅದರಂತೆಯೇ ಅಡುಗೆ ಅನಿಲ ಸಂಪರ್ಕ ಹೊಂದಿದ ಕುಟುಂಬಗಳನ್ನು ಸ್ಥಿತಿವಂತ ಕುಟುಂಬಗಳೆಂದು ಸಾರಸಗಟಾಗಿ ತಳ್ಳಿಹಾಕಬಾರದು. ಯಾವುದೇ ಬ್ಯಾಂಕ್‌ನಿಂದ ಒಂದು ಲಕ್ಷ ರೂ. ಇಲ್ಲವೆ ಹೆಚ್ಚು ಸಾಲವನ್ನು ತೆಗೆದುಕೊಂಡ ಕುಟುಂಬಕ್ಕೆ ಹಳದಿ ಪಡಿತರ ಕಾರ್ಡ್ ಪಡೆಯುವ ಹಕ್ಕಿಲ್ಲ ಎಂದ ಹೇಳಲಾಗಿದೆ. ಈ ಮಾನದಂಡ ಎಲ್ಲಾ ಪ್ರದೇಶಗಳಿಗೂ ಅನ್ವಯವಾಗದು. ಚಿತ್ರದುರ್ಗ, ಕೋಲಾರ, ತುಮಕೂರು ಗಳಂತಹ ನೀರಾವರಿ ಸೌಲಭ್ಯವಿಲ್ಲದ ಜಿಲ್ಲೆಗಳಲ್ಲಿ 5 ಎಕರೆಗಿಂತ ಕಡಿಮೆ ಭೂಮಿ ಹೊಂದಿರುವವರು ಸಾಲ ಮಾಡದೆ ಇರಲು ಸಾಧ್ಯವಿಲ್ಲ. ಸಾಲ ಮಾಡಿದ ತಪ್ಪಿಗೆ ಅವರಿಗೆ ಹಳದಿ ಪಡಿತರ ಕಾರ್ಡ್ ನೀಡದಿದ್ದರೆ ಅವರು ಆತ್ಮಹತ್ಯೆಯಲ್ಲದೆ ಬೇರೆ ಯಾವ ಪರಿಹಾರ ಕಂಡುಕೊಳ್ಳಲು ಸಾಧ್ಯ?

2001 ರ ಜನಗಣತಿಯಿಂದ ದೊರೆತ ಅಂಕಿ ಅಂಶಗಳಿಗೆ ಪಡಿತರ ಕಾರ್ಡ್‌ಗಳ ಸಂಖ್ಯೆಯನ್ನು ಸರಿಜೋಡಿಸುವ ಪ್ರಯತ್ನವೂ ಪ್ರಶ್ನಾರ್ಹವಾಗಿದೆ. ಕೂಲಿಕಾರರ ಕುಟುಂಬಗಳು ಪ್ರತಿವರ್ಷವೂ ಗುಳೆ ಹೋಗುತ್ತಿರುವಾಗ ಜನಗಣತಿ ವಸ್ತುನಿಷ್ಠವಾಗಿ ಜರುಗುವುದು ಅಸಾಧ್ಯ. ಜನಗಣತಿ ಬಗ್ಗೆ ಆಸಕ್ತಿ ವಹಿಸದ ಒಂದು ಬಡ ಕುಟುಂಬ ಅಗ್ಗದ ದರದಲ್ಲಿ ಅಕ್ಕಿಗೋಧಿ ಪಡೆಯಲು ಹಳದಿಕಾರ್ಡ್ ದೊರಕಿಸಿಕೊಳ್ಳಲು ಹೆಚ್ಚು ಆಸಕ್ತಿವಹಿಸುವುದು ಸಹಜ. ಗ್ರಾಮ ಗ್ರಾಮಗಳಲ್ಲಿ ಸಾಕಷ್ಟು ಪ್ರಚಾರ ಮಾಡಿ, ವಲಸೆ ಹೋದ ಕುಟುಂಬಗಳ ಪ್ರತಿನಿಧಿಗಳು ಹಿಂದಿರುಗಿ ಬರಲು ಅವಕಾಶ ನೀಡಿ, ಗ್ರಾಮದಲ್ಲೇ ನಡೆಯುವ ಗ್ರಾಮಸಭೆಯಲ್ಲಿ ಹಳದಿ ಪಡಿತರ ಕಾರ್ಡ್‌ಗಳ ಫಲಾನುಭವಿಗಳನ್ನು ಗುರುತಿಸುವುದನ್ನು ಕಡ್ಡಾಯ ಮಾಡಿದರೆ ಮಾತ್ರ ಅರ್ಹ ಫಲಾನುಭವಿಗಳನ್ನು ಸರಿಯಾಗಿ ಗುರುತಿಸಲು ಸಾಧ್ಯ. ವಲಸೆಹೋಗುವ ಕುಟುಂಬಗಳಿಗೆ ಪ್ರತಿತಿಂಗಳು ಸ್ವಗ್ರಾಮದಲ್ಲಿ ಅಗತ್ಯಪಡಿತರ ಆಹಾರಧಾನ್ಯಗಳು ದೊರೆಯಲು ಸಾಧ್ಯವಾದರೆ ಅವರು ಮಕ್ಕಳು ಮರಿ ಕಟ್ಟಿಕೊಂಡು ಎಲ್ಲೆಲ್ಲೋ ದೂರದ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಡೆಯಲು ಸಾಧ್ಯವಾಗುವುದು. ಎಲ್ಲಕ್ಕೂ ಮುಖ್ಯವಾಗಿ ಸರ್ಕಾರ ವಿಶ್ವಬ್ಯಾಂಕ್‌ನ ಆದೇಶವನ್ನು ಧಿಕ್ಕರಿಸಿ ರಾಜ್ಯದ ಎಲ್ಲ ಅರ್ಹ ಬಡ ಕುಟುಂಬಗಳಿಗೆ ಪಡಿತರ ವ್ಯವಸ್ಥೆಯನ್ನು ವಿಸ್ತರಿಸುವ ಧೈರ್ಯ ತೋರಬೇಕಾಗಿದೆ.

**ನೇರ ಸಂಘರ್ಷ ಅನಿವಾರ್ಯ**

ಬಡತನ ರೇಖೆಯ ಕೆಳಗಿರುವವರು ಮತ್ತು ಮೇಲಿನವರನ್ನು ಆಯಾ ಸಂದರ್ಭಕ್ಕೆ ತಕ್ಕಂತೆ, ಆಡಳಿತ ನಡೆಸುವ ಪಕ್ಷಗಳು ತಮ್ಮ ಮೂಗಿನ ನೇರಕ್ಕೆ ತಕ್ಕಂತೆ ವ್ಯಾಖ್ಯಾನಿಸುತ್ತವೆ. ಪಡಿತರ ಕಾರ್ಡ್ ವಿತರಿಸುವ ಮಾನದಂಡಗಳಲ್ಲಿರುವ ದೋಷಗಳನ್ನು ಸರಿಪಡಿಸುವಂತೆ ಪ್ರಸಕ್ತ ಸರ್ಕಾರದ ಮೇಲೆ ತೀವ್ರ ಒತ್ತಡ ಹೇರುವುದು ಅಗತ್ಯವಿದೆ. ರಾಜ್ಯದ ಎಲ್ಲ ಅರ್ಹ ಬಡ ಕುಟುಂಬಗಳಿಗೆ ಅಗ್ಗದ ದರದ ಅಕ್ಕಿ, ಗೋಧಿ, ಸೀಮೆಎಣ್ಣೆ ಪಡೆಯಲು ಬೇಕಾಗುವ ಕಾರ್ಡ್‌ಗಳನ್ನು ನೀಡುವಂತೆ ಸರ್ಕಾರವನ್ನು ಒತ್ತಾಯಿಸಬೇಕಾಗಿದೆ.

ಈಗಾಗಲೇ ರಾಜ್ಯದ ಹಲವು ಕಡೆ ತೀವ್ರತರನಾದ ಚಳುವಳಿಗಳು ನಡೆಯುತ್ತಿವೆ. ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಜನವಾದಿ ಮಹಿಳಾ ಸಂಘ ಮತ್ತು ಡಿವೈಎಫ್‌ಐ ಸಂಘಟನೆಗಳು ಹಳದಿ ಕಾರ್ಡ್ ಪ್ರಶ್ನೆಯನ್ನು ತುಂಬಾ ಪರಿಣಾಮಕಾರಿ ಯಾಗಿ ಎತ್ತಿಕೊಂಡಿವೆ. ಉಡುಪಿ ಜಿಲ್ಲೆಯಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ಗ್ರಾಮ ಮಟ್ಟದಲ್ಲಿ ಚಳುವಳಿ ನಡೆಸಲಾಗುತ್ತಿದೆ. ಬೆಳಗಾವಿ ಜಿಲ್ಲೆಯ ರಾಮದುರ್ಗದಲ್ಲಿ ವ್ಯಾಪಕ ಪ್ರಚಾರ ಪ್ರಕ್ಷೋಭೆ ನಡೆಸಲಾಗುತ್ತಿದೆ. ಗುಲ್ಬರ್ಗಾ, ಬೀದರ್ ಜಿಲ್ಲೆಗಳಲ್ಲಿ ಹಳದಿ ಕಾರ್ಡ್‌ಗಳಿಗಾಗಿ ವ್ಯವಸ್ಥಿತವಾದ ಚಳುವಳಿ ನಡೆಯುತ್ತಿದೆ. ಬೆಂಗಳೂರು ಗ್ರಾಮಾಂತರ, ಕೋಲಾರ, ಬಳ್ಳಾರಿ, ರಾಯಚೂರು, ಕೊಪ್ಪಳ, ವಿಜಾಪುರ ಜಿಲ್ಲೆಗಳಲ್ಲಿಯೂ ಹಳದಿ ಕಾರ್ಡುಗಳಿಂದ ವಂಚಿತರಾದವರನ್ನು ಪರಿಣಾಮಕಾರಿಯಾಗಿ ಬೀದಿಗಿಳಿಸುವ ಪ್ರಯತ್ನ ನಡೆದಿದೆ. ಜನವಾದಿ ಮಹಿಳಾ ಸಂಘಟನೆ ಇದೇ ತಿಂಗಳ 11 ರಂದು ರಾಜ್ಯದ ವಿವಿಧೆಡೆ ಹಳದಿ ಕಾರ್ಡ್ ಕಡಿತ ಮಾಡುವುದನ್ನು ವಿರೋಧಿಸಿ ಪ್ರತಿಭಟನೆ ಮಾಡಿವೆ. ❍

**ಅಕ್ಟೋಬರ್ ರಾಜ್ಯಾದ್ಯಂತ ಪ್ರತಿಭಟನೆಗೆ ಕರೆ**

29 ಕ್ಕೆ ಇಡೀ ರಾಜ್ಯದಲ್ಲಿ ತಾಲ್ಲೂಕು ಕಛೇರಿಗಳಿಗೆ ಮುತ್ತಿಗೆ ಹಾಕಲು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಕರೆ ನೀಡಿವೆ.

ಅಕ್ಟೋಬರ್ 29 ರ ಚಳುವಳಿ ರಾಜ್ಯದಲ್ಲಿ ಎಲ್ಲರ ಗಮನ ಸೆಳೆಯುವ ಒಂದು ಘಟನೆಯಾಗಬೇಕು. ಪಡಿತರ ಕಾರ್ಡ್‌ಗಳಿಂದ ವಂಚಿತರಾದ ಬಡವರನ್ನು ದೊಡ್ಡ ಸಂಖ್ಯೆಯಲ್ಲಿ ಅಣಿನೆರೆಸಲು ಸಾಧ್ಯವಾಗಬೇಕು. ಕಾರ್ಡ್‌ಗಳ ವಿತರಣೆಯಾಗದೆ ನಾವು ವಾಪಸ್ ಹೋಗುವುದಿಲ್ಲ ಎಂಬ ಹಠ ಹಿಡಿದು ಕುಳಿತುಕೊಳ್ಳುವಂತಾಗಬೇಕು. ಅರ್ಹರಿಗೆ ಪಡಿತರ ಆಹಾರಧಾನ್ಯ ವಿತರಿಸದೆ ಆಡಳಿತ ನಡೆಸಲು ಸಾಧ್ಯವಿಲ್ಲ ಎಂಬ ಪರಿಸ್ಥಿತಿ ಉಂಟು ಮಾಡಬೇಕು. ಪೊಲೀಸರ ಬಲ ಪ್ರಯೋಗವನ್ನು ಒಗ್ಗಟ್ಟಿನಿಂದಎದುರಿಸಬೇಕು. ಒಟ್ಟಾರೆಯಾಗಿ ಅಕ್ಟೋಬರ್ 29 ರ ಸಂಘರ್ಷ ಸಾಂಕೇತಿಕ ಪ್ರತಿಭಟನೆಯಾಗದೆ, ಸಮರಶೀಲ ಹೋರಾಟಕ್ಕೆ ನಾಂದಿಯಾಗಬೇಕು. ದಿನಗಟ್ಟಲೆ, ಹಗಲು ರಾತ್ರಿ, ಪ್ರದರ್ಶನ ನಡೆಸಲು ಸಾಧ್ಯವಾದರೆ ಪ್ರಶ್ನೆ ಇತ್ಯರ್ಥವಾಗದೇ ಇರಲಾರದು. ಸರ್ಕಾರಿ ಉಗ್ರಾಣಗಳಲ್ಲಿ ಇಷ್ಟೊಂದು ಆಹಾರ ಧಾನ್ಯಗಳುಕೊಳೆಯುತ್ತಿರುವಾಗ ನಮ್ಮ ಜನ ಹಸಿವೆಯಿಂದ ಏಕೆ ಸಾಯಬೇಕು?



ರೇಷನ್ ಕಾರ್ಡ್-ರೇಷನ್ ಕಾರ್ಡ್ : ಕುಂದಾಪುರ ತಾಲ್ಲೂಕಿನಾದ್ಯಂತ ವ್ಯಾಪಕ ಪ್ರತಿಭಟನೆ, ಹಾಗೆಯೇ ಅನೇಕ ಜಿಲ್ಲೆಗಳಲ್ಲಿಯೂ

# ಆಸ್ತಿ ತೆರಿಗೆ ರದ್ದತಿ ಹಾಗೂ ಹಳದಿ ರೇಶನ್ ಕಾರ್ಡಿಗಾಗಿ ಧರಣಿ-ಮತ ಪ್ರದರ್ಶನ

ಆರ್ಥಿಕವಾಗಿ ಹಿಂದುಳಿದ ಎಲ್ಲಾ ಕುಟುಂಬಗಳಿಗೆ ರೇಶನ್ ಕಾರ್ಡು ವಿತರಣೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಆಸ್ತಿ ತೆರಿಗೆಯನ್ನು ಹಳೆ ಪದ್ಧತಿಯಲ್ಲಿ ಮುಂದುವರಿಯುವಂತೆ ಒತ್ತಾಯಿಸಿ ಸಿಪಿಐ(ಎಂ) ಪಕ್ಷದಿಂದ ಆಗಸ್ಟ್ 15ರಿಂದ ಸೆಪ್ಟೆಂಬರ್ 15ರ ತನಕ ಗ್ರಾಮ ಪಂಚಾಯತ್ ಕಛೇರಿಯ ಎದುರು ಪ್ರತಿಭಟನಾ ಮತ ಪ್ರದರ್ಶನ ನಡೆಯಿಸಿ ಮುಖ್ಯಮಂತ್ರಿಯವರಿಗೆ ಮನವಿ ಅರ್ಪಿಸಲಾಯಿತು. ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಹೊಸ ಆಸ್ತಿ ತೆರಿಗೆ ಹೆಸರಿನಲ್ಲಿ ವಸತಿ ಕಟ್ಟಡ, ಹಟ್ಟಿ-ಕೊಟ್ಟಿಗೆ ಗೂಡು, ದರೆ, ಬಾವಿ ಎಲ್ಲವುಗಳಿಗೆ ತೆರಿಗೆ ವಿಧಿಸುವ ನಿಯಮ ಜಾರಿ ಮಾಡಿ ಮನೆ ತೆರಿಗೆಯನ್ನು ಎರಡರಿಂದ ಮೂರು ಪಟ್ಟು ಹೆಚ್ಚಿಸುವ ಗ್ರಾಮೀಣ ಪ್ರದೇಶದಲ್ಲಿ ಜನರನ್ನು ದೋಚುವ ಕೆಲಸವೂ ಕಾನೂನು ಹೆಸರಿನಲ್ಲಿ ಆರಂಭವಾಗಿದೆ.

ಕಡಿಮೆ ಆದಾಯ ಇರುವವರಿಗೆಲ್ಲ ಹಾಗೂ ಎಲ್ಲಾ ಬಡ ಕುಟುಂಬಗಳಿಗೆ ಪಡಿತರ ಚೀಟಿ (ರೇಶನ್ ಕಾರ್ಡು) ಒದಗಿಸಬೇಕು. ಫಲಾನುಭವಿಗಳನ್ನು ಗ್ರಾಮ ಸಭೆಗಳಲ್ಲಿ ಸ್ಥಳೀಯವಾಗಿ ಗುರುತಿಸಬೇಕು, ರೇಶನ್ ಕಾರ್ಡುಗಳ ಮೂಲಕ ಕೆ.ಜಿ. ಒಂದಕ್ಕೆ ರೂ. 3.00ರಂತೆ ಅಕ್ಕಿ, ಗೋಧಿ ಮುಂತಾದ ದವಸ-ಧಾನ್ಯ ಒದಗಿಸಬೇಕು, ಗ್ರಾಮೀಣ ಪ್ರದೇಶಗಳಲ್ಲಿ ಆಸ್ತಿ ತೆರಿಗೆ ಹಳೆ ಕ್ರಮದಲ್ಲಿ ನಿಗದಿ ಮಾಡಬೇಕು. ಮತ್ತು ಆಸ್ತಿ ತೆರಿಗೆ ರದ್ದಾಗಬೇಕು, ಹಾಗೂ ಬಡ ಮಧ್ಯಮ ವರ್ಗದವರಿಗೆ ಗ್ಯಾಸ್ ಇದ್ದವರಿಗೂ ಸೀಮೆಎಣ್ಣೆ ವಿತರಿಸಬೇಕೆಂದು ಒತ್ತಾಯಿಸಿ ಕುಂದಾಪುರ ಮತ್ತು ಉಡುಪಿ ತಾಲೂಕಿನ ಹೆಚ್ಚಿನ ಗ್ರಾಮಗಳಲ್ಲಿ ಸಿಪಿಐ(ಎಂ) ಪಕ್ಷದ ಶಾಖೆಗಳ ನೇತೃತ್ವದಲ್ಲಿ ಮತ ಪ್ರದರ್ಶನ ಧರಣಿ ನಡೆಸಿ ಮುಖ್ಯ ಮಂತ್ರಿಯವರಿಗೆ ಮನವಿ ಅರ್ಪಿಸಲಾಯಿತು.

ಕುಂದಾಪುರ ತಾಲೂಕಿನಲ್ಲಿ ವಕ್ವಾಡಿ, ಬಳ್ಕೂರು, ಕರ್ಕುಂಜೆ, ಕೆದೂರು, ಆನಗಳ್ಳಿ, ಬಸ್ರೂರು, ತಲ್ಲೂರು, ಕಾವ್ರಾಡಿ, ಹಟ್ಟಿಅಂಗಡಿ ಮತ್ತು ಕೋಣಿ ಪಂಚಾಯತಿಗಳಲ್ಲಿ ಬೇರೆ ಬೇರೆ ದಿನಗಳಲ್ಲಿ ಹಳದಿ ಕಾರ್ಡಿಗಾಗಿ ಮತಪ್ರದರ್ಶನ ನಡೆಯಿತು. ಮುಂಚಿತವಾಗಿ ಮನೆ ಮನೆಗೆ ಹೋಗಿ ಕರಪತ್ರ ಹಂಚಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಮತಪ್ರದರ್ಶನದಲ್ಲಿ ಭಾಗವಹಿಸಿದ್ದು ವಿಶೇಷವಾಗಿದೆ.

ಕುಂದಾಪುರ ತಾಲೂಕ ಕೇಂದ್ರದಲ್ಲಿ 28.09.2004ರಂದು ಬೃಹತ್ ರ್‍ಯಾಲಿ ನಡೆದು, ತಾಲೂಕು ಕಛೇರಿಯ ಎದುರು ಪ್ರತಿಭಟನಾ ಮತಪ್ರದರ್ಶನ ನಡೆದಾಗ ಮಾನ್ಯ ತಹಶೀಲ್ದಾರರು ಈ ಮೇಲಿನ ಬೇಡಿಕೆಗಳನ್ನು ಇತ್ಯರ್ಥ ಗೊಳಿಸುವುದಾಗಿ, 2 ತಿಂಗಳ ಒಳಗೆ ತಾತ್ಕಾಲಿಕವಾಗಿ ಗುರುತು ಚೀಟಿ ಇದ್ದವರಿಗೆಲ್ಲಾ ಹಳದಿ ಕಾರ್ಡು ಕೊಡುವುದಾಗಿ ಭರವಸೆ ನೀಡಿರುತ್ತಾರೆ. ಆಯಾಯ ಗ್ರಾಮಗಳಲ್ಲಿ ಫಲಾನುಭವಿಗಳನ್ನು ಸ್ಥಳೀಯ ಗ್ರಾಮ ಸಭೆಯಲ್ಲಿಯೇ ಗುರುತಿಸುವುದು ಹಾಗೂ ಇನ್ನು ಅರ್ಜಿ ಹಾಕುವವರಿಗೆ ಸಮಯಾವಕಾಶ ನೀಡುವುದಾಗಿ ತಿಳಿಸಿರುತ್ತಾರೆ.

ಉಡುಪಿ ತಾಲೂಕಿನಲ್ಲಿ ತಾರೀಕು 19.8.2004ರಿಂದ 30.08.2004ರ ವರೆಗೆ ತೆಂಕನಿಡೂರು, ಕಲ್ಯಾಣಪುರ, ಮಲ್ಪೆ, ಬೈಲೂರು, ಅಲೆವೂರು, ವಾರಂಬಳ್ಳಿ, ಪುತ್ತೂರು, ಹಂದಾಡಿ ಗ್ರಾಮ ಪಂಚಾಯಿತಿ ಕಛೇರಿಯ ಎದುರು ಪ್ರತಿಭಟನಾ ಮತ ಪ್ರದರ್ಶನ ನಡೆದಿದೆ. ಚಳುವಳಿಯಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದು ಹೊಸ ಬೆಳವಣಿಗೆಯಾಗಿದೆ. ಬ್ರಹ್ಮಾವರ ಮತ್ತು ಉಡುಪಿ ಕೇಂದ್ರದಲ್ಲಿಯೂ ಕೂಡಾ ಸಾಮೂಹಿಕ ಪ್ರತಿಭಟನೆ ನಡೆದಿದೆ. ಪ್ರತಿಭಟನಾ ಮತ ಪ್ರದರ್ಶನಗಳಲ್ಲಿ 100 ರಿಂದ 300 ಮಂದಿ ಭಾಗವಹಿಸಿ ದ್ದಾರೆ. ಅಧಿಕಾರಿಗಳು ಹಾಗೂ ತಾಲೂಕು ತಹಶೀಲ್ದಾರವರು ಮುಂದಿನ 2 ತಿಂಗಳ ಒಳಗೆ ಹಸಿರು ಕಾರ್ಡು ಇದ್ದವರಿಗೆಲ್ಲಾ ಹಳದಿ ಕಾರ್ಡು ಕೊಡಲು ರೇಶನ್ ಎಲ್ಲಾ ಬಡವರಿಗೆ ವಿತರಣೆ ಮಾಡುವುದಾಗಿ ಒಪ್ಪಿರುತ್ತಾರೆ.

ಜನ ಸಾಮಾನ್ಯರ ಬಡ ಜನರ ಅವರದೇ ಆದ ಮುಖ್ಯ ಬೇಡಿಕೆಗೆ ಹೆಚ್ಚಿನ ಮಹತ್ವ ಬಂದಿದೆ. ಸ್ಫೂರ್ತಿಯಿಂದ ಬಡರೈತರು, ಕೃಷಿ ಕೂಲಿಗಾರರು ಹಾಗೂ ಇತರ ಜನ ವಿಭಾಗದವರು ಭಾಗವಹಿಸುತ್ತಿರುವುದು ಇದು ಹೊಸ ಬೆಳವಣಿಗೆ ಆಗಿದೆ. ಈಗಾಗಲೇ ತಾಲೂಕು ಕೇಂದ್ರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಹಂತದ ಹೋರಾಟ ನಡೆದಿದೆ. ಮುಂದಕ್ಕೆ ಇನ್ನೊಂದು



ಹಂತದ ಚಳುವಳಿಯನ್ನು ಸಾಮೂಹಿಕವಾಗಿ ಮಡುವ ಅವಶ್ಯಕತೆ ಬಂದಲ್ಲಿ ವ್ಯಾಪಕ ಪ್ರಚಾರ ಮಾಡಿ ಹೊಸ ಆಸ್ತಿ ತೆರಿಗೆ ರದ್ಧತಿಗಾಗಿ ಹಳದಿ ಕಾರ್ಡು ಎಲ್ಲಾ ಬಡವರಿಗೆ ಸಿಗಬೇಕೆಂದು ಆಗ್ರಹಿಸಿ ಹೋರಾಟ ಮಾಡಬೇಕಾಗಿದೆ. ಜನತೆಯ ಬೇಡಿಕೆಗಾಗಿ ಮಹತ್ವದ ಹೋರಾಟಕ್ಕೆ ಸಿದ್ಧತೆ ನಡೆಸೋಣ.

ವರದಿ - **ಕೆ.ಶಂಕರ್**

## ನಕ್ಸಲೀಯರು - ಪೊಲೀಸರ ಚಕಮಕಿಯಲ್ಲಿ ........

ಪುಟ 3 ರಿಂದ

ವಾಪಸಾಗುವಾಗ ಬುತ್ತಿಡಬ್ಬ, ಕುಡಿವ ನೀರಿನ ಬಾಟಲಿ ಮುಂತಾದದ್ದರಲ್ಲಿ ಒಂದಿಷ್ಟು ಹಿಡಿದು ಕೊಂಡು ಬಂದಿದ್ದಾರೆ. ಒಟ್ಟಾರೆ ಪಶ್ಚಿಮ ಘಟ್ಟದಲ್ಲಿ ಆದಿವಾಸಿ ಹಕ್ಕು ಮತ್ತು ರಾಷ್ಟ್ರೀಯ ಉದ್ಯಾನವನದ ಬಗೆಗಿನ ಚಳುವಳಿ ಬೇರೆ ಹಾದಿ ಹಿಡಿಯುತ್ತಿದೆ. ಒಂದೆಡೆ ನಕ್ಸಲೀಯರು ಇನ್ನೊಂದೆಡೆ ಪೊಲೀಸರ ನಡುವೆ ಬದುಕು ಕಳೆದುಕೊಳ್ಳುತ್ತಿರುವ ನಿವಾಸಿಗಳ ಪ್ರಶ್ನೆಗಳೇ ಕಳೆದುಹೋಗಬಹುದು. ಅಲ್ಲಿನ ಜನ ಪ್ರಜಾಸತ್ತಾತ್ಮಕವಾಗಿ ಪ್ರಶ್ನೆ ಎತ್ತದೇ ಹೋಗಬಹುದಾದ ಸಂದರ್ಭಗಳೂ ಬರಬಹುದು.

**ಯಾರೀ ನಾಗರೀಕರು? ಏನೀ ಮಾತುಕತೆ?**

ಇಷ್ಟಾಗುವಾಗ ನಕ್ಸಲೀಯರ ವಿರುದ್ಧ ಕಾರ್ಯಾಚರಣೆ ನಿಲ್ಲಿಸಿ ಎಂದು 'ಶಾಂತಿಗಾಗಿ ನಾಗರಿಕರು' ಎಂಬ ವೇದಿಕೆಯಿಂದ ಮುಖ್ಯಮಂತ್ರಿಗೆ ಮನವಿ ನೀಡಿ ಚರ್ಚಿಸಿದ್ದಾರೆ. ವಿಶೇಷವೆಂದರೆ ಪತ್ರಕರ್ತೆ ಗೌರಿಲಂಕೇಶ್ ಬಿಟ್ಟರೆ, ಅಲ್ಲಿರುವ ನಾಗರಿಕರೆಲ್ಲರೂ 'ಪೀಪಲ್ಸ್ ವಾರ್' ಗುಂಪಿನವರೇ. ಶಸ್ತ್ರಗಳನ್ನು ಬಿಟ್ಟು ಮಾತುಕತೆಗೆ ಬನ್ನಿ ಎಂದೇ ಮುಖ್ಯಮಂತ್ರಿಗಳೂ ಹೇಳಿದ್ದಾರೆ. 'ಕಾರ್ಯಾಚರಣೆ ನಿಲ್ಲಿಸಿ, ಮಾತುಕತೆ ನಡೆಸಿ, ಸಮಸ್ಯೆ ಇತ್ಯರ್ಥ ಪಡಿಸಿ' ಎಂಬ ಆಕರ್ಷಕ ಮಾತುಗಳನ್ನೇನೋ ವಾರ್ ಗುಂಪಿನ ಬೆಂಬಲಿಗರು ಆಡುತ್ತಾರೆ. ಆದರೆ 'ಕ್ರಾಂತಿಯನ್ನು ಮಾತುಕತೆಯಿಂದ ತರಲಾಗದು' ಎಂದು ಕಾಡಿನ ಗುಂಪಿನ ನಾಯಕ ಪ್ರೇಮ್ ಹೇಳುತ್ತಾರೆ. ಅಂದರೆ ಸಮಸ್ಯೆಗೆ ಇತ್ಯರ್ಥ ಕಾಣುವ ಪ್ರಾಮಾಣಿಕತೆಯನ್ನು ಕಾಡಿನಲ್ಲೇ ಹುಡಕಬೇಕಾದೀತು!

**ಮಾಧ್ಯಮಗಳ ಪುಳಕ !** : ಇಂತಹ ಹಾದಿಬಿಟ್ಟ ತಪ್ಪು ಜಾಡು ಹಿಡಿದ ಚಳುವಳಿಯ ಬಗ್ಗೆ ಪತ್ರಿಕೆ-ಟಿ.ವಿ. ಮಾಧ್ಯಮಗಳಿಗೆ ಎಲ್ಲಿಲ್ಲದ ಪುಳಕ ವಿದ್ದಂತಿದೆ. ಇಂತಹ ಚಳುವಳಿಯನ್ನು ವಿಮರ್ಶಿಸುವ, ಸಮಚಿತ್ತದಿಂದ ನೋಡುವ ಪರಿ ಯನ್ನೇ ಕಳೆದುಕೊಂಡು ಮಾರುಕಟ್ಟೆಗಾಗಿ ಸ್ಪರ್ಧಿಸು ವುದರ ಬಗ್ಗೆ ಪುನರ್ ವಿಮರ್ಶೆ ಅಗತ್ಯವಿದೆ.

## ಪರ್ಯಾಯದ ರಾಜಕಾರಣದ.....

ಪುಟ 5 ರಿಂದ

**ಪರ್ಯಾಯ ರಾಜಕಾರಣ - ಸರಿಯಾದ ಆದರೆ ಕಠಿಣವಾದ ದಾರಿ**

ಪರ್ಯಾಯ ರಾಜಕಾರಣಕ್ಕಾಗಿ ಎಂಬ ಘೋಷಣೆಯ ಅಡಿಯಲ್ಲಿ ನಡೆಯುತ್ತಿರುವ ಚಟುವಟಿಕೆಗಳು ಕರ್ನಾಟಕದ ಜನಬೆಂಬಲವನ್ನು ಗಳಿಸಬೇಕಾದರೆ, ದಲಿತ ಹಾಗೂ ರೈತ ಚಳುವಳಿಗಳು ಮತ್ತೆ ತಮ್ಮ ಹಿಂದಿನ ಸ್ಥಿತಿಯತ್ತ ಮರಳಬೇಕಾದರೇ ತಮ್ಮ ಸಂಘಟನೆ, ಚಳುವಳಿಗಳ ಕೊರತೆ, ವೈಫಲ್ಯಗಳ ಬಗ್ಗೆ ಚಿಂತನೆ ಮಾಡದೆ ಅದನ್ನು ಸರಿಪಡಿಸಿಕೊಳ್ಳಲು ದೃಢವಾದ ಪ್ರಯತ್ನ ಮಾಡದೆ ಸಾಧ್ಯವಾದೀತೆ?

**ಪರ್ಯಾಯ ಎಂದರೇನು?**

ಪರ್ಯಾಯ ರಾಜಕಾರಣವೆಂಬ ಪದಗುಚ್ಛ ಸೂಚಿಸುವುದೇನು? ಆಳುವ ವರ್ಗದ, ಶೋಷಕ ವರ್ಗದ ರಾಜಕೀಯಕ್ಕೊಂದು ಪರ್ಯಾಯ ಎಂದು. ಹೀಗಾಗಿ ಪರ್ಯಾಯ ರಾಜಕೀಯದ ಮುಖ್ಯ ಆಧಾರ ಹಾಗೂ ನಿರ್ದೇಶಕರು ಜನತೆ, ದುಡಿಯುವ ಜನತೆ. ಜನಸಮುದಾಯದ, ರೈತ ಸಮುದಾಯದ, ದಲಿತ ಸಮುದಾಯದ ಒಂದು ವಿಭಾಗದ ಕೆಲ ಸಮಸ್ಯೆಗಳಿಗೆ ಮಾತ್ರ ಗಮನ ನೀಡುವ ಪ್ರವೃತ್ತಿಗೆ ಬದಲಾಗಿ ಸಮುದಾಯದ ಬಹುಭಾಗದ ಪ್ರಮುಖ ಸಮಸ್ಯೆಗಳನ್ನು ದೈನಂದಿನ ಸಮಸ್ಯೆಗಳನ್ನು ಎತ್ತಿಕೊಳ್ಳಲು ಮುಂದಾದಾಗ ಮಾತ್ರ ಚಳುವಳಿ ವಿಸ್ತಾರವಾಗುತ್ತದೆ. ಜನರನ್ನು ಸೆಳೆಯುತ್ತದೆ. ಇಂತಹ ವಿಸ್ತಾರವಾದ ಜನ ಚಳುವಳಿಗಳೇ ರಾಜಕೀಯದ ಆಧಾರವಾದಾಗ ಮಾತ್ರ ಪರ್ಯಾಯ ರಾಜಕಾರಣ ಎಂಬ ಮಾತು ಸಲ್ಲುತ್ತದೆ. ಜನಸಾಮಾನ್ಯರೇ ಆ ಪಕ್ಷದೊಳಗೆ ಸಂಘಟನೆಯೊಳಗೆ ನಿರ್ಧಾರಕ ಶಕ್ತಿಗಳಾಗಬೇಕು.

ಜನರಿಗಾಗಿ ರಾಜಕೀಯ ಮಾತ್ರವಲ್ಲ, ಜನರಿಂದಲೇ ರಾಜಕೀಯ. ಸಂಘಟನೆಗಳ, ಪಕ್ಷದ ಸಂಘಟನಾ ರಚನೆ, ಕಾರ್ಯ ವಿಧಾನಗಳನ್ನೂ ಅದಕ್ಕೆ ತಕ್ಕಂತೆ ರೂಪಿಸಿಕೊಳ್ಳಬೇಕಾಗುತ್ತದೆ. ನಾಯಕರನ್ನು, ಸಂಘಟನೆಯ ಹಿಡಿತದೊಳಕ್ಕೆ, ಸಂಘಟನೆಯ ಸಾಮಾನ್ಯ ಸದಸ್ಯರ ನಿಯಂತ್ರಣಕ್ಕೆ ತರಬೇಕಾಗುತ್ತದೆ. ವ್ಯಕ್ತಿನಿಷ್ಟತೆಯನ್ನು ಪ್ರಜ್ಞಾಪೂರ್ವಕವಾಗಿ ದೃಢವಾಗಿ ಹೊಡೆದೋಡಿಸಬೇಕಾಗುತ್ತದೆ.

ಪರ್ಯಾಯ ರಾಜಕಾರಣದ ಪ್ರಯತ್ನ ಆರಂಭವಾಗಬೇಕಾದುದೇ ಚಳುವಳಿಯಿಂದ. ಜನರ ಸಮಸ್ಯೆಗಳಿಗಾಗಿ ಜನರೇ ನಡೆಸುವ ಚಳುವಳಿಗೆ ಪ್ರೇರಣೆ ನೀಡುವುದರಿಂದ ಈ ಚಳುವಳಿಯ ಪ್ರಶ್ನೆಗಳನ್ನು ಪ್ರಗತಿಪರ ಸಂಘಟನೆಗಳು ನಿರ್ದಿಷ್ಟವಾಗಿ ತೀರ್ಮಾನಿಸಿ ಜನರನ್ನು ಸೆಳೆಯಬೇಕು. ಹೋರಾಟಕ್ಕೆ ತೊಡಗಿಸಿಕೊಳ್ಳಬೇಕು. ಇಂತಹ ಪ್ರಯತ್ನದಲ್ಲಿ ವಿವಿಧ ಸಂಘಟನೆಗಳ ಕಾರ್ಯಕರ್ತರು ತೊಡಗಿಸಿ ಕೊಳ್ಳುವುದು ಪರಸ್ಪರ ಅರಿಯುವುದು ಜನರ ಅಡಿಯಾಳಾಗಿ ದುಡಿಯುವುದನ್ನು ಕಲಿಯುವುದು, ಸ್ವಾರ್ಥ, ಸಂಕುಚಿತತೆ, ಅವಕಾಶವಾದಿ ತನವನ್ನು ತೊರೆಯುವುದು ಮಾತ್ರ ಪರ್ಯಾಯ ರಾಜಕಾರಣದಲ್ಲಿ ಆಧಾರವಾಗಬಲ್ಲುದು.

ಇದಕ್ಕೆ ಬದಲಾಗಿ ಸಂಘಟನೆಗಳ ನಾಯಕರು, ಅವರ ಇಚ್ಛೆಗಳು, ಆತುರ, ಕಾತುರಗಳು ಪ್ರಧಾನವಾದರೆ ಕುದುರೆಯನ್ನು ಜಟಕಾದ ಮುಂದೆ ಕಟ್ಟುವುದಕ್ಕೆ ಬದಲಾಗಿ ಜಟಕಾವನ್ನು ಕುದುರೆಯ ಮುಂದೆ ಕಟ್ಟಿದಂತಾಗುತ್ತದೆ. ಆದ್ದರಿಂದ ಜನಪರ ಚಳುವಳಿಗಳ ಒಕ್ಕೂಟವನ್ನು ಬಲಪಡಿಸುವುದೇ ಪರ್ಯಾಯ ರಾಜಕಾರಣದ ಮೊದಲ ಹೆಜ್ಜೆಯಾಗಬೇಕು.


**ರೈತ, ದಲಿತರೊಡನೆ ಕಾರ್ಮಿಕರ ಪಾತ್ರ**

ಇಂತಹುದೊಂದು ಪ್ರಮುಖ ಪ್ರಶ್ನೆಯಲ್ಲಿ ಪರ್ಯಾಯ ರಾಜಕಾರಣದ ಪ್ರಶ್ನೆಯಲ್ಲಿ ಇಂದು ದೇಶದ ಮೂರನೇ ಒಂದು ಭಾಗಕ್ಕಿಂತ ಹೆಚ್ಚಾಗಿರುವ ನಗರಗಳ ಕಾರ್ಮಿಕರು, ನೌಕರರನ್ನು ಪೂರ್ಣವಾಗಿ ಮರೆತೆ ಬಿಟ್ಟಂತೆ ಚರ್ಚೆಗಳು ನಡೆದಿವೆ. ಇಂದು ಗ್ರಾಮಾಂತರದ ಚುನಾಯಿತ ಕ್ಷೇತ್ರಗಳು ಕಡಿಮೆಯಾಗುತ್ತಾ ನಗರದ ಚುನಾಯಿತ ಕ್ಷೇತ್ರಗಳು ಹೆಚ್ಚಾಗುತ್ತಾ ಇರುವಾಗ ಕೇವಲ ರಾಜಕೀಯ ಸ್ಥಾನಗಳ ದೃಷ್ಟಿಯಿಂದಲಾದರೂ ಕಾರ್ಮಿಕರ ಸ್ಥಾನವನ್ನು ಕಡೆಗಣಿಸುವುದು ಸಾಧ್ಯವೇ? ಇಂದು ರೈತರನ್ನು, ದಲಿತರನ್ನು ಬಾಧಿಸುತ್ತಿರುವ ಜಾಗತೀಕರಣ, ಕೋಮುವಾದಗಳ ವಿರುದ್ಧ ಹೋರಾಟದಲ್ಲಿ, ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಹೋರಾಟದಲ್ಲಿ ನಿರಂತರವಾಗಿ ನಿರತರಾಗಿರುವ ಕಾರ್ಮಿಕ, ನೌಕರ ವರ್ಗವನ್ನು ಕೈಬಿಟ್ಟು ಪರ್ಯಾಯ ರಾಜಕಾರಣ ಸಾಧ್ಯವೇ?

**ಎಡರಂಗದ ಸಾಧನೆ**

ಇಂದು ದೇಶದಲ್ಲಿ ಆಳುವವರ್ಗದ ಶೋಷಕ ವರ್ಗದ ವಿರುದ್ಧ ಸೆಣಸುತ್ತಿರುವ, ಚಳುವಳಿ ಆಧಾರಿತ ಚುನಾವಣೆಯ ರಾಜಕಾರಣದ ಮಾದರಿಯಾಗಿ ಎಡಪಕ್ಷಗಳು ಬೆಳೆಯುತ್ತಿವೆ. ಲೋಕಸಭೆಯಲ್ಲಿ 61 ಸ್ಥಾನ ಗಳಿಸಿವೆ. ಪ.ಬಂಗಾಳದಲ್ಲಿ 26 ವರ್ಷಗಳಿಂದ, ತ್ರಿಪುರಾದಲ್ಲಿ 22 ವರ್ಷಗಳ ಆಡಳಿತ ಪರ್ಯಾಯ ರಾಜಕಾರಣಕ್ಕೆ ಒಂದು ಮಾದರಿಯಾಗಿವೆ. ಈ ಅನುಭವವನ್ನು ಅಧ್ಯಯನ ಮಾಡುವುದು, ಅನುಭವಗಳನ್ನು ಮಥಿಸಿ ಉಪಯುಕ್ತವಾದುದನ್ನು ಸ್ವೀಕರಿಸುವುದು ಪರ್ಯಾಯ ರಾಜಕಾರಣವನ್ನು ಬಲುಪಡಿಸುತ್ತದೆ, ಬೆಳೆಸುತ್ತದೆ. ಪರ್ಯಾಯ ರಾಜಕಾರಣದ ಬಹಳಷ್ಟು ಸಭೆಗಳಲ್ಲಿ ಚಿಂತಕರು ಎಡಪಕ್ಷಗಳೊಡಗೂಡಿ ಸಾಗಬೇಕೆಂಬ ಇಚ್ಛೆಯ ಮೂಲ ಆಶಯ ಈ ಕೊಡು ಕೊಳೆಯಾಗಿರಬೇಕು

**ಭಾರತದಂತಹ ಸಾರ್ವಭೌಮ ದೇಶದ ಸರ್ಕಾರವನ್ನು ಧಿಕ್ಕರಿಸಿ ಈಶಾನ್ಯ ಭಾರತದ ರಾಜ್ಯವೊಂದರ ಮುಖ್ಯಮಂತ್ರಿಯೊಡನೆ ನೇರವಾಗಿ ವ್ಯವಹರಿಸುವ ದಾರ್ಷ್ಟ್ಯ ಬಂದಿದ್ದಾದರೂ ಹೇಗೆ? ಅದು ಆಂತರಿಕ ಬುಡಮೇಲು ಕೃತ್ಯಗಳಲ್ಲಿ ಭಾಗಿಯಾಗುತ್ತಲೇ ಬಂದ ಕುಖ್ಯಾತಿ ಹೊಂದಿದ ಅಮೆರಿಕಾದ ಸಂಸ್ಥೆಯನ್ನು ಖಂಡಿಸಿದವರ ಮೇಲೆ ಅಡ್ವಾಣಿಗೇಕೆ ಕೋಪ ?**



# ಅಡ್ವಾಣಿ ಎಫ್‌ಬಿಐ ನ ವಕೀಲ

ಪ್ರಕಾಶ್ ಕಾರಾಟ್

ಭಾರತದಲ್ಲಿ ಅಮೆರಿಕಾದ ರಾಯಭಾರಿ ಇತ್ತೀಚೆಗೆ ಈಶಾನ್ಯ ಭಾರತದಲ್ಲಿ ಉಗ್ರಗಾಮಿ ಗುಂಪುಗಳು ನಡೆಸಿದ ಧಾಳಿಗಳ ತನಿಖೆ ನಡೆಸಲು ತನ್ನ ದೇಶದ ತನಿಖಾ ಸಂಘಟನೆ ಎಫ್‌ಬಿಐ ನ ನೆರವು ಒದಗಿಸುವುದಾಗಿ ಹೇಳಿರುವುದನ್ನು ಸಿಪಿಐ(ಎಂ) ವಿರೋಧಿಸಿತ್ತು. ಇದರಿಂದ ಎಲ್.ಕೆ.ಅಡ್ವಾಣಿ ಕುಪಿತರಾಗಿದ್ದಾರೆ. ಸಿಪಿಐ(ಎಂ)ನ್ನು ಟೀಕಿಸಿದ್ದಾರೆ. ನಿರ್ದಿಷ್ಟವಾಗಿ ಜ್ಯೋತಿಬಸುರವರ ಆಕ್ಷೇಪವನ್ನು ಪ್ರಸ್ತಾಪಿಸುತ್ತಾ ಅವರು 'ಭಾರತ ಮತ್ತು ಅಮೆರಿಕದ ತನಿಖಾ ಏಜೆನ್ಸಿಗಳ ನಡುವೆ ಸಹಕಾರ ಒಂದು ನಿರಂತರ ಪ್ರಕ್ರಿಯೆ, ವಿಶ್ವಮಟ್ಟದಲ್ಲಿ ಭಯೋತ್ಪಾದಕತೆಯನ್ನು ಎದುರಿಸುವ ಪ್ರಯತ್ನದ ಭಾಗ ಎಂಬುದು ಬಸುರವರಿಗೆ ಬಹುಶಃ ತಿಳಿದಿರಲಿಕ್ಕಿಲ್ಲ' ಎಂದಿದ್ದಾರೆ.

ನಾಗಪುರದಲ್ಲಿ ಪತ್ರಕರ್ತರೊಡನೆ ಮಾತನಾಡುತ್ತಾ ಅಡ್ವಾಣಿ 'ಮಾರ್ಕ್ಸಿಸ್ಟರು ಭದ್ರತಾ ವಿಷಯಗಳಲ್ಲಿ ಮತ್ತು ವಿದೇಶಾಂಗ ನೀತಿಯಲ್ಲೂ ತಲೆ ಹಾಕುತ್ತಿದ್ದಾರೆ, ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಬಿಜೆಪಿಯ ಅತ್ಯುನ್ನತ ಮುಖಂಡ ಹಾಗೂ ಮಾಜೀ ಗೃಹ ಮಂತ್ರಿಯಿಂದ ಇಂತಹ ಹೇಳಿಕೆಗಳು ಬಂದರೆ ಆಶ್ಚರ್ಯವೇನಿಲ್ಲ. ಭಾರತ ಮತ್ತು ಅಮೆರಿಕಾದ ನಡುವೆ ನಿಕಟ ಬೇಹುಗಾರಿಕೆ ಮತ್ತು ಭದ್ರತಾ ಸಹಕಾರ ಆರಂಭವಾದದ್ದು ಇವರ ಪಾರುಪತ್ಯದಲ್ಲೇ ತಾನೇ! 1999 ರ ಮಧ್ಯಭಾಗದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಎಫ್‌ಬಿಐ ಗೆ ದಿಲ್ಲಿಯಲ್ಲಿ ಒಂದು ಕಛೇರಿ ಹಾಕಲು ಅವಕಾಶ ನೀಡಿತು. ಅಡ್ವಾಣಿಯವರು ಅಮೆರಿಕದ ಬೇಹುಗಾರಿಕೆ ಸಂಸ್ಥೆ ಸಿಐಎ ನ ಕೇಂದ್ರ ಕಚೇರಿಗೆ ಭೇಟಿ ನೀಡಿ ಸ್ವತಃ ಸಿಐಎ ನಿರ್ದೇಶಕರನ್ನೇ ಭೇಟಿಯಾದ ಭಾರತದ ಮೊದಲ ಗೃಹಮಂತ್ರಿ ಎಂಬ ಠಕ್ಕು ಹೆಗ್ಗಳಿಕೆಗೆ ಪಾತ್ರರಾದರು. ಇಸ್ರೇಲಿಗೆ ಹೋಗಿ ಇಸ್ರೇಲಿ ಬೇಹುಗಾರಿಕಾ ಸಂಸ್ಥೆಗಳಾದ ಮೊಸ್ಸಾದ್ ಮತ್ತು ಶಿನ್ ಬೆಟ್‌ನೊಂದಿಗೆ ಈಗ ಕುಖ್ಯಾತವಾಗಿರುವ ಸಂಬಂಧ ಬೆಳೆಸಿರುವವರೂ ಇದೇ ಅಡ್ವಾಣಿಯವರು.

ಅಡ್ವಾಣಿ ಅಥವಾ ಹಿಂದಿನ ಬಿಜೆಪಿ ನೇತೃತ್ವದ ಸರಕಾರ ಅಮೆರಿಕಾ ಸಂಯುಕ್ತ ಸಂಸ್ಥಾನ 'ಭಯೋತ್ಪಾದಕತೆಯ ವಿರುದ್ಧ ಜಾಗತಿಕ ಸಮರ'ದ ಮುಂದಾಳು ಎಂದು ನಂಬಿದ್ದಾರೆ. ಬಹಳಷ್ಟು ಭಾರತೀಯರು ಇದನ್ನು ಒಪ್ಪುವುದಿಲ್ಲ.

ಮಾರ್ಕ್ಸಿಸ್ಟರಿಗೆ ದೇಶದ ಭದ್ರತಾ ವಿಷಯಗಳಲ್ಲಿ ಮತ್ತು ವಿದೇಶಾಂಗ ನೀತಿಗಳಲ್ಲಿ 'ತಲೆ ಹಾಕಲು' ಹಕ್ಕು ಇಲ್ಲ ಎಂದು ಶ್ರೀಯುತ ಅಡ್ವಾಣಿ ನಂಬಿದಂತಿದೆ. ವಿದೇಶಾಂಗ ನೀತಿ ಮತ್ತು ಭದ್ರತೆಯ ವಿಷಯಗಳ ಮೇಲೆ ತಮ್ಮ ಅಭಿಪ್ರಾಯಗಳನ್ನು ಮುಂದಿಡಲು ಬಿಜೆಪಿಗೆ ಎಷ್ಟು ಹಕ್ಕಿದೆಯೋ ಅಷ್ಟೇ ಹಕ್ಕು ಸಿಪಿಐ(ಎಂ) ಮತ್ತು ಎಡಪಕ್ಷಗಳಿಗೂ ಇದೆ. ಭಾರತದ ವಿದೇಶಾಂಗ ನೀತಿಯನ್ನು ರೂಪಿಸಲು ತಮಗೆ ವಾಶಿಂಗ್ಟನ್‌ನಿಂದ ಲೈಸೆನ್ಸ್ ದೊರೆತಿದೆ ಎಂಬಂತೆ ಅಡ್ವಾಣಿ ಮತ್ತು ಜಸ್ವಂತ್ ಸಿಂಗ್ ವರ್ತಿಸುತ್ತಿದ್ದಾರೆ. ಖಂಡಿತವಾಗಿಯೂ ವಿದೇಶಾಂಗ ನೀತಿ ಮತ್ತು ಭದ್ರತೆ ಕೇವಲ ಇವರಂತವರಿಗೆ ಮಾತ್ರ ಸೇರಿದ ವಲಯವಲ್ಲ.

ಅಮೆರಿಕಾ ಸಂಯುಕ್ತ ಸಂಸ್ಥಾನಗಳ ರಾಯಭಾರಿ ಒಬ್ಬ ರಾಜ್ಯ ಮುಖ್ಯಮಂತ್ರಿಗೆ ಆಂತರಿಕ ಭದ್ರತೆಯ ವಿಷಯದಲ್ಲಿ ಎಫ್‌ಬಿಐ ಸೇವೆ ಒದಗಿಸುವುದಾಗಿ ಬರೆಯುವ ಬಗ್ಗೆ ಯೋಚಿಸಲೂ ಸಾಧ್ಯವಾಗಿರುವುದು ಅಡ್ವಾಣಿ ಮತ್ತು ಅವರಂತಹವರು ತಮ್ಮ ಅಧಿಕಾರವಧಿಯಲ್ಲಿ ಭಾರತೀಯ ಪ್ರಭುತ್ವವನ್ನು ಎಂತಹ ಮಟ್ಟಿಗೆ ಇಳಿಸಿದ್ದಾರೆ ಎಂಬುದನ್ನು ತೋರಿಸುತ್ತದೆ. ಯಾವುದೇ ಆತ್ಮಗೌರವವುಳ್ಳ ಭಾರತೀಯ ರಾಜಕಾರಣಿ ಈ ರೀತಿ ಅಮೆರಿಕದ ರಾಯಭಾರಿ ಕೇಂದ್ರ ಸರ್ಕಾರವನ್ನು ಬದಿಗೊತ್ತಿ ನೇರವಾಗಿ ಒಂದು ರಾಜ್ಯ ಸರ್ಕಾರಕ್ಕೆ ಅಮೆರಿಕನ್ ಭದ್ರತಾ ಏಜೆನ್ಸಿಗಳ ಸೇವೆಯನ್ನು ಒದಗಿಸುವುದಾಗಿ ಹೇಳಿರುವುದನ್ನು ಆಕ್ಷೇಪಿಸುತ್ತಾನೆ. ಅಡ್ವಾಣಿ ಮತ್ತು ಅವರ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಎಷ್ಟೋ ವರ್ಷಗಳ ಮೊದಲಿನಿಂದಲೇ **ಅಮೆರಿಕನ್ ಬೇಹುಗಾರಿಕೆ ಸಂಸ್ಥೆಗಳು ಈಶಾನ್ಯ ಭಾರತದಲ್ಲಿ ಸಕ್ರಿಯವಾಗಿದ್ದವು. ಅವರು ಈ ಆಸಕ್ತಿ ತೋರುತ್ತಿರುವುದು ಭಾರತದ ಭದ್ರತೆ ಮತ್ತು ಐಕ್ಯತೆಯ ಬಗ್ಗೆ ಯಾವುದೇ ಆತಂಕದಿಂದಲ್ಲ, ಬದಲಾಗಿ ಈ ಸೂಕ್ಷ್ಮ ಪ್ರದೇಶದಲ್ಲಿ ಅಮೆರಿಕನ್ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು.**

ಸಿಪಿಐ(ಎಂ) ಮತ್ತು ಎಡಪಕ್ಷಗಳು ಬಿಜೆಪಿಯ ವಿದೇಶಾಂಗ ನೀತಿ ಹಾಗೂ ಅಮೆರಿಕದ ಬಗ್ಗೆ ಅದರ ಅಂಜುಬುರುಕ ನಿಲುವನ್ನು ಲೋಕಸಭಾ ಚುನಾವಣೆಗಳಲ್ಲಿ ಒಂದು ಚರ್ಚಾ ವಿಷಯವಾಗಿ ಮಾಡಿದ್ದವು. ಬಿಜೆಪಿ ಭಾರತದ ಮಹತ್ವದ ಹಿತಾಸಕ್ತಿಗಳನ್ನು ಅಮೆರಿಕದ ಜಾಗತಿಕ ಸಾಮರಿಕ ತಂತ್ರ ಬಾಲಂಗೋಚಿಯನ್ನಾಗಿ ಮಾಡಿ ಶರಣಾಗತಗೊಳಿಸಿದರೆ, ಅದರಿಂದ ಅದನ್ನು ತಿರಸ್ಕರಿಸಿ ಎಂದು ಭಾರತೀಯ ಜನತೆಯ ನಡುವೆ ಪ್ರಚಾರ ನಡೆಸಿತ್ತು. ಈ ಚುನಾವಣೆಗಳಲ್ಲಿ ಜನತೆ ಬಿಜೆಪಿಯನ್ನು ತಿರಸ್ಕರಿಸುವ ಕಾರಣಗಳಲ್ಲಿ ಅದರ ಸಾಮ್ರಾಜ್ಯಶಾಹಿ-ಪರ ವಿದೇಶಾಂಗ ನೀತಿಯೂ ಒಂದು.

**ಸೇವಕ ಮನೋಭಾವ**

ಭಯೋತ್ಪಾದಕತೆಯನ್ನು ಎದುರಿಸುವ ಹೆಸರಲ್ಲಿ ಅಮೆರಿಕದ ಎಫ್‌ಬಿಐಗೆ ಭಾರತದೊಳಗೆ ಅಡ್ಡಾಡಲು ಮುಕ್ತ ಅವಕಾಶ ನೀಡಿದ್ದು ಶ್ರೀಯುತ ಅಡ್ವಾಣಿಯವರ ಅಡಿಯಿದ್ದ ಗೃಹ ಮಂತ್ರಾಲಯ. ಹೈದರಾಬಾದಿನ ಒಂದು ಪ್ರಕರಣವನ್ನು ನೆನಪಿಸಿಕೊಳ್ಳಿ. ಸೆಪ್ಟೆಂಬರ್ 11, 2001 ರ ಧಾಳಿಗಳು ನಡೆದ ಕೆಲವೇ ದಿನಗಳಲ್ಲಿ ಹೈದರಾಬಾದಿನ ಇಬ್ಬರು ಭಾರತೀಯ ನಾಗರಿಕರನ್ನು ಅಮೆರಿಕದಲ್ಲಿ ಬಂಧಿಸಲಾಯಿತು. ಆಗ ದಿಲ್ಲಿಯಿಂದ ಕಾರ್ಯನಿರ್ವಹಿಸಲಾರಂಭಿಸಿದ ಎಫ್‌ಬಿಐ ಕಚೇರಿ ಈ ಇಬ್ಬರು ಭಾರತೀಯರ ಕುಟುಂಬಗಳ ತನಿಖೆ ನಡೆಸಲು ತನ್ನ ತನಿಖಾಗಾರರನ್ನು ಕಳಿಸಿತು. ಹೈದರಾಬಾದ್‌ನ ಪೊಲೀಸ್ ಕಮಿಷನರ್‌ಗೆ ಈ ಕ್ರಮದ ಬಗ್ಗೆ ತಿಳಿಸಲೂ ಇಲ್ಲ. ಏಕೆಂದರೆ ಅವರಿಗೆ ಕೇಂದ್ರದ ಅನುಮತಿಯಿದ್ದಿರಬೇಕು. ಈ ಇಬ್ಬರು ಭಾರತೀಯರನ್ನು ಹತ್ತು ತಿಂಗಳಿಗೂ ಹೆಚ್ಚು ಬಂಧನದಲ್ಲಿಟ್ಟ ನಂತರ ಅವರ ಮೇಲೆ ಭಯೋತ್ಪಾದನೆಯ ಯಾವುದೇ ಆಪಾದನೆ ಹಾಕದೆ ಬಿಡುಗಡೆ ಮಾಡಲಾಯಿತು. ನಿಜ, ಬಿಜೆಪಿ ನೇತೃತ್ವದ ಸರ್ಕಾರ ಇಂತಹ ಅಸಮರ್ಥನೀಯ, ಕಾನೂನುಬಾಹಿರ ಬಂಧನಗಳ ವಿರುದ್ಧ ಪ್ರತಿಭಟಿಸಲಿಲ್ಲ. ಭಾರತದೊಳಗೆ ಎಫ್‌ಬಿಐ ನೇರವಾಗಿ ತನಿಖೆ ನಡೆಸುವುದನ್ನು ಅವರು ಆಕ್ಷೇಪಿಸುತ್ತಾರೆ ಎಂದು ಯೋಚಿಸಲೂ ಸಾಧ್ಯವಿಲ್ಲ.

ತನ್ನ ರಕ್ಷಣಾ ಮಂತ್ರಿಯನ್ನೇ ಆತ ಎರಡು ಬಾರಿ ಅಮೆರಿಕಾಕ್ಕೆ ಭೇಟಿ ನೀಡಿದಾಗ ಬಟ್ಟೆ ಬಿಚ್ಚಿಸಿ ಶೋಧನೆ ನಡೆಸಿದರೂ ಈ ವರ್ತನೆಗೆ ಪ್ರತಿಭಟಿಸುವ ಧೈರ್ಯ ತೋರಲಾರದ ಒಂದು ಸರ್ಕಾರದಿಂದ ಇಂತಹ ಸೇವಕ ಮನೋಭಾವವನ್ನಷ್ಟೇ ನಿರೀಕ್ಷಿಸಲು ಸಾಧ್ಯ. ಅಸ್ಸಾಂನ ನಿರ್ದಿಷ್ಟ ಪ್ರಕರಣದಲ್ಲಿ, ಯುಎಲ್‌ಎಫ್‌ಎ ಮತ್ತು ಎನ್‌ಡಿಎಫ್‌ಬಿ ಎರಡೂ ಉಗ್ರಗಾಮಿ ಸಂಘಟನೆಗಳು, ಪ್ರತ್ಯೇಕತಾವಾದಿ ಸ್ವರೂಪದ ರಾಜಕೀಯ ಸಂಘಟನೆಗಳು. ಅವರನ್ನು ಎದುರಿಸುವುದು ದೇಶದ ಮತ್ತು ಅದರ ರಾಜಕೀಯ ವ್ಯವಸ್ಥೆಯ ಆಂತರಿಕ ವಿಷಯ. ಈ ಧಾಳಿಗಳ ಹಿಂದಿರುವವರನ್ನು ಪತ್ತೆ ಹಚ್ಚುವುದು ಭಾರತೀಯ ಪ್ರಭುತ್ವದ ಕೆಲಸ. ಅವರನ್ನು ಹೇಗೆ ಎದುರಿಸಬೇಕು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ದೇಶದೊಳಗಿನ ರಾಜಕೀಯ ಶಕ್ತಿಗಳು ನಿರ್ಧರಿಸುತ್ತವೆ. ಅಡ್ವಾಣಿಯವರು ಈ ವಿಷಯದಲ್ಲಿ ಅಮೆರಿಕನ್ ಹಸ್ತಕ್ಷೇಪವನ್ನು ಸಮರ್ಥಿಸಿ ನಮ್ಮ ದೇಶದ ಜನಾಂಗೀಯ ಮತ್ತು ದೇಶೀಯತೆಯ ತಿಕ್ಕಾಟಗಳಲ್ಲಿ ಅಮೆರಿಕದ ಹಸ್ತಕ್ಷೇಪಕ್ಕೆ ಬಾಗಿಲು ತೆರೆದು ಕೊಡುವ ಅಪಾಯಕಾರಿ ದಾರಿ ಹಿಡಿದಿದ್ದಾರೆ. ಇಂತಹ ಒಂದು ತರ್ಕದಿಂದಾಗಿಯೇ ವಾಜಪೇಯಿ ಸರ್ಕಾರ ಜಮ್ಮು-ಕಾಶ್ಮೀರ ಸಮಸ್ಯೆಯನ್ನು ಎದುರಿಸುವಲ್ಲಿ ಅಮೆರಿಕನ್ ಸೌಕರ್ಯವನ್ನು ಹೇಳುವಂತಾಗಿತ್ತು.

**ಎಫ್‌ಬಿಐ ಶೋಚನೀಯ ದಾಖಲೆ**

ಎಫ್‌ಬಿಐ ಅಮೆರಿಕದ ಕ್ರಿಮಿನಲ್ ತನಿಖಾ ಸಂಸ್ಥೆಯಷ್ಟೇ ಅಲ್ಲ,ಅದು ಬೇಹುಗಾರಿಕೆ ಮತ್ತು ಪ್ರತಿಬೇಹುಗಾರಿಕೆಯ ಕೆಲಸಗಳನ್ನು ಮಾಡುತ್ತದೆ. **ಅಮೆರಿಕನ್ ಬೇಹುಗಾರಿಕೆ ಏಜೆನ್ಸಿಗಳೊಂದಿಗೆ ಒಡನಾಟದಿಂದಾಗಿ ಅವರಿಗೆ ಭಾರತದ ಬೇಹುಗಾರಿಕೆ ವ್ಯವಸ್ಥೆಯಲ್ಲಿ ತೂರಿಕೊಳ್ಳಲು ಅವಕಾಶ ಸಿಕ್ಕಿದೆ.** ಒಬ್ಬ ಹಿರಿಯ ರಾ (RAW) ಅಧಿಕಾರಿ ರವಿಂದರ್ ಸಿಂಗ್ ಇತ್ತೀಚೆಗೆ ಅಮೆರಿಕಾಕ್ಕೆ ಪಕ್ಷಾಂತರ ಮಾಡಿದ್ದು ಈ ಅಪಾಯಕ್ಕೊಂದು ಉದಾಹರಣೆ.

ಅಮೆರಿಕಾ ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳೊಡನೆ ವರ್ತಿಸಿದ ರೀತಿಯಲ್ಲೇ ಭಾರತದೊಡನೆ ವರ್ತಿಸಲಿ ಎಂಬ ಆಧಾರದಲ್ಲಿ ಅಡ್ವಾಣಿ ಮತ್ತು ಬಿಜೆಪಿ ಕೆಲಸ ಮಾಡಿದ್ದಾರೆ. ಆದ್ದರಿಂದ ಅಮೆರಿಕನ್ ರಾಯಭಾರಿ ಭಾರತದಲ್ಲೂ ಅದೇ ರೀತಿ ವರ್ತಿಸುವುದಕ್ಕೆ ಅಡ್ವಾಣಿಯವರಿಗೆ ಏನೂ ಆಕ್ಷೇಪ ಕಾಣುವುದಿಲ್ಲ. ಆದರೆ ಭಾರತದ ಜನತೆ ಅಮೆರಿಕನ್ ರಾಯಭಾರಿಯ ಇಂತಹ ನಿಲುವನ್ನು ಒಪ್ಪುವುದಿಲ್ಲ, ಈಶಾನ್ಯ ಭಾರತದಲ್ಲಿ ಎಫ್‌ಬಿಐ ಹೋಗುವುದಕ್ಕೆ ಅಡ್ವಾಣಿಯವರ ತರ್ಕವನ್ನು ಒಪ್ಪುವುದಿಲ್ಲ.

ಪಾಕಿಸ್ತಾನದಲ್ಲಿ ಎಫ್‌ಬಿಐ ಅಲ್‌ಖೈದಾವನ್ನು ಪತ್ತೆ ಹಚ್ಚುವ ಕೆಲಸವನ್ನು ಮಾತ್ರವಲ್ಲ, ಮುಷರ್ರಫ್ ಆಡಳಿತದ ಆಂತರಿಕ ಭದ್ರತಾ ಕೆಲಸಗಳಲ್ಲೂ ಬಹಳಷ್ಟು ತೊಡಗಿದೆ. ಈ ವಾರ ಸೌದಿ ರಾಜಕುಮಾರ ಅಬ್ದುಲ್ಲಾರ ಇಸ್ಲಾಮಾಬಾದ್ ಭೇಟಿಯ ಕಾಲದಲ್ಲಿ ಪಾಕಿಸ್ತಾನೀ ಭದ್ರತಾ ವ್ಯವಸ್ಥೆಯ ಮೂರು ಲೋಪಗಳನ್ನು ಎಫ್‌ಬಿಐ ಟೀಕಿಸಿತ್ತು ಎಂದು ಪಾಕಿಸ್ತಾನದ ಮಾಧ್ಯಮಗಳು ವರದಿ ಮಾಡಿವೆ. ಎಫ್‌ಬಿಐ ಅಲ್ಲಿನ ಭದ್ರತಾ ವ್ಯವಸ್ಥೆಗಳ ಪರೀಕ್ಷಣೆ ನಡೆಸಿತ್ತು. ಭಾರತದಲ್ಲೂ ಎಫ್‌ಬಿಐ ಇದೇ ಪಾತ್ರವನ್ನು ವಹಿಸಬೇಕು ಎಂದು ಅಡ್ವಾಣಿ ನಿರೀಕ್ಷಿಸುತ್ತಾರೆಯೇ?

**ಎಫ್‌ಬಿಐ ಗೆ ಅಮೆರಿಕಾದೊಳಗೂ ಪ್ರಗತಿಪರ ಮತ್ತು ಪ್ರಜಾಸತ್ತಾತ್ಮಕ ಚಟುವಟಿಕೆಗಳಿಗೆ ವಿರುದ್ಧವಾದ ಒಂದು ದೀರ್ಘ ಇತಿಹಾಸವೇ ಇದೆ.**

ನಾಗರಿಕ ಹಕ್ಕುಗಳ ಉಲ್ಲಂಘನೆಯ, ಕಾನೂನು ಬಾಹಿರ ಕ್ರಮಗಳನ್ನು ಅನುಸರಿಸಿರುವ ಶೋಚನೀಯ ದಾಖಲೆಯನ್ನು ಅದುಹೊಂದಿದೆ. 1976 ರಲ್ಲಿ ಅಮೆರಿಕನ್ ಜನಪ್ರತಿನಿಧಿ ಸಭೆಯ ಸೆಲೆಕ್ಟ್ ಕಮಿಟಿ ಈ ಬಗ್ಗೆ ಒಂದು ದೊಡ್ಡ ಗಾತ್ರದ ವರದಿಯನ್ನೇ ತಯಾರಿಸಿದೆ. ಚರ್ಚ್ ಸಮಿತಿ ಎಂದು ಜನಜನಿತವಾದ ಈ ಸಮಿತಿಯ ವರದಿ ಎಫ್‌ಬಿಐ ನ ವ್ಯಾಪಕ ಪ್ರಮಾಣದ ಕುಕೃತ್ಯಗಳು ಮತ್ತು ವ್ಯವಸ್ಥಿತ ಕಾನೂನುಬಾಹಿರ ಚಟುವಟಿಕೆಗಳನ್ನು ದಾಖಲಿಸಿದೆ. ಅಡ್ವಾಣಿಯವರ ಸೈದ್ಧಾಂತಿಕ ಮನೋಸ್ಥಿತಿಯವರಿಗೆ ಎಫ್‌ಬಿಐ ಒಂದು 'ಸಹಾತ್ಮ'ವೇ ಸರಿ. ಬಹುಶಃ ಅವರ ಕೈಲಾದರೆ ಭಾರತೀಯ ಬೇಹುಗಾರಿಕೆ ಮತ್ತು ಭದ್ರತಾ ಏಜೆನ್ಸಿಗಳನ್ನು ಅವರು ಸಿಐಎ ಮತ್ತು ಎಫ್‌ಬಿಐನ ಅಂಗ ಸಂಸ್ಥೆಗಳಾಗಿ ಮಾಡಿಬಿಡಬಹುದು. ಅಡ್ವಾಣಿಯವರ ಸರಕಾರದ ಅಡಿಯೇ ಭಾರತೀಯ ಭದ್ರತಾ ವ್ಯವಸ್ಥೆ ಮತ್ತು ವಿದೇಶಾಂಗ ನೀತಿಗೆ ಆಗಿರುವ ಕೇಡನ್ನು ಸರಿಪಡಿಸಲು ಮಾರ್ಕ್ಸ್‌ವಾದಿಗಳು ಭದ್ರತೆ ಮತ್ತು ವಿದೇಶಾಂಗ ನೀತಿಯ ವಿಷಯಗಳಲ್ಲಿ 'ತಲೆಹಾಕು'ವುದನ್ನು ಮುಂದುವರೆಸುತ್ತಾರೆ ಎಂಬುದನ್ನು ಅಡ್ವಾಣಿಯವರು ಚೆನ್ನಾಗಿ ತಿಳಿದಿರಬೇಕು. ○

**ಕಳಂಕಿತರು**

ಬಲ್ಲೆನ್ಯೆ ಸುಮ್ಮನೇ ಕೊಚ್ಚದಿರಿ ಜಂಭ
ನೆತ್ತರಿನ ಕಲೆ ನೋಡಿ ನಿಮ್ಮಗಳ ತುಂಬ
ಕಳಂಕಿತರ ಕುರಿತಾಗಿ ಹಳಿವುದಕು ಮುನ್ನ
ನೋಡಿಕೊಳ್ಳಿರಿ ನಿಮ್ಮ ಒಳ ಅಂಗಿಯನ್ನ
- ವಿಡಂಬಾರಿ

ಕೇಂದ್ರದ ಯುಪಿಎ ಸರ್ಕಾರಕ್ಕೆ ಬೆಂಬಲಿಸಿರುವ ಎಡಪಕ್ಷಗಳ ಮೇಲೆ ಬಿಜೆಪಿ-ಅಡ್ವಾಣಿಯಾದಿಯರು ಕೋಪೋದ್ರಿಕ್ತರಾಗಿ ಧಾಳಿ ನಡೆಸುತ್ತಿದ್ದಾರೆ. ಯಾಕಿಷ್ಟು ಅಸಹನೆ? ಎಡಪಕ್ಷಗಳ ಕಾಳಜಿ ಇರುವುದು ಜನತೆ ಹಾಗೂ ದೇಶದ ಒಳಿತಿನ ಬಗ್ಗೆ ಮಾತ್ರ. ಎಡಪಕ್ಷಗಳ ಈ ನೀತಿಬದ್ಧ ನಿಲುಮೆ ಬಿಜೆಪಿಯನ್ನು ಹತಾಶೆಗೆ ತಳ್ಳುತ್ತಿದೆ ಎಂಬುದು ಪ್ರಮುಖ ಅಂಶ

# ಜನತೆಯ ಅಜೆಂಡಾವೇ ಎಡಶಕ್ತಿಗಳ ಅಜೆಂಡಾ



ಮಹಾರಾಷ್ಟ್ರ ವಿಧಾನಸಭಾ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಎಡಶಕ್ತಿಗಳ ವಿರುದ್ಧ, ವಿಶೇಷವಾಗಿ ಸಿಪಿಐ(ಎಂ) ವಿರುದ್ಧ ಬಿಜೆಪಿ ಮುಖಂಡರ, ಅದರಲ್ಲೂ ಶ್ರೀಯುತ ಅಡ್ವಾಣಿಯವರ ವಿಷಮಯ ಅರ್ಭಟಗಳಿಂದ ಆಶ್ಚರ್ಯವೇನೂ ಆಗಿಲ್ಲ. ಕೋಮು ಶಕ್ತಿಗಳಲ್ಲಿ ಏಕೆ ಎಡಶಕ್ತಿಗಳ ವಿರುದ್ಧ ಇಷ್ಟೊಂದು ಕೋಪೋದ್ರಿಕ್ತ ಮತ್ತು ಭಾವನೆ ತುಂಬಿದೆ ಎಂಬುದಕ್ಕೆ ಎರಡು ಕಾರಣಗಳಿವೆ.

ಮೊದಲನೆಯದಾಗಿ, ಎಡ ಪಕ್ಷಗಳ ಬೆಂಬಲವಿಲ್ಲದೆ ಯುಪಿಎ ಸರಕಾರ ಅಸ್ತಿತ್ವಕ್ಕೆ ಬರುತ್ತಿರಲಿಲ್ಲ. ಸರಕಾರವನ್ನು ಅಸ್ಥಿರಗೊಳಿಸಲು ಎಡಪಕ್ಷಗಳು ಮತ್ತು ಯುಪಿಎ ನಡುವಿನ ಭಿನ್ನಾಭಿಪ್ರಾಯಗಳ ದುರುಪಯೋಗಪಡಿಸಿಕೊಳ್ಳುವ ಆರ್‌ಎಸ್‌ಎಸ್ ಬಿಜೆಪಿ ಮತ್ತು ಕಂಪನಿಯ ಪ್ರಯತ್ನಗಳೆಲ್ಲಾ ನಿಷ್ಪ್ರಯೋಜಕವಾಗಿಬಿಟ್ಟಿವೆ. ಕೋಮುವಾದಿ ಶಕ್ತಿಗಳು ಮರಳಿ ಬರಲು ಎಡಕ್ತಿಗಳು ಯಾವುದೇ ಅವಕಾಶ ಒದಗಿಸುವುದಿಲ್ಲ ಎಂದು ಸ್ಪಷ್ಟವಾಗಿ ಘೋಷಿಸಿವೆ.

ಎರಡನೆಯದಾಗಿ, ಎಡಶಕ್ತಿಗಳು ಯುಪಿಎ ಸರಕಾರಕ್ಕೆ ಊರುಗೋಲಾಗಿದೆ ಮಾತ್ರವೇ ಅಲ್ಲ, ಸರಕಾರದ ನೀತಿಗಳಿಗೆ ಸ್ವರೂಪ ಮತ್ತು ಸತ್ವವನ್ನು ಒದಗಿಸುತ್ತಿವೆ. ತೀವ್ರ ಚರ್ಚೆಗಳ ನಂತರ ವಿಕಾಸಗೊಳಿಸಿದ ಕನಿಷ್ಠ ಸಾಮಾನ್ಯ ಕಾರ್ಯಕ್ರಮವನ್ನು ಸ್ಥೂಲವಾಗಿ ಎಡಪಕ್ಷಗಳು ಅನುಮೋದಿಸಿದ್ದು, ಇವುಗಳಲ್ಲಿನ ಹಲವು ಪ್ರಸ್ತಾಪಗಳನ್ನು ಅನುಷ್ಠಾನಕ್ಕೆ ತಂದರೆ ಸರಕಾರ ಇನ್ನಷ್ಟು ಜನರ ನಿಕಟ ಬರುತ್ತದೆ, ಅವರ ಪ್ರೀತಿಗಳಿಸುತ್ತದೆ. ಇದು ಸರಕಾರದ ವಿಶ್ವಾಸಾರ್ಹತೆ ಮತ್ತು ಸ್ಥಿರತೆಯನ್ನು ಬಲಗೊಳಿಸಿ ಕೋಮುವಾದಿಗಳನ್ನು ಇನ್ನಷ್ಟು ಕುಪಿತಗೊಳಿಸುತ್ತದೆ.

ಅಷ್ಟೇ ಅಲ್ಲ, ಕಳೆದ ನಾಲ್ಕು ತಿಂಗಳಲ್ಲಿ ರಾಷ್ಟ್ರೀಯ ಸಂವಾದದ ಸ್ವರೂಪವೇ ತೀವ್ರವಾಗಿ ಬದಲಾಗಿದೆ. ಪ್ರಭುತ್ವ ಶಕ್ತಿಯ ಮೇಲಿನ ತಮ್ಮ ಹತೋಟಿಯ ಮೂಲಕ ಕೋಮುವಾದಿ ಶಕ್ತಿಗಳ ಕೈಮೇಲಾಗಿದ್ದಾಗ ದೇಶದಲ್ಲಿ ಉನ್ಮತ್ತ ಕೋಮುವಾದಿ ಪ್ರಶ್ನೆಗಳದ್ದೇ ಚರ್ಚೆ, ಜನಗಳ ದೈನಂದಿನ ಬದುಕಿನ ಸಮಸ್ಯೆಗಳಿಗೂ ಅವುಗಳಿಗೂ ಯಾವುದೇ ಸಂಬಂಧವಿರುತ್ತಿರಲಿಲ್ಲ. ಕ್ರಿಕೆಟ್ ಪಿಚ್‌ಗಳನ್ನು ಅಗೆದು ಹಾಕಿ ಪಾಕಿಸ್ತಾನ ತಂಡ ಭಾರತದಲ್ಲಿ ಆಡದಂತೆ ತಡೆಯಲಾಯಿತು; ಗುಲಾಂ ಅಲಿ ಘಜಲ್ ಹಾಡದಂತೆ ತಡೆಯಲಾಯಿತು; ಎಂ.ಎಫ್.ಹುಸೇನ್ ಚಿತ್ರಕಲೆ ಪ್ರದರ್ಶಿಸದಂತೆ, ದೀಪಾ ಮೆಹ್ತಾ ತನ್ನ ಚಲನಚಿತ್ರ ತೆಗೆಯದಂತೆ ತಡೆಯಲಾಯಿತು. ಇತ್ಯಾದಿ ಇತ್ಯಾದಿ ಇವೆಲ್ಲಾ ಕೋಮು ಭಾವೋದ್ರೇಕಗಳನ್ನು ಬಡಿದೆಬ್ಬಿಸುವ ಪ್ರಯತ್ನಗಳು. ಕ್ರೈಸ್ತ ಅಲ್ಪಸಂಖ್ಯಾತರ ವಿರುದ್ಧ ಅಮಾನುಷ ಅತ್ಯಾಚಾರಗಳು ನಡೆದಾಗ ತಪ್ಪಿತಸ್ತರನ್ನು ಪತ್ತೆಹಚ್ಚುವ ಬದಲು ಅಟಲ್ ಬಿಹಾರಿ ವಾಜಪೇಯಿ ಮತಾಂತರದ ಬಗ್ಗೆ ರಾಷ್ಟ್ರೀಯ ಚರ್ಚೆ ನಡೆಯಬೇಕೆಂದರು.

ದೇಶದಲ್ಲಿದ್ದ ವಾತಾವರಣ ಈಗ ಬದಲಾಗಿದೆ. ಮಾಧ್ಯಮಗಳು ಆರ್.ಎಸ್.ಎಸ್/ ಬಿಜೆಪಿ ಯಾವ ಕಾರಣಕ್ಕೆ ಎಡಶಕ್ತಿಗಳ ವಿರುದ್ಧ ಹರಿಹಾಯುತ್ತಿವೆಯೋ ಅವೇ ಕಾರಣಗಳಿಂದಾಗಿ ವ್ಯವಸ್ಥಿತ ಪ್ರಚಾರ ನಡೆಸುತ್ತಾ ಯುಪಿಎ ಸರ್ಕಾರ ಮತ್ತು ಎಡಶಕ್ತಿಗಳ ನಡುವೆ ಬಗೆಹರಿಯಲಾರದ ಭಿನ್ನಾಭಿಪ್ರಾಯಗಳಿವೆ ಎಂದು ಒತ್ತಿ-ಒತ್ತಿ ಹೇಳುತ್ತಿದ್ದರೂ, ಅವೇ ಮಾಧ್ಯಮಗಳಲ್ಲಿ ಈಗ ಉದ್ಯೋಗ ಖಾತರಿ, ಕೂಲಿಗಾಗು ಕಾಳು, ಮಧ್ಯಾಹ್ನದ ಊಟ, ಸಾರ್ವತ್ರಿಕ ಶಿಕ್ಷಣ, ಗ್ರಾಮೀಣ ಆರೋಗ್ಯ ಮತ್ತು ಮೂಲರಚನೆಯಂತಹ ಪ್ರಶ್ನೆಗಳೇ ರಂಗದ ಮೇಲಿವೆ. ಇವು ನಮ್ಮ ಜನತೆಯ ಮತ್ತು ದೇಶದ ಅಸ್ತಿತ್ವಕ್ಕೇ ಮುಖ್ಯವಾಗಿರುವ ಪ್ರಶ್ನೆಗಳು. ಆರ್ಥಿಕ ಸುಧಾರಣೆಗಳಿಗೆ ಸಂಬಂಧಪಟ್ಟ ಪ್ರಶ್ನೆಗಳು. ಉದಾಹರಣೆಗೆ, ಯಾವ ವಲಯದಲ್ಲಿ ಎಷ್ಟು ವಿದೇಶಿ ನೇರ ಹೂಡಿಕೆ ದೇಶಕ್ಕೆ ಪ್ರಯೋಜನಕಾರಿ ಎಂಬ ಪ್ರಶ್ನೆಗಳನ್ನು ದೇಶದಲ್ಲಿ ಚರ್ಚಿಲಾಗುತ್ತಿದೆ. ಇತ್ತ ಜನಗಳು ಕೋಮುವಾದಿ ಭಾವೋದ್ರೇಕಗಳನ್ನು ಪ್ರದರ್ಶಿಸುವಲ್ಲಿ ತೊಡಗಿರುವಂತೆ ಮಾಡಿ ಅತ್ತ ಸರ್ಕಾರ ಸಾರ್ವಜನಿಕ ಚರ್ಚೆ, ಪರೀಕ್ಷಣೆಗಳಿಲ್ಲದೆ ಜನ-ವಿರೋಧಿ ನಿರ್ಣಯಗಳನ್ನು ಕೈಗೊಳ್ಳುತ್ತಿದ್ದ ಪರಿಸ್ಥಿತಿ ಈಗಿಲ್ಲ. ದೇಶ ಮತ್ತು ಜನತೆಯ ಹಿತಾಸಕ್ತಿಯಿಂದ ಎಲ್ಲಾ ಪ್ರಮುಖ ನಿರ್ಣಯಗಳು ಸಂಸತ್ತಿನ ಒಳಗೂ, ಹೊರಗೂ ಚರ್ಚೆಗೆ ಒಳಗಾಗುತ್ತಿವೆ. ನಮ್ಮ ಪ್ರಜಾಪ್ರಭುತ್ವದ ಚೈತನ್ಯತೆಯನ್ನು ಮತ್ತೆ ತರಲು ಇದು ಏಕೈಕ ದಾರಿ.

ಹೀಗೆ ಆರ್‌ಎಸ್‌ಎಸ್/ ಬಿಜೆಪಿಯ ವ್ಯಾಕುಲತೆ ದಿನೇ ದಿನೇ ಹೆಚ್ಚುತ್ತಿದೆ. ಮೇಲೆ ಹೇಳಿರುವಂತಹ ಸತ್ವಯುತ ಪ್ರಶ್ನೆಗಳ ಮೇಲೆ ಅವರಿಗೆ ಹೇಳಲು, ಸೂಚಿಸಲು ಏನೂ ಇಲ್ಲ. ಸಾಮಾನ್ಯಕನಿಷ್ಟ ಕಾರ್ಯಕ್ರಮದ ಆಧಾರದ ಮೇಲೆ ಸರ್ಕಾರವನ್ನು ಹೊರಗಿನಿಂದ ಬೆಂಬಲಿಸುತ್ತಲೇ ಜನಗಳ ಮತ್ತು ದೇಶದ ಹಿತಾಸಕ್ತಿಗಳಿಗೆ ಅನುಗುಣವಾಗಿ ಇಲ್ಲ ಎಂದು ತಮಗೆ ಕಂಡುಬರುವ ಕೆಲವು ನೀತಿಗಳ ವಿರುದ್ಧ ತಮ್ಮ ಭಿನ್ನಾಭಿಪ್ರಾಯಗಳನ್ನು, ವಿರೋಧವನ್ನು ವ್ಯಕ್ತಪಡಿಸುವ ಹಕ್ಕನ್ನು ಕಾದಿರಿಸಿಕೊಂಡಿರುವ ಎಡಶಕ್ತಿಗಳ ನೀತಿಬದ್ಧ ನಿಲುಮೆ ಬಿಜೆಪಿಯ ಮತ್ತೆ ಅಧಿಕಾರಕ್ಕೆ ಮರಳುವ ಪ್ರಯತ್ನಗಳನ್ನು ವಿಫಲಗೊಳಿಸುತ್ತದೆ. ಇದರಿಂದ ಬಿಜೆಪಿ ಮುಖಂಡರ ಹತಾಶೆ ಮತ್ತಷ್ಟು ಹೆಚ್ಚಿದೆ.

ಜ್ಯೋತಿಷ್ಯವನ್ನು ವಿಜ್ಞಾನವೆಂದು ಸಾರಿ ತನ್ನ ಅಧಿಕಾರಾವಧಿಯಲ್ಲಿ ಪ್ರದರ್ಶಿಸಿದ ಬಿಜೆಪಿಯ ಕುರುಡು ನಂಬಿಕೆಯೇನಿದ್ದರೂ ಮನಮೋಹನ್ ಸಿಂಗ್ ಸರ್ಕಾರ ಬೀಳುತ್ತದೆ ಎಂದು ಜ್ಯೋತಿಷಿಗಳ ಭವಿಷ್ಯವಾಣಿಗಳಿಂದ ಬಿಜೆಪಿ ಶಿಬಿರದಲ್ಲಿ ಹೇಳತೀರದ ಸಂತೋಷ ಉಂಟಾಗಿತ್ತು. ಆದರೆ ಅದೀಗ ಸುಳ್ಳೆಂದು ಸಾಬೀತಾಗಿದೆ. ಈ ಸರ್ಕಾರ ಇಂತಹ ದಿನ ಬೀಳುತ್ತದೆ ಎಂದು ಜ್ಯೋತಿಷಿಗಳು ಭವಿಷ್ಯ ನುಡಿದ ಎರಡು ದಿನಗಳು ಆಗಲೇ ಕಳೆದಿವೆ. ವಾಜಪೇಯಿ, ಅಡ್ವಾಣಿ ಮತ್ತು ಕಂಪನಿ ಮೂರನೇ ಇಂತಹ ದಿನಕ್ಕಾಗಿ ಕಾದಿದೆ. ಹೀಗೆ ಮತ್ತೆ ಅಧಿಕಾರಕ್ಕೆ ಮರಳುವ ಪ್ರಯತ್ನಗಳಲ್ಲಿ ದೇಶವನ್ನು ಬಲಗೊಳಿಸುವ, ನಮ್ಮ ಜನಗಳ ಬದುಕನ್ನು ಉತ್ತಮಗೊಳಿಸುವ ಪರ್ಯಾಯ ನೀತಿಗಳೇನೂ ಇಲ್ಲ. ಅವರು ತಮ್ಮ ಭ್ರಮಾ ಜಗತ್ತಿನಲ್ಲಿ ವಿಹರಿಸಲು ಸ್ವಾಗತ. ಇದು ಎಷ್ಟೆಂದರೂ ಅವರ ಪ್ರಜಾಪ್ರಭುತ್ವ ಹಕ್ಕು!

ಈ ನಡುವೆ ಎಡಶಕ್ತಿಗಳು ಮಾತ್ರ ದೇಶದ ಹಿತಾಸಕ್ತಿಗಳು, ಜನಗಳ ಅಗತ್ಯಗಳನ್ನು ಪ್ರತಿಪಾದಿಸುತ್ತಲೇ ಇರುತ್ತವೆ; ಸಮಾನ ಕನಿಷ್ಟ ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಿರುವ ಹಲವು ಜನಪರ ಕ್ರಮಗಳನ್ನು ಜಾರಿಗೆ ತರುವಲ್ಲಿ ಯುಪಿಎ ಸರ್ಕಾರ ಮಧ್ಯ ಪ್ರವೇಶಿಸಬೇಕು ಎಂದು ಸತತ ಒತ್ತಾಯಗಳನ್ನು ತರುತ್ತದೆ. ಸಂವಿಧಾನದಲ್ಲಿ ಹೇಳಿರುವ ಭಾರತೀಯ ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಬುಡಮೇಲು ಮಾಡುವ ಎಲ್ಲಾ ಪ್ರಭಾವಗಳಿಂದ, ಸಿಬ್ಬಂದಿಯಿಂದ ಆಡಳಿತವನ್ನು ಮುಕ್ತಗೊಳಿಸಬೇಕು ಎಂದು ಒತ್ತಾಯಿಸುತ್ತಿರುತ್ತದೆ. ಭಾರತದ ಮತ್ತು ಅದರ ಜನಗಳ ಹಿತದೃಷ್ಟಿಯಿಂದ ಇಂತಹ ಒಂದು ಅಜೆಂಡಾವನ್ನು ಮುಂದಿಡಲು ಎಡಶಕ್ತಿಗಳು ಸತತವಾಗಿ ಶ್ರಮಿಸುತ್ತವೆ.

**ಈ ಮೂರು ಕುಳಗಳು**

ಜ್ಯೋತಿಷಿಗೆ ಶೆಟ್ಟರಿಗೆ ಮಂತ್ರಿಗಳಿಗೆಲ್ಲ ಸುರಳೀತ
ಜೀವನವು ತೊಡಕೆಂಬುದಿಲ್ಲ
ಈ ಮೂರು ಕುಳಗಳೇ ಮುಗ್ಧಜನಗಳಿಗೆ
ಠಕ್ಕಿಸುತ ಬೀಗಿದ್ದು ಗೊತ್ತೇನು ನಿಮಗೆ?

- ವಿಡಂಬಾರಿ

# ಮನೆ ಕಟ್ಟಿದವರಿಗೇ ಮನೆಯಿಲ್ಲ, ಭದ್ರತೆಯಿಲ್ಲ

## ಉಡುಪಿಯಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರ ಧರಣಿ ಸತ್ಯಾಗ್ರಹ

ಉಡುಪಿಯಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರ ಬೇಡಿಕೆಗಳನ್ನು ರಾಜ್ಯ ಸರ್ಕಾರ ಜ್ಯಾರಿಗೊಳಿಸುವಂತೆ ಒತ್ತಾಯಿಸಿ ಅಕ್ಟೋಬರ್ 11ರಂದು ಉಡುಪಿ ತಾಲ್ಲೂಕು ಕಛೇರಿ ಮುಂದೆ ಸಾಮೂಹಿಕ ಧರಣಿ ನಡೆಸಿ ರಾಜ್ಯ ಸರಕಾರಕ್ಕೆ ತಹಶೀಲ್ದಾರರ ಮೂಲಕ ಮನವಿ ಸಲ್ಲಿಸಲಾಯಿತು.

ಸಿ.ಐ.ಟಿ.ಯು. ಮುಖಂಡ ಎಚ್.ವಿಠ್ಠಲ ಪೂಜಾರಿಯವರು ಈ ಧರಣಿ ಸತ್ಯಾಗ್ರಹವನ್ನು ಉದ್ಘಾಟಿಸುತ್ತಾ ಕರ್ನಾಟಕ ರಾಜ್ಯದಲ್ಲಿ ಕಟ್ಟಡ ಮತ್ತು ನಿರ್ಮಾಣ ಕೈಗಾರಿಕೆಯಲ್ಲಿ ದುಡಿಯುತ್ತಿರುವ ಲಕ್ಷಾಂತರ ಕಾರ್ಮಿಕರಿಗೆ ಯಾವುದೇ ರೀತಿಯ ಭದ್ರತೆಯ ಕಾನೂನು ಬದ್ಧ ಸವಲತ್ತುಗಳು ಈ ತನಕ ಜ್ಯಾರಿಯಲ್ಲಿಲ್ಲ. ಕಟ್ಟಡ ಕಾರ್ಮಿಕರು ನಿರಂತರ ಉದ್ಯೋಗವಿಲ್ಲದೆ ದಯನೀಯ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. 1996 ರಲ್ಲಿ ಕೇಂದ್ರದಲ್ಲಿದ್ದ ದೇವೇಗೌಡರ ಸರಕಾರ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಉದ್ಯೋಗ ಮತ್ತು ಸೇವಾನಿಯಂಗಳ ನಿಯಂತ್ರಣ ಕಾನೂನು ಜ್ಯಾರಿಗೊಳಿಸಿದ್ದು ಈ ಕಾನೂನನ್ನು ಎಲ್ಲಾ ರಾಜ್ಯಗಳು ಜ್ಯಾರಿಗೊಳಿಸಬೇಕಾಗಿದ್ದು, ಈ ಪೈಕಿ ಈಗಾಗಲೇ ಕೇರಳ, ತಮಿಳುನಾಡು, ಪಾಂಡಿಚೇರಿ, ಪಶ್ಚಿಮ ಬಂಗಾಲ, ರಾಜಸ್ತಾನ ಮುಂತಾದ ಕೆಲವು ರಾಜ್ಯ ಸರಕಾರಗಳು ಜ್ಯಾರಿಗೊಳಿಸಿರುತ್ತವೆ. ಕರ್ನಾಟಕ ರಾಜ್ಯ ಸರಕಾರವು ಕೇಂದ್ರದ ಕಾನೂನನ್ನು ರಾಜ್ಯದಲ್ಲಿಯೂ ಜ್ಯಾರಿಗೊಳಿಸಬೇಕು, ಇಲ್ಲವಾದಲ್ಲಿ ಕಟ್ಟಡ ಕಾರ್ಮಿಕರ ಇನ್ನಷ್ಟು ತೀವ್ರ ರೀತಿಯ ಹೋರಾಟ ನಡೆಯಲಿದೆ ಎಂದರು.

ಸಿ.ಪಿ.ಐ(ಎಂ) ಪಕ್ಷದ ಉಡುಪಿ ಜಿಲ್ಲಾ ಮುಖಂಡ ಶ್ರೀ ಡೇವಿಡ್ ಎ.ಕರ್ಕಡರವರು ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಗುರುತಿನ ಚೀಟಿ ನೀಡಬೇಕು, ಕೆಲಸದ ಸಮಯದಲ್ಲಿ ಉಂಟಾಗುವ ಅಪಘಾತಗಳಿಗೆ ಪರಿಹಾರ ನೀಡಬೇಕು, ನಿವೃತ್ತಿಯ ನಂತರ ಪಿಂಚಣಿ ಸೌಲಭ್ಯ ಕೊಡಬೇಕು. ಕಟ್ಟಡ ನಿರ್ಮಿಸುವ ಈ ಕಾರ್ಮಿಕರಿಗೇ ಸ್ವಂತ ಮನೆಯೇ ಇಲ್ಲ. ಇಂತಹ ಕಾರ್ಮಿಕರಿಗೆ ಸ್ವಂತ ಮನೆ ನಿರ್ಮಾಣಕ್ಕೆ ಸಹಾಯ ನೀಡಬೇಕು ಎಂದರು.

ನಂತರ ಮೆರವಣಿಗೆಯಲ್ಲಿ ಕಾರ್ಮಿಕರು ತಹಶೀಲ್ದಾರರ ಕಛೇರಿಗೆ ಹೋಗಿ ಮನವಿ ಸಲ್ಲಿಸಿದರು. ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ಕಾರ್ಯದರ್ಶಿ ಕೃಷ್ಣ ಎಸ್.ಅಮೀನ್ ವಂದನಾರ್ಪಣೆ ಮಾಡಿದರು. ಈ ಕಾರ್ಯಕ್ರಮದಲ್ಲಿ ಸಿ.ಐ.ಟಿ.ಯು. ಮುಖಂಡ ಎನ್.ಸಾಧು ಅಮೀನ್ ರಮೇಶ್ ಮೆಂಡನ್, ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ಉಪಾಧ್ಯಕ್ಷರಾದ ರಾಮ ಮೇಸ್ತ್ರಿ, ರಮೇಶ ಮೇಸ್ತ್ರಿ ಗಣಪತಿ ನಾಯಕ್ ಬ್ರಹ್ಮಾವರ, ಜತೆ ಕಾರ್ಯದರ್ಶಿಗಳಾದ ರಾಮ ಕರ್ಕಡ, ದಯಾನಂದ ಕೋಟ್ಯಾನ್, ಶೇಖರ ಬಂಗೇರ, ಗಣೇಶ್ ನಾಯ್ಕ್, ಈಶ್ವರ್ ಸಾಲಿಗ್ರಾಮ ಮೊದಲಾದವರು ಭಾಗವಹಿಸಿದ್ದರು.

**ರಾಯಚೂರು ನಗರದಲ್ಲಿ** ಕಟ್ಟಡ ನಿರ್ಮಾಣ ಕಾರ್ಮಿಕರ ಧರಣಿ ಸತ್ಯಾಗ್ರಹ 11.10.04 ರಂದು ಜಿಲ್ಲಾಧಿಕಾರಿಗಳ ಕಛೇರಿಯೆದುರು ನಡೆಯಿತು.

ಧರಣಿಕಾರರನ್ನುದ್ದೇಶಿಸಿ ರಾಜ್ಯ ಸಂಚಾಲಕ ವೈ.ಈರಣ್ಣ ಮಾತನಾಡಿ 'ಈ ಕಾರ್ಮಿಕರು ದೇಶದಲ್ಲಿ ಒಂದು ಕೋಟಿ 50 ಲಕ್ಷ ಇದ್ದಾರೆ. ರಾಜ್ಯದಲ್ಲಿ 30 ಲಕ್ಷದಷ್ಟಿದ್ದಾರೆ. ರಾಯಚೂರು ಜಿಲ್ಲೆಯಲ್ಲಿಯೇ 20 ಸಾವಿರಕ್ಕಿಂತಲೂ ಅಧಿಕವಿದ್ದಾರೆ. ದೇಶದ ಅಭಿವೃದ್ಧಿಗಾಗಿ ಸೇತುವೆ, ಆಣೆಕಟ್ಟು, ರಸ್ತೆ, ಕಟ್ಟಡ ನಿರ್ಮಿಸುವ, ಮಹಲು ಕಟ್ಟುವ ಈ ಕಾರ್ಮಿಕರು ನಿರ್ಲಕ್ಷ್ಯಕ್ಕೆ ಒಳಗಾಗಿ ಮನೆಯೂ ಇಲ್ಲದ ಸ್ಥಿತಿ ಇದೆ. ಅವರ ಸಮಸ್ಯೆ ಹಲವಾರು ಎಂದು ತಿಳಿಸಿ, ಬೇಡಿಕೆಗಳತ್ತ ಸರ್ಕಾರ

# “ಜಾಗತೀಕರಣದಿಂದ ದುಡಿವ ಜನರ ಅಭದ್ರತೆ ಹೆಚ್ಚಾಗಿದೆ”

ಇದು ನಾವು ಹೇಳಿದ ಮಾತಲ್ಲ. ಇದು ವಿಶ್ವ ಕಾರ್ಮಿಕ ಸಂಸ್ಥೆ ಒಂದು ವರ್ಷಗಳ ಕಾಲ 90 ದೇಶಗಳಲ್ಲಿನ ದುಡಿವ ಜನರ ಪರಿಸ್ಥಿತಿಯನ್ನು ಅಧ್ಯಯನ ಮಾಡಿದ ಮೇಲೆ ಹೇಳಿದ ಮಾತು. ‘ಉತ್ತಮ ಜಗತ್ತಿಗಾಗಿ ಅಧಿಕಾರ ಭದ್ರತೆ’ ಎಂಬ ಅಧ್ಯಯನ ವರದಿಯನ್ನು ಅದು ಬಿಡುಗಡೆ ಮಾಡಿದೆ.

ಕಾರ್ಮಿಕರ ಜೀವನದಲ್ಲಿ ಆರ್ಥಿಕ ಭದ್ರತೆ ಅತ್ಯಂತ ಮುಖ್ಯ ಸಮಸ್ಯೆ ಈ ದೃಷ್ಟಿಕೋನದಿಂದ ಯಾರೂ ಅಧ್ಯಯನವನ್ನು ಮಾಡಿಲ್ಲ. ಈ ಅಧ್ಯಯನ ಆರ್ಥಿಕ ಭದ್ರತೆಯ ಸೂಚ್ಯಾಂಕವನ್ನೂ ನಿರ್ಮಿಸಿದೆಯಂತೆ. 1999ರಿಂದ ಐದು ವರ್ಷಗಳ ಕಾಲ ನಡೆದ ಅಧ್ಯಯನ ಈಗ ಪೂರ್ಣಗೊಂಡಿದೆ.




ಜಿ.ಎಸ್.ಮಣಿ

ಈ ವರದಿಯು ಪ್ರಕಾರ ಜಾಗತೀಕರಣ ಆರ್ಥಿಕ ಅಸ್ಥಿರತೆಯನ್ನು ಹುಟ್ಟುಹಾಕುತ್ತಿರುವುದರಿಂದ ಈ ಆರ್ಥಿಕ ಅಭದ್ರತೆ ಉಂಟಾಗಿದೆ. ಶ್ರೀಮಂತ ದೇಶಗಳಲ್ಲೂ ಕಾರ್ಮಿಕರ ನಿವೃತ್ತಿ ವೇತನ, ನಿರುದ್ಯೋಗ ಭತ್ಯೆ ಇತ್ಯಾದಿಗಳಿಗೆ ಹೊಡೆತ ಬಿದ್ದಿದೆ. ಸರ್ಕಾರೀ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳಲ್ಲಿ ಯಾವುದೇ ಹೆಚ್ಚಳ ಆಗಿಲ್ಲ. ಈಗ ಆಗಲೇ ಇರುವ ಆರ್ಥಿಕ ಭದ್ರತಾ ವ್ಯವಸ್ಥೆಯುನ್ನು ಮಾರುಕಟ್ಟೆ ಆರ್ಥಿಕ ಹಾಳುಗೆಡವಿದೆಯಂತೆ.

ಜಾಗತೀಕರಣ ಜನವಿರೋಧಿ ಎನ್ನುವುದಕ್ಕೆ ಇದಕ್ಕಿಂತ ಹೆಚ್ಚಿನ ತಾಮ್ರಪತ್ರ ಬೇಕೆ?

## ನೆರವಿನ ಜೊತೆ ಬರುವ ಷರತ್ತುಗಳಿಂದ ಬಡ ದೇಶಗಳಿಗೆ ಹೊಡೆತ

ಖಾಸಗೀಕರಣ ಮತ್ತು ವ್ಯಾಪಾರದ ಉದಾರೀಕರಣ ನೀತಿಗಳು ಅಭಿವೃದ್ಧಿಶೀಲ ದೇಶಗಳಿಗೆ ಹೊಡೆತ ನೀಡುತ್ತಿದೆ ಎಂದು ಬ್ರಿಟೀಷ್ ಸರ್ಕಾರದ ಒಂದು ವರದಿ ಹೇಳಿದೆ. ಬ್ರಿಟೀಷ್ ಸರ್ಕಾರ ಇಂತಹ ನಿಲುವನ್ನು ತಳೆದೆ ತನ್ನ ನೀತಿಗಳನ್ನು ಪುನರ್ರೂಪಿಸಿಕೊಳ್ಳುವ ಪ್ರಶ್ನೆ ಇರುವಂತೆ ಕಾಣುವುದಿಲ್ಲ. ಆದರೆ ಸರ್ಕಾರದಲ್ಲಿನ ಒಂದು ಗುಂಪು ಇಂತಹ ಮಾತನ್ನು ಹೇಳಿದೆ ಎನ್ನುವುದೇ ಮಹತ್ವದ್ದು. ಬ್ರಿಟನ್ನಿನ ಅಂತರ್ರಾಷ್ಟ್ರೀಯ ಅಭಿವೃದ್ಧಿ ಕಾರ್ಯದರ್ಶಿ ಹಿಲರಿ ಬೆನ್ ಈ ನಿಲುವಿನ ಹಿಂದಿನ ಶಕ್ತಿ ಎಂದು ಹೇಳಲಾಗುತ್ತಿದೆ.

ಈ ವರದಿ ‘ಅಭಿವೃದ್ಧಿಶೀಲ ದೇಶಗಳು ತಮ್ಮದೇ ನೀತಿ ರೂಪಿಸಿಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿರಬೇಕೆಂದು ನಾವು ನಂಬಿದ್ದೇವೆ. ಅವರ ಯೋಜನೆಗಳ ಭಾಗವಾಗಿ ಅವು ನೆರವಿನ ಹಣವನ್ನು ಬಳಸಿಕೊಳ್ಳುವಂತಾದರೆ ಅದರಿಂದ ಅಭಿವೃದ್ಧಿಯ ಗುರಿಯನ್ನು ಅವರು ಮುಟ್ಟಲು ಸಾಧ್ಯ’ ಎಂದು ಈ ಲೇಖನ ಹೇಳಿದೆ.

ಕೆಲವು ಸಂದರ್ಭಗಳಲ್ಲಿ ಉದಾರೀಕರಣದಿಂದಾಗಿ ಆದೇಶಗಳ ಬಡವರು ನೋವು ಅನುಭವಿಸಿದ್ದಾರೆ ಎಂದು ಅದು ಹೇಳಿದೆ.

ಐಎಂಎಫ್ ಮತ್ತು ವಿಶ್ವಬ್ಯಾಂಕುಗಳು ತಮ್ಮದೇ ಆರ್ಥಿಕ ನೀತಿಯನ್ನು ಹೊಂದಿದೆ. ಅವು ಸಾಮ್ರಾಜ್ಯಶಾಹಿ ಆರ್ಥಿಕ ನೀತಿಗಳು. ಹಾಗಿರುವಾಗ ಈ ನೆರವಿನ ಜೊತೆಗೆ ಬರುವ ಷರತ್ತುಗಳು ಬಹುತೇಕವಾಗಿ ಸಾಮ್ರಾಜ್ಯಶಾಹಿಗಳ ಷರತ್ತುಗಳು ಅಥವಾ ಸಾಮ್ರಾಜ್ಯಶಾಹಿಗೆ ಅನುಕೂಲ ಮಾಡುವ ಸರತ್ತುಗಳು ಹೀಗಿರುವಾಗ ಈ ಗುಂಪು ಸಾಮ್ರಾಜ್ಯಶಾಹಿ ಆರ್ಥಿಕ ನೀತಿಗಳು ಜಗತ್ತಿನ ಅಭಿವೃದ್ಧಿಶೀಲ ಮತ್ತು ಬಡರಾಷ್ಟ್ರಗಳಿಗೆ ಮಾರಕ ಎಂದು ಹೇಳದೇ ಹೋದರೆ ಅವರನ್ನು ಪ್ರಗತಿಪರರು ಎಂದು ಒಪ್ಪಿಕೊಳ್ಳುವುದು ಕಷ್ಟ.

ಹೇಗಿದ್ದರೂ ಈ ಷರತ್ತುಗಳೂ ಈ ಅಭಿವೃದ್ಧಿಶೀಲ ದೇಶಗಳಿಗೆ ಮಾರಕ ಎಂದು ಹೇಳಿರುವ ಮಾತು ಸತ್ಯಕ್ಕೆ ಹತ್ತಿರ ಎನ್ನುವುದನ್ನಾದರೂ ಗಮನಿಸ ಬೇಕಾಗುತ್ತದೆ.

## ಅವರವರ ಮೂಗಿನ ನೇರಕ್ಕೇ ಅವರವರ ನೋಟ

ಉಳಿದವರ ಮಾತು ಹಾಗಿರಲಿ ವಿಶ್ವಬ್ಯಾಂಕಿ ನದಂತೂ ಹಾಗೆಂಬುದು ಸ್ಪಷ್ಟ. ವಿಶ್ವಬ್ಯಾಂಕ್ ತನ್ನ ಒಂದು ಅಧ್ಯಯನದಿಂದ ಕಂಡು ಕೊಂಡಿರುವ ಹಾಗೆ ಭಾರತ ಇನ್ನೂ ಜಗತ್ತಿನಲ್ಲೆ ವ್ಯವಹಾರ ಮಾಡಲು ಅತ್ಯಂತ ಕಷ್ಟಕರವಾದ ದೇಶವಂತೆ. ಈ ಅಧ್ಯಯನ ಇದಕ್ಕೆ ಹಲವು ಪುರಾವೆಗಳನ್ನೂ ನೀಡಿದೆ ಭಾರತದಲ್ಲಿ ಒಂದು ವ್ಯಾಪಾರ ನೊಂದಣಿ ಮಾಡಲು 89 ದಿನಗಳು ಬೇಕಾಗುತ್ತವಂತೆ. ಜಾಗತಿಕ ಮಾಪಕದ ಪ್ರಕಾರ ಇದು ಬರೀ ಎರಡು ದಿನಗಳಲ್ಲಿ ಆಗಬೇಕಂತೆ.

ಹಾಗೆ ದಿವಾಳಿಖೋರತನದ ಪ್ರಮಾಣಪತ್ರ ಪಡೆಯಲು ಭಾರತದಲ್ಲಿ ಹತ್ತು ವರ್ಷಗಳಷ್ಟು ದೀರ್ಘಕಾಲ ಬೇಕಾಗುತ್ತದಾದರೆ ಐರ್ಲೆಂಡ್‌ನಲ್ಲಿ ಇದು ಬರೀ ನಾಲ್ಕೇ ತಿಂಗಳಿನಲ್ಲಿ ದೊರೆಯುತ್ತದಂತೆ.

145 ದೇಶಗಳ ಅಧ್ಯಯನ ಮಾಡಿ ಬರೆದಿರುವ ಈ ವರದಿಯ ಪ್ರಕಾರ ಭಾರತದಲ್ಲಿ ವ್ಯಾಪಾರ ಪ್ರಾರಂಭಿಸಲು ದೇಶದ ತಲಾ ಆದಾಯದ ಶೇ.50 ರಷ್ಟು ಬೇಕಾಗುತ್ತದಂತೆ. ಇದು ಶ್ರೀಲಂಕಾದಲ್ಲಿ ಬರೀ ಶೇ.11 ರಷ್ಟಂತೆ ಪಾಕಿಸ್ತಾನದಲ್ಲಿ ಶೇ.36ರಷ್ಟು. ಡೆನ್ಮಾರ್ಕ್ ದೇಶದಲ್ಲಿ ಇದು ಕನಿಷ್ಟವಂತೆ.

ಉದ್ಯೋಗ ನಿಯಮಾವಳಿಗಳಲ್ಲೂ ಭಾರತ ಒಂದು ಬಹು ಮೊಂಡು ದೇಶವಂತೆ.

ಇಂದು ಆಸ್ತಿಯನ್ನು ನೋಂದಣಿ ಮಾಡಲು ಭಾರತದಲ್ಲಿ 67 ದಿನಗಳು ಬೇಕಾದರೆ ನಾರ್ವೆಯಲ್ಲಿ ಇದು ಒಂದೇ ದಿನದಲ್ಲಿ ಆಗುತ್ತದಂತೆ.

ಇರಲಿ ಈ ಪಟ್ಟಿ ಇನ್ನೂ ಉದ್ದವಿದೆ.

ಒಂದು ಮಾತಂತೂ ಸ್ಪಷ್ಟ. ಭಾರತದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಉದಾರೀಕರಣವನ್ನು ತಂದಿದ್ದರೂ ಹಲವು ಜನಪರವಾದ ನಿಯಮಗಳು ಶಿಸ್ತು ಇನ್ನೂ ಉಳಿದುಕೊಂಡಿದೆ. ಪ್ರಜ್ಞಾವಂತ ಜನತೆಯು ಹೋರಾಟಗಳಿಂದಾಗಿ ಇದು ಸಾಧ್ಯವಾಗಿದೆ ಎಂಬುದು ಸ್ಪಷ್ಟ. ಜಗತ್ತಿನ ಬಂಡವಾಳಿಗರಿಗೆ ಅವರ ಬಂಡವಾಳಕ್ಕೆ ಲಾಭ ಮಾಡಿಕೊಳ್ಳಲು ಯಾವುದೇ ಅಡೆ ತಡೆಗಳಿರಬಾರದು. ಅಲ್ಪ ಸ್ವಲ್ಪ ಅಡೆತಡೆಗಳಿದ್ದರೂ ಅವರು ಅಸಂತುಷ್ಟರು. ಜನರ ಜೀವಕ್ಕೆ ಜೀವನಕ್ಕೆ ಅವರು ನೀಡುವ ಬೆಲೆ ಅಷ್ಟೇ ಅಲ್ಲವೇ?

---

→

ಗಮನಹರಿಸಬೇಕೆಂದು ಆಗ್ರಹಿಸಿದರು. ಸಂಘದ ಮುಖಂಡ ಜಂಬಣ್ಣ ಬೇಲೂರು ಮಾತನಾಡಿ ‘ಕೆಲಸ ಮಾಡುವಾಗ ಭದ್ರತೆಯೇ ಇಲ್ಲ, ಅದು ನೀಡುವಂತಾಗಬೇಕೆಂದರು. ವಕೀಲರಾದ ಎಸ್.ಮಾರೆಪ್ಪ, ಎನ್.ತಾಯಣ್ಣ ಹೊಸೂರು, ಸೈಯದ್ ಶಾಲಂ, ಡಿವೈಎಫ್‌ಐನ ಶರಣಬಸವ, ಕೆ.ಜಿ.ವೀರೇಶ್ ಮತ್ತು ಚಿ.ಎಂ.ಚನ್ನಬಸಯ್ಯ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು. ಧರಣಿಯಲ್ಲಿ ನೂರಾರು ಕಾರ್ಮಿಕರು ಭಾಗವಹಿಸಿದ್ದರು. ಮೆರವಣಿಗೆಯೂ ನಡೆಯಿತು.



ಉಡುಪಿಯಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರ ಧರಣಿ ಸತ್ಯಾಗ್ರಹ

# ಕರ್ನಾಟಕದ ಬಿಜೆಪಿ ಬಳಗದ ಬಂಕ್ ಭ್ರಷ್ಟತೆ ಬಯಲು

ನಿವೃತ್ತ ನ್ಯಾಯಮೂರ್ತಿ ಎಸ್.ಸಿ.ಅಗರವಾಲ್ ಮತ್ತು ನಿವೃತ್ತ ನ್ಯಾಯಮೂರ್ತಿ ಪಿ.ಕೆ.ಪಹಾಡಿ ಅವರನ್ನೊಳಗೊಂಡ ತನಿಖಾ ಸಮಿತಿ ಅಕ್ರಮ ಎಂದು ನಿರ್ಧರಿಸಿ ರದ್ದುಗೊಳಿಸಿದ 297 ಪೆಟ್ರೋಲ್ ಬಂಕ್, ಎಲ್‌ಪಿಜಿ ಏಜೆನ್ಸಿಗಳಲ್ಲಿ ಕರ್ನಾಟಕದ ಪಾಲು 22. ಅದರಲ್ಲಿ 21 ಬಿಜೆಪಿಯ ವಿವಿಧ ಮುಖಂಡರ ಸಂಬಂಧಿಗಳಿಗೆ ಸೇರಿದ್ದು, ಹುಡ್ಕೋ, ವಿಮಾನ ಖರೀದಿ ಮುಂತಾದ ಭಾರೀ ಹಗರಣದಲ್ಲಿ ಭಾಗಿಯಾದ ಅನಂತಕುಮಾರ್‌ರ ಅನುಯಾಯಿಗಳೇ ಅಧಿಕವಿಲ್ಲಿ. 1 ಕಾಂಗ್ರೆಸ್ಸಿನವರದ್ದು. ಇವರೆಂತಹ ಖದೀಮರು?

1. ಆರ್‌ಎನ್.ಸೋಹನ್‌ಕುಮಾರ್ : ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕ ಬಿ.ಎಸ್.ಯಡಿಯೂರಪ್ಪ ಅವರ ಅಳಿಯ. ಬೆಂಗಳೂರಿನ ತಾವರೆಕೆರೆ ಕ್ರಾಸ್ ಬಳಿ ಪೆಟ್ರೋಲ್ ಪಂಪ್.
2. ಎಸ್.ಮಂಜುಳಾ : ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನಪರಿಷತ್ ಸದಸ್ಯ ಅರವಿಂದ ಲಿಂಬಾವಳಿ ಅವರ ಪತ್ನಿ. ಬೆಂಗಳೂರಿನಲ್ಲಿ ಪೆಟ್ರೋಲ್ ಪಂಪ್
3. ಮೋಹನ್ ಎಸ್.ಶೆಟ್ಟರ್: ಬಿಜೆಪಿ ಮುಖಂಡ, ಕಳೆದ ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕ ಜಗದೀಶ್ ಎಸ್.ಶೆಟ್ಟರ್ ಅವರ ಸೋದರ. ಹುಬ್ಬಳ್ಳಿಯಲ್ಲಿ ಪೆಟ್ರೋಲ್ ಪಂಪ್.
4. ಅನಂತ ಹೆಗಡೆ ನಾಗಪತಿ : ಬಿಜೆಪಿ ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ತಮ್ಮ. ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಲ್ಲಿ ಪೆಟ್ರೋಲ್ ಪಂಪ್.
5. ಕೆ.ವಿ.ಸ್ವರೂಪ : ರಾಜ್ಯ ಬಿಜೆಪಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೋರ್ಚಾದ ಅಧ್ಯಕ್ಷ ಡಿ.ಎಸ್.ವೀರಯ್ಯನವರ ಮಗ. ಕೋಲಾರದ ಚಿಂತಾಮಣಿಯಲ್ಲಿ ಎಲ್‌ಪಿಜಿ(ಗ್ಯಾಸ್) ಡೀಲರ್ ಶಿಪ್
6. ವೇದಾವತಿ: ಬಿಜೆಪಿಯ ಸುಳ್ಯ ಕ್ಷೇತ್ರದ ಶಾಸಕ ಅಂಗಾರ ಅವರ ಪತ್ನಿ. ದಕ್ಷಿಣ ಕನ್ನಡದ ಸುಳ್ಯದಲ್ಲಿ ಪೆಟ್ರೋಲ್ ಪಂಪ್
7. ಬಿ.ಜಿ.ಶಾಂತಮ್ಮ: ಬಿಜೆಪಿ ಆನೇಕಲ್ ಶಾಸಕ ಎ.ನಾರಾಯಣಸ್ವಾಮಿ ಅವರ ಪತ್ನಿ. ಬೆಂಗಳೂರಿನ ಆನೇಕಲ್‌ನಲ್ಲಿ ಎಲ್‌ಪಿಜಿ ಡೀಲರ್‌ಶಿಪ್
8. ಡಿ.ಸಾವಿತ್ರಿ : ಬಿಜೆಪಿ ಶಾಸಕ ರಾಜೇಂದ್ರ ವರ್ಮಾ ಅವರ ಪತ್ನಿ. ಬೀದರ್‌ನ ಬಸವಕಲ್ಯಾಣದಲ್ಲಿ ಪೆಟ್ರೋಲ್ ಪಂಪ್
9. ಉಮಾದೇವಿ: ಬಿಜೆಪಿ ಮಾಜಿ ಶಾಸಕ ಸುಭಾಷ್ ಕಲ್ಲೂರ ಅವರ ಪತ್ನಿ. ಬೀದರ್ ಜಿಲ್ಲೆಯ ಹುಮನಾಬಾದ್‌ನಲ್ಲಿ ಎಲ್‌ಪಿಜಿ ಡೀಲರ್ ಶಿಪ್
10. ರಾಜೇಶ್ವರಿ: ರಾಜ್ಯ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಘುನಾಥ ರಾವ್ ಮಲಕಾಪುರೆ ಅವರ ಪತ್ನಿ. ಗುಲ್ಬರ್ಗಾದ ಚಿಂಚೋಳಿಯಲ್ಲಿ ಎಲ್‌ಪಿಜಿ ಡೀಲರ್ ಶಿಪ್
11. ಭಾರತಿ ಶೆಟ್ಟಿ : ರಾಜ್ಯ ಬಿಜೆಪಿ ಮಹಿಳಾ ಮೋಚಾ ಅಧ್ಯಕ್ಷೆ. ಶಿವಮೊಗ್ಗದ ಸೊರಬದಲ್ಲಿ ಪೆಟ್ರೋಲ್ ಪಂಪ್.
12. ಎ.ಶಶಿಕಲಾ : ಬಿಜೆಪಿಯ ಮಾಜಿ ಶಾಸಕ ಎ.ರಾಮದಾಸ್ ಅವರ ಸೋದರಿ. ಮೈಸೂರಿನಲ್ಲಿ ಎಲ್.ಪಿ.ಜಿ. ಡೀಲರ್‌ಶಿಪ್
13. ಪಾರ್ವತಮ್ಮ: ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್.ಶಂಕರಪ್ಪ ಅವರ ಸಂಬಂಧಿ. ರಾಯಚೂರಿನ ಸಿರಿವಾರದಲ್ಲಿ ಪೆಟ್ರೋಲ್ ಪಂಪ್
14. ಡಿ.ಎನ್.ಜೀವರಾಜು: ಬಿಜೆಪಿ ಯುವಮೋರ್ಚಾ ಪದಾಧಿಕಾರಿ. ಚಿಕ್ಕಮಗಳೂರಿನ ಜಯಪುರದಲ್ಲಿ ಪೆಟ್ರೋಲ್ ಪಂಪ್
15. ಸಿ.ಮುನಿಕೃಷ್ಣನ್: ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬಿಜೆಪಿ ಮಾಜಿ ಕಾರ್ಪೋರೇಟರ್, ಬೆಂಗಳೂರು ನಗರಜಿಲ್ಲೆಯಲ್ಲಿ ಪೆಟ್ರೋಲ್ ಪಂಪ್
16. ಬಿ.ವಿ.ರಾಜಶೇಖರ ರೆಡ್ಡಿ : ಬೆಂಗಳೂರು ನಗರ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ, ಬೆಂಗಳೂರಿನ ದೊಮ್ಮಸಂದ್ರದಲ್ಲಿ ಎಲ್‌ಪಿಜಿ ಡೀಲರ್ ಶಿಪ್
17. ಎಸ್.ಎ.ಮಹೇಶ್ : ಮೈಸೂರು ಬಿಜೆಪಿ ಘಟಕದ ಪ್ರಧಾನ ಕಾರ್ಯದರ್ಶಿ, ಮೈಸೂರಿನಲ್ಲಿ ಎಲ್‌ಪಿಜಿ ಡೀಲರ್ ಶಿಪ್
18. ಎಸ್.ಪ್ರಕಾಶ್: ಬಿಜೆಪಿ ಬೆಂಗಳೂರು ನಗರ ವಕ್ತಾರ ಮತ್ತು ನಗರ ಯುವ ಮೋರ್ಚಾದ ಅಧ್ಯಕ್ಷ. ಬೆಂಗಳೂರು
19. ಶೋಭಾ ಲಕ್ಷ್ಮಿಪತಿ: ಬಿಜೆಪಿಯ ಮಾಜಿ ಶಾಸಕ ಗಂಟಿಗಾನಹಳ್ಳಿ ಕೃಷ್ಣಪ್ಪ ಅವರ ಮಗಳು. ಬೆಂಗಳೂರು ಗ್ರಾಮಾಂತರ ಜಿಲ್ಲೆ ಯಲ್ಲಿ ಮಂಜೂರಾದ ಪೆಟ್ರೋಲ್ ಪಂಪ್
20. ಸುಚಿತ್ರ ಎನ್.ಪಟವರ್ಧನ್: ಮಾಜಿ ಕೇಂದ್ರ ಪೆಟ್ರೋಲಿಯಂ ಸಚಿವ ರಾಮಾನಾಯಕ್ ಅವರ ಪತ್ನಿಯ ಸೋದರಿಯ ಮಗಳು. ಬೆಳಗಾವಿಯ ಕಾಗವಾಡದಲ್ಲಿ ಎಲ್‌ಪಿಜಿ ಡೀಲರ್ ಶಿಪ್
21. ಶ್ರೀಕಾಂತ ಎಸ್.ಕಾಟವೆ : ಬಿಜೆಪಿ ಮಾಜಿ ಶಾಸಕ ಅಶೋಕ ಕಾಟವೆ ಅವರ ಸೋದರ. ಹುಬ್ಬಳ್ಳಿಯಲ್ಲಿ ಎಲ್‌ಪಿಜಿ ಡೀಲರ್ ಶಿಪ್
22. ಇಷ್ಟೆಲ್ಲಾ ದೇಶಭಕ್ತರೇ ಹಂಚಿಕೊಂಡರೆ ಹೇಗೆ? ಕೋಟಿ ತಿಂದು ಮೇಕೆ ಮೂತಿಗೂ ಸ್ವಲ್ಪ ಒರೆಸಿದಂತೆ ಕಾಂಗ್ರೆಸ್‌ನವರಿಗೂ ಅಲ್ಪ ಸೇವೆ ಸಂದಿದೆ. 22ಯವರಾಗಿ ಸುನಿಲ್ ವೆಂಕಟೇಶ ಹೆಗ್ಡೆ: ಕಾಂಗ್ರೆಸ್‌ನ ವಿಧಾನಪರಿಷತ್ ಮಾಜಿ ಸದಸ್ಯ ವೆಂಕಟೇಶ ಹೆಗ್ಡೆ ಅವರ ಮಗ. ದಾಂಡೇಲಿಯಲ್ಲಿ ಎಲ್‌ಪಿಜಿ ಡೀಲರ್ ಶಿಪ್

# ಅಫಘಾನಿಸ್ತಾನದ ಚುನಾವಣೆಗಳು

ಇನ್ನೂ ಅತ್ಯಂತ ಕಠಿಣ ಸನ್ನಿವೇಶವಿರುವ ಅಫಘಾನಿಸ್ತಾನದಲ್ಲಿ ಚುನಾವಣೆಗಳನ್ನು ನಡೆಸಲು ಅಮೆರಿಕಾ ಯಾಕೆ ತರಾತುರಿಯಲ್ಲಿದೆ ? ಒಂದು ವಿಶ್ಲೇಷಣೆ

ಶರತ್‌ಚಂದ್ರ

ಅಫಘಾನಿಸ್ತಾನದಲ್ಲಿ ಅಧ್ಯಕ್ಷೀಯ ಚುನಾವಣೆಗಳು ನಡೆದಿವೆ. ಅಮೆರಿಕದಿಂದ ನಿಯೋಜಿಸಲ್ಪಟ್ಟ ಮಧ್ಯಂತರ ಅಧ್ಯಕ್ಷ ಹಮೀದ್ ಕರ್ಝಾಯಿ ಪ್ರಮುಖ ಅಭ್ಯರ್ಥಿ ಚುನಾವಣೆಗಳಲ್ಲಿ ಒಬ್ಬ ಮಹಿಳೆ ಸೇರಿದಂತೆ ಒಟ್ಟು18 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಅಫಘಾನಿಸ್ತಾನದ ಚುನಾವಣೆಗಳು ಮೊದಲಿನಿಂದಲೂ ವಿವಾದಾತ್ಮಕವಾಗಿದ್ದವು. ಅಫಘಾನಿಸ್ತಾನ ಆಂತರಿಕ ಯುದ್ಧದಿಂದ ಇನ್ನೂ ಪೂರ್ತಿ ಹೊರಬಂದಿಲ್ಲ. ಅಮೆರಿಕದ ಕೈಗೊಂಬೆ ಸರ್ಕಾರ ಇನ್ನೂ ಕಾಬೂಲ್‌ಗಿಂತ ಹೊರಗೆ ತನ್ನ ಅಧಿಕಾರ ಪೂರ್ತಿ ಸ್ಥಾಪಿಸಿಲ್ಲ. ಮಧ್ಯಂತರ ಅಧ್ಯಕ್ಷ ಕರ್ಝಾಯಿ ಅಮೆರಿಕನ್ ಅಂಗರಕ್ಷಕರ ಹಿಂಡು ಇಲ್ಲದೆ ಹೊರಗೆ ಹೋಗಲು ಆಗುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಸ್ವಾಭಾವಿಕವಾಗಿಯೇ ಚುನಾವಣೆಗಳಿಗೆ ಹಲವು ಅಡೆತಡೆಗಳು ಬಂದವು. ಚುನಾವಣೆಗಳನ್ನು ವಿಶ್ವಸಂಸ್ಥೆ-ಅಫಘಾನಿಸ್ತಾನ ಜಂಟಿ ಸಂಘಟನೆಯೊಂದು ನಡೆಸುತ್ತಿದೆ. ಚುನಾವಣೆ ಮೊದಲು ಹಿಂಸಾಚಾರ ಕಂಡುಬಂತು. ಮಾಜಿ ಆಳರಸರಾದ ತಾಲಿಬಾನ್ ಮೂಲಭೂತವಾದಿಗಳು ಚುನಾವಣೆ ಬಹಿಷ್ಕಾರಕ್ಕೆ ಕರೆ ಕೊಟ್ಟಿದ್ದರು. ಇದನ್ನು ಸಾಧ್ಯವಾಗಿಸಲು ಹಲವು ಹಿಂಸಾತ್ಮಕ ಧಾಳಿಗಳನ್ನು ನಡೆಸಿದ್ದರು. ಹಿಂದೆ ಅಧಿಕಾರದಲ್ಲಿದ್ದ ಗುಂಪುಗಳೂ ಚುನಾವಣೆಗೆ ತಡೆ ಹಾಕಲು ಪ್ರಯತ್ನಿಸಿದವು. ಇವೆಲ್ಲದರ ನಡುವೆಯೂ ಚುನಾವಣೆಗಳು ನಡೆದವು ಎನ್ನುವುದೇ ವಿಶೇಷ. ಶತಮಾನಗಳ ಕಾಲ ಹಿಂಸಾಚಾರದ ನೆರಳಲ್ಲಿ ಬಾಳಿರುವ ಅಫಘಾನಿ ಜನತೆಯ ಶಾಂತಿಯ ಬಯಕೆ ಚುನಾವಣೆಯನ್ನು ಸಾಧ್ಯವಾಗಿಸಿತು ಎನ್ನಬಹುದು. ಎಷ್ಟೇ ಅಸಮರ್ಪಕವಾಗಿದ್ದರೂ, ಶಾಂತಿಯುತ ಪ್ರಜಾಸತ್ತಾತ್ಮಕ ಆಯ್ಕೆಯ ಅವಕಾಶವನ್ನು ಜನ ಬಾಚಿ ಬಳಸಲು ಪ್ರಯತ್ನಿಸಿದ್ದಾರೆ ಅಂತ ಕಾಣುತ್ತದೆ.

**'ದಿಢೀರ್ ಪ್ರಜಾಸತ್ತೆ ಮಿಕ್ಸ್'**

ಚುನಾವಣೆ ಪೂರ್ವದಲ್ಲಿ ಚುನಾವಣೆ-ವಿರೋಧಿಗಳಿಂದ ಮಾತ್ರವಲ್ಲ ಭೀತಿಯ ವಾತಾವಣ ಸೃಷ್ಟಿಯಾಗಿದ್ದು, ಮಧ್ಯಂತರ ಸರ್ಕಾರ ಅಂದರೆ ಅಧ್ಯಕ್ಷ ಕರ್ಝಾಯಿ ಕಡೆಯಿಂದಲೂ ಹಲವು ಬೆದರಿಕೆಗಳು ಬಂದಿವೆ. ಅಧ್ಯಕ್ಷ ಕರ್ಝಾಯಿ ಇತರ ಅಭ್ಯರ್ಥಿಗಳಿಗೆ ಹೋಲಿಸಿದರೆ ಭಾರಿ ಅನುಕೂಲಗಳನ್ನು ಅನುಭವಿಸುತ್ತಿದ್ದರೆ, ಇತರ ಅಭ್ಯರ್ಥಿಗಳು ತೀವ್ರ ಪ್ರತಿಕೂಲಗಳನ್ನು ಅನುಭವಿಸುತ್ತಿದ್ದಾರೆ. ಆಂತರಿಕ ಯುದ್ಧ, ಹಿಂಸಾಚಾರದಿಂದ ಬೆಂದಿರುವ ದೇಶದಲ್ಲಿ ದುರ್ಗಮ ಬೆಟ್ಟ-ಗುಡ್ಡಗಳ ದೇಶದ ಎಲ್ಲಾ ಭಾಗಗಳಿಗೆ ಹೋಗುವುದೇ ಇತರ ಅಭ್ಯರ್ಥಿಗಳಿಗೆ ದೊಡ್ಡ ಸವಾಲು. ಅಧ್ಯಕ್ಷ ಕರ್ಝಾಯಿ ಅಮೆರಿಕನ್ ಹೆಲಿಕಾಪ್ಟರುಗಳು ಮತ್ತು ಭಾರಿ ರಕ್ಷಣಾ ತಂಡ ಬಳಸಿ ಸಾಕಷ್ಟು ಭಾಗಗಳನ್ನು ತಲುಪಲು ಸಾಧ್ಯವಾಗಿದೆ. ಹಲವು ಸ್ವತಂತ್ರ ಅಂತರ್ರಾಷ್ಟ್ರೀಯ ಮಾನವ ಹಕ್ಕು ಮತ್ತು ಚುನಾವಣಾ ವೀಕ್ಷಕರು ಚುನಾವಣೆಗಳು ಪೂರ್ತಿ ನ್ಯಾಯಯುತವಾಗಿರುವುದು ಸಾಧ್ಯವೇ ಇಲ್ಲ ಎಂದಿದ್ದಾರೆ.

ಚುನಾವಣೆಗಳನ್ನು ಅವಸರದಲ್ಲಿ ಅಮೆರಿಕದ ಅಧ್ಯಕ್ಷೀಯ ಚುನಾವಣೆಗಳಿಗಿಂತ ಮೊದಲು ನಡೆಯುವಂತೆ ನಡೆಸಲಾಗುತ್ತಿದೆ. ಇದು ಅಮೆರಿಕ-ವಿಶ್ವಸಂಸ್ಥೆಯ 'ದಿಢೀರ್ ಪ್ರಜಾಸತ್ತೆ ಮಿಕ್ಸ್'. ಆದರೆ ಇದರಲ್ಲಿ ಪ್ರಜಾಸತ್ತೆಯ ನಿಜವಾದ ತಿರುಳು ಇಲ್ಲ. ಇರಾಕ್‌ನಲ್ಲಿ ಅಧ್ಯಕ್ಷ ಬುಶ್‌ಗೆ ಆಗಿರುವ ಮುಖಭಂಗವನ್ನು ಸ್ವಲ್ಪವಾದರೂ ನಿವಾರಿಸಲು ಈ ಪ್ರಯತ್ನ ಎಂಬ ತೀವ್ರ ಟೀಕೆ ಅಫಘಾನ ಹಾಗೂ ಅಂತರ್ರಾಷ್ಟ್ರೀಯ ವೀಕ್ಷಕರಿಂದ ಕೇಳಿಬಂದಿದೆ.

**ಅಕ್ರಮಗಳ ಆಪಾದನೆ**



ಭವಿಷ್ಯದ ನಿರೀಕ್ಷೆಯಲ್ಲಿ.... ಮತದಾನಕ್ಕೆ ಸಾಲಾಗಿ ನಿಂತ ಮಹಿಳೆಯರು

ಸಾಲದೆಂಬಂತೆ ಅವಸರದಲ್ಲಿ ಸಂಘಟಿಸಿದ್ದರಿಂದ, ಸಾಕಷ್ಟು ತಯಾರಿ ಸಾಕಷ್ಟು ಸಂಖ್ಯೆಯಲ್ಲಿ ಚುನಾವಣಾ ಸಿಬ್ಬಂದಿ ತರಬೇತಿ, ಅಫಘಾನ್‌ನ ದುರ್ಗಮ ಪ್ರದೇಶಗಳ ನಿರ್ದಿಷ್ಟ ಜ್ಞಾನದ ಆಧಾರದ ಮೇಲೆ ಯೋಜನೆ - ಇವೆಲ್ಲಾ ಇರಲಿಲ್ಲ. ಇದು ತೀವ್ರ ಟೀಕೆಗೆ ಒಳಗಾಯಿತು. ಪ್ರಮುಖವಾಗಿ ಒಂದಕ್ಕಿಂತ ಹೆಚ್ಚು ಬಾರಿ ಮತದಾನ ಮಾಡದಂತೆ ತಡೆಯುವ ಮಸಿ ಕೆಲಸ ಮಾಡಲೇ ಇಲ್ಲ - ಎಂಬುದು ಭಾರಿ ಕೋಲಾಹಲಕ್ಕೆ ಕಾರಣವಾಯಿತು. ಇತರ ಹಲವು ಚುನಾವಣಾ ಅಕ್ರಮಗಳೂ ನಡೆದವು. ಮೂವರು ಬಿಟ್ಟರೆ ಇತರ ಎಲ್ಲಾ ಅಭ್ಯರ್ಥಿಗಳು ಚುನಾವಣೆ ಕೊನೆ ಗಳಿಗೆಯಲ್ಲಿ ಚುನಾವಣೆ ಬಹಿಷ್ಕರಿಸಿದ ವರದಿಗಳು ಬಂದವು. ಚುನಾವಣಾ ಅಕ್ರಮಗಳ ಬಗ್ಗೆ ತನಿಖೆ ನಡೆಸಲು ವಿಶ್ವಸಂಸ್ಥೆ-ಅಫಘಾನಿಸ್ತಾನ ಸರ್ಕಾರ ಸೇರಿ ಒಂದು ಕಮಿಷನ್ ನೇಮಿಸಬೇಕಾಯಿತು. ಕಮಿಷನ್‌ನ ಘಟನೆ ಸಹ ವಿವಾದಾತ್ಮಕವಾಯಿತು. ತನಿಖಾ ಕಮಿಷನ್‌ನಲ್ಲಿ ಯಾವುದೇ ಸ್ವತಂತ್ರ ಅಫಘಾನ್ ಪ್ರತಿನಿಧಿಗಳಿಲ್ಲ ಎಂಬ ಟೀಕೆಯನ್ನು ಅಭ್ಯರ್ಥಿಗಳು, ಹಲವು ಸ್ವತಂತ್ರ ವೀಕ್ಷಕರೂ ಹಲವು ಅಂತರ್ರಾಷ್ಟ್ರೀಯ ಸಂಘಟನೆಗಳು ಮಾಡಿದವು. ಕಮಿಷನ್ ತನಿಖೆ ನಡೆಸಿ ಚುನಾವಣೆಯನ್ನು ಪುನಃ ನಡೆಸುವ ಅಥವಾ ರದ್ದು ಮಾಡುವ ಅಗತ್ಯ ಬೀಳುವ ಪರಿಸ್ಥಿತಿ ಇಲ್ಲ. ನಿರ್ದಿಷ್ಟ ದೂರುಗಳ ಪ್ರಕಾರ ಕೆಲವು ಮತಪೆಟ್ಟಿಗಳನ್ನು ವಿವರವಾದ ತನಿಖೆ ನಡೆಸಿದರೆ ಸಾಕು ಎಂಬ ತೀರ್ಪಿತ್ತಿದೆ. ಮತ ಎಣಿಕೆ ಆರಂಭ ಮಾಡಬಹುದು ಎಂದಿದೆ. ಕಮಿಷನ್‌ನ ತೀರ್ಪು ಎಲ್ಲರಿಗೂ ಸಮಾಧಾನ ತಂದಿಲ್ಲವಾದರೂ ಪ್ರತಿಭಟನೆ ತಣ್ಣಗಾಗಿದೆ. ಮತ ಎಣಿಕೆ ಆರಂಭವಾಗಿದ್ದರೂ ಹಲವು ದಿನಗಳು ತೆಗೆದುಕೊಳ್ಳಬಹುದು ಎನ್ನಲಾಗಿದೆ. ದೇಶದ ದುರ್ಗಮ ಪ್ರದೇಶಗಳಲ್ಲಿ ಒಟ್ಟು 23 ಸಾವಿರ ಮತಗಟ್ಟೆಗಳಿಂದ ಮತಪೆಟ್ಟಿಗೆಗಳು ಇನ್ನೂ ಮತಎಣಿಕೆ ಕೇಂದ್ರಗಳಿಗೆ ತಲುಪಿಲ್ಲ. ಸಾಕಷ್ಟು ಮತದಾನವಾಗಿದ್ದರೂ, ಶೇಕಡಾ ಮತದಾನ ಎಷ್ಟು ಎಂಬುದು ಇನ್ನೂ ನಿಖರವಾಗಿ ತಿಳಿದಿಲ್ಲ.

**ಅಮೆರಿಕದ ಚುನಾವಣೆಯೊಂದಿಗೆ ತಳುಕು**

ಅಧ್ಯಕ್ಷ ಕರ್ಝಾಯಿಯವರ ವಿರೋಧಿ ಅಭ್ಯರ್ಥಿಗಳು ಎದುರಿಸುತ್ತಿರುವ ಭಾರಿ ಪ್ರತಿಕೂಲಗಳನ್ನು ಗಮನಿಸಿದರೆ, ಕರ್ಝಾಯಿಯವರು ಗೆಲ್ಲುವುದು ಹೆಚ್ಚುಕಡಿಮೆ ಖಚಿತ. ಆದರೆ ಅವರಿಗೆ ಮೊದಲ ಸುತ್ತಿನಲ್ಲಿ ಶೇಕಡಾ 50 ಮತ ಬಂದಿದ್ದರೆ, ಚುನಾವಣೆ ನಿಯಮಗಳ ಪ್ರಕಾರ ಎರಡನೇ ಸುತ್ತಿನ ಚುನಾವಣೆ ನಡೆಯಬೇಕಾಗುತ್ತದೆ. ಅಧ್ಯಕ್ಷ ಬುಶ್ ಮತ್ತು ಅಮೆರಿಕನ್ ಸರ್ಕಾರ ನವೆಂಬರ್ 2 ರ (ಅಮೆರಿಕದ ಅಧ್ಯಕ್ಷೀಯ ಚುನಾವಣಾ ತಾರೀಖು) ಮೊದಲು ಕರ್ಝಾಯಿಯವರನ್ನು ಅಫಘಾನಿಸ್ತಾನದ ಚುನಾಯಿತ ಅಧ್ಯಕ್ಷ ಎಂದು ಘೋಷಿಸುವ ತರಾತುರಿಯಲ್ಲಿದ್ದಾರೆ. ಅದು ಸಾಧ್ಯವಾದರೆ ಬುಶ್ ಇದು ತಮ್ಮ ಅಂತರ್ರಾಷ್ಟ್ರೀಯ ಸಾಧನೆ ಎಂದು ಕೊಚ್ಚಿಕೊಳ್ಳಬಹುದು. ಬುಶ್‌ಗೆ ಇದು ಅನುಕೂಲಕರವಾಗುತ್ತದೆ ಎಂದು ಹೇಳಲಾಗಿದೆ.

ಅಫಘಾನಿಸ್ತಾನದ ಜನತೆ ಅಧ್ಯಕ್ಷೀಯ ಚುನಾವಣೆ ಒದಗಿಸಿರುವ ಅವಕಾಶವನ್ನು ಹೇಗೆ ಬಳಸುತ್ತಾರೆ ಎಂಬುದು ಕಾದು ನೋಡಬೇಕಾಗಿದೆ. ಅಫಘಾನಿಸ್ತಾನದಲ್ಲಿ ಶಾಂತಿ ಪರವಾಗಿರುವ ಜಗತ್ತಿನ ಜನತೆ, ಅಫಘಾನ್ ಜನತೆಯ ಶಾಂತಿಯುತ ಪ್ರಯತ್ನಗಳಿಗೆ ಬೆಂಬಲ ಕೊಡುತ್ತಲೇ ಅಮೆರಿಕದ ಪಡೆಗಳು ಕಾಲ್ತೆಗೆಯದೆ ರಾಜಕೀಯ 'ರಿಮೋಟ್ ಕಂಟ್ರೋಲ್' ನಿಲ್ಲದೆ ಅಫಘಾನಿಸ್ತಾನದಲ್ಲಿ ಶಾಂತಿ ನೆಲೆಸಲು ಸಾಧ್ಯವಿಲ್ಲ. ಅಫಘಾನಿಸ್ತಾನವನ್ನು ಕಿತ್ತು ತಿನ್ನುತ್ತಿರುವ ಹಿಂಸಾತ್ಮಕ ಮೂಲಭೂತವಾದಿ ಗುಂಪು(ಕುಖ್ಯಾತ ತಾಲಿಬಾನ್, ಅಲ್-ಖೈದ ಸೇರಿದಂತೆ)ಗಳನ್ನು ಹುಟ್ಟು ಹಾಕಿದ್ದು ಅವರಿಗೆ ಮಿಲಿಟರಿ - ಆರ್ಥಿಕ ಸಂಪನ್ಮೂಲ ಒದಗಿಸಿದ್ದು ಅಮೆರಿಕವೇ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಮಾಜಿ ಸೋವಿಯತ್ ಒಕ್ಕೂಟದ ವಿರುದ್ಧ ಶೀತಲ ಸಮರದಲ್ಲಿ ಇವರನ್ನೆಲ್ಲಾ ಬಳಸಲಾಯಿತು. ಆಮೇಲೆ ಅಫಘಾನ್ 1979 ರ '...... ಕ್ರಾಂತಿ'ಯಲ್ಲಿ ಅಧಿಕಾರಕ್ಕೆ ಬಂದ ಜಾತ್ಯತೀತ ಪ್ರಗತಿಪರ ಸರ್ಕಾರ ಉರುಳಿಸಲು ಅಮೆರಿಕ ಮಧ್ಯಪ್ರವೇಶ ಮಾಡಿತು. ಇಂದಿನ ಅಫಘಾನಿಸ್ತಾನದ ದುಸ್ಥಿತಿಗೆ ಅಮೆರಿಕವೇ ನೇರ ಕಾರಣ. ಆದ್ದರಿಂದ ಅಮೆರಿಕ ಅಫಘಾನಿಸ್ತಾನದಿಂದ ಕಾಲ್ತೆಗೆಯಬೇಕು. ಅಫಘಾನಿಸ್ತಾನದಲ್ಲಿ ಶಾಂತಿಯುತ ಬದಲಾವಣೆ ಆಗುವಂತೆ ಭಾರತ, ಅಲಿಪ್ತ ಚಳುವಳಿಯಂತಹ ಸ್ವತಂತ್ರ ಶಕ್ತಿಗಳು ಪ್ರಯತ್ನಿಸಬೇಕು.

## ಉರುಗ್ವೆಯಲ್ಲಿ ಎಡ ಅಭ್ಯರ್ಥಿ ಅಧ್ಯಕ್ಷರಾಗುವತ್ತ

ಉರುಗ್ವೆಯಲ್ಲಿ ಅಕ್ಟೋಬರ್ ಅಧ್ಯಕ್ಷೀಯ ಚುನಾವಣೆಗಳು ನಡೆಯಲಿದ್ದು, ಅಲ್ಲಿ ಎಡ-ಪ್ರಗತಿಪರ - ಪ್ರಜಾಸತ್ತೆ ಕೂಟದ ಅಭ್ಯರ್ಥಿ ಚುನಾಯಿತರಾಗುವ ಎಲ್ಲಾ ಸಾಧ್ಯತೆಗಳು ಕಂಡುಬರುತ್ತಿದೆ. ಇದು ದಕ್ಷಿಣ ಅಮೆರಿಕದಲ್ಲಿ ಬೀಸುತ್ತಿರುವ ಪ್ರಗತಿಪರ ರಾಜಕೀಯ ಗಾಳಿಯ ಫಲ. ವೆನೆಜುವೆಲಾ, ಬ್ರೆಜಿಲ್, ಅರ್ಜೆಂಟಿನಾದ ಹಾದಿಯಲ್ಲಿ ಉರುಗ್ವೆಯಲ್ಲಿ ರಾಜಕೀಯ ಬದಲಾವಣೆ ತರಬಹುದು ಎನ್ನಲಾಗಿದೆ.

ಇತ್ತೀಚೆಗೆ ಉರುಗ್ವೆಯಲ್ಲಿ ನಡೆಸಲಾಗಿರುವ ನಾಲ್ಕು ಚುನಾವಣೆಗಳ ಸಮೀಕ್ಷೆಗಳಲ್ಲಿ ಎಡ ಅಭ್ಯರ್ಥಿ ತಬರೆ ವಾಝ್ಕೆಝ್ ಮೊದಲ ಸುತ್ತಿನಲ್ಲೇ ಶೇಕಡಾ 50 ಕ್ಕಿಂತ ಹೆಚ್ಚು ಮತಗಳಿಸಿ ಆಯ್ಕೆಯಾಗುವರು ಎಂದು ತಿಳಿಸಿವೆ. ತಬರೆ ಶೇಕಡಾ 54 ರಷ್ಟು ಮತ ಗಳಿಸುವರು ಎಂದು ಸಮೀಕ್ಷೆಗಳು ಹೇಳಿವೆ. ಇದ ನಿಜವಾದರೆ ಉರುಗ್ವೆ ಭಾರಿ ಚಾರಿತ್ರಿಕ ರಾಜಕೀಯ ಬದಲಾವಣೆ ಹೊಸ್ತಿಲಲ್ಲಿ ನಿಂತಿದೆ ಎನ್ನಬಹುದು. ಈವರೆಗೆ ಉರುಗ್ವೆಯ ಹಲವು ದಶಕಗಳ ಪ್ರಜಾಸತ್ತೆಯ ಚರಿತ್ರೆಯಲ್ಲಿ ಆಳುವ ವರ್ಗಗಳ ಎರಡು ಪಕ್ಷಗಳ ಹೊರಗೆ ಯಾರೂ ಅಧ್ಯಕ್ಷರಾಗಿ ಆಯ್ಕೆಯಾದದ್ದಿಲ್ಲ. ಉರುಗ್ವೆಯ ರಾಜಧಾನಿ ಮೇಯರ್ ಆಗಿದ್ದ ಜನಪ್ರಿಯ ತಬರೆ ಕಳೆದ ಬಾರಿ (1999) ರ ಚುನಾವಣೆಯಲ್ಲಿ ಮೊದಲ ಸುತ್ತಿನಲ್ಲಿ ಶೇಕಡಾ 50 ಕ್ಕಿಂತ ಸ್ವಲ್ಪ ಕಡಿಮೆ ಮತ ಪಡೆದಿದ್ದರು. ಆದರೆ ಎರಡನೇ ಸುತ್ತಿನಲ್ಲಿ ಆಳುವ ವರ್ಗದ ಎರಡೂ ಪಕ್ಷಗಳು ಸೇರಿ ಅವರನ್ನು ಸೋಲಿಸಲು ಸಾಧ್ಯವಾಯಿತು. ಆದರೆ ಇಂದಿನ ಉರುಗ್ವೆಯ ದುರ್ಬರ ಆರ್ಥಿಕ-ಸಾಮಾಜಿಕ ಪರಿಸ್ಥಿತಿಯಲ್ಲಿ - ಟ್ರೇಡ್ ಯೂನಿಯನ್‌ಗಳು, ಕಮ್ಯುನಿಸ್ಟರು, ಮಾಜಿ ಗೆರಿಲ್ಲಾ ಹೋರಾಟಗಾರರು, ಪ್ರಜಾಸತ್ತಾತ್ಮಕ ಶಕ್ತಿಗಳು ಹೂಡಿರುವ ರಾಜಕೀಯ ಕೂಟ ಭಾರಿ ಜನಪ್ರಿಯತೆ ಗಳಿಸಿದೆ. ಇದರಿಂದಾಗಿ ಮೊದಲ ಸುತ್ತಿನಲ್ಲೇ ತಬರೆ ಬಹುಮತ ಗಳಿಸುವ ಸಾಧ್ಯತೆ ಇದೆ.

ಬ್ರೆಜಿಲ್, ವೆನೆಜುವೆಲಾ, ಅರ್ಜೆಂಟಿನಾ ಅಧ್ಯಕ್ಷರುಗಳು ತಬರೆಗೆ ತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ. ತಬರೆ ಅಧ್ಯಕ್ಷರಾಗಿ ಆಯ್ಕೆಯಾದರೆ ಈ ಮೂರು ದೇಶಗಳು ರಚಿಸಿರುವ ಸಾಮ್ರಾಜ್ಯಶಾಹಿ-ವಿರೋಧಿ ಮೆರ್ಕೋಸೇರ್ ವಾಣಿಜ್ಯ ಕೂಟಕ್ಕೆ ಉರುಗ್ವೆ ಸೇರಬೇಕು ಎಂದು ಆಹ್ವಾನಿಸಿದ್ದಾರೆ. ಇದು ದಕ್ಷಿಣ ಅಮೆರಿಕದಲ್ಲಿ ಜನ-ಪರ ಆರ್ಥಿಕ ನಿರ್ಧಾರಗಳು ಮಾಡುವ ನಿಟ್ಟಿನಲ್ಲಿ ಉತ್ತಮ ಮುನ್ನಡೆಯಾಗುತ್ತದೆ ಎಂದು ಆಶಿಸಿದ್ದಾರೆ. **ತಬರೆ ಅಧ್ಯಕ್ಷರಾಗಿ ಆಯ್ಕೆಯಾದರೆ ಉರುಗ್ವೆಯ ಮಿಲಿಟರಿ-ಭೂಮಾಲಕ ಆಳುವ ವರ್ಗದ ಸಂರಚನೆಯನ್ನು ಆಮೂಲಾಗ್ರ ಬದಲಾಯಿಸುವ ದೊಡ್ಡ ರಾಜಕೀಯ ಸವಾಲು ಎದುರಿಸಬೇಕಾಗುತ್ತದೆ..ಆದರೆ ಆ ಸವಾಲು ಸ್ವೀಕರಿಂದರೆ ರಾಜಕೀಯ ಬೆಂಬಲ ಅವರಿಗಿರುತ್ತದೆ.** ಒಟ್ಟಾರೆಯಾಗಿ ಜಾಗತಿಕ ಮಹತ್ವದ ಸಾಧ್ಯತೆ ಇದೆ ಉರುಗ್ವೆಯಲ್ಲಿ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH